ಶುಕ್ರವಾರ, ಏಪ್ರಿಲ್ 30, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 120 | ಪುಟ 10

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ

ಮೊದಲ ಲಾಕ್‌ಡೌನ್‌ನಿಂದ ನಿಧಾನವಾಗಿ ಚೇತರಿಸಿಕೊಳ್ಳಲು ಪ್ರಯತ್ನಿಸುತ್ತಿದ್ದ ಚಿತ್ರರಂಗ ಈಗ ಮತ್ತೆ ತತ್ತರಿಸಿದೆ. ಲೈಟ್ಸ್, ಕ್ಯಾಮೆರಾ, ಆ್ಯಕ್ಷನ್... ಇತ್ಯಾದಿ ಕೇಳಲು ಇನ್ನೆಷ್ಟು ದಿನ ಬೇಕಾಗಬಹುದೋ?



ಅಲ್ಲಲ್ಲಿ ಆಲಿಕಲ್ಲು ಸಹಿತ ಮಳೆ 4

ಮೋದಿ ರಾಜೀನಾಮೆಗೆ ಒತ್ತಾಯಿಸಿದ್ದ ಪೋಸ್ಟ್ ಸ್ಥಗಿತ: ಫೇಸ್‌ಬುಕ್ ಸ್ಪಷ್ಟನೆ 7

ಸೆನ್ಸೆಕ್ಸ್	ನಿಫ್ಟಿ	₹/$
49,765 ▲	14,894 ▲	74.07 ▲


ಮತಗಟ್ಟೆ ಸಮೀಕ್ಷೆಗಳ ಸರಾಸರಿ: ಕೇರಳದಲ್ಲಿ ಎಲ್‌ಡಿಎಫ್, ಅಸ್ಸಾಂನಲ್ಲಿ ಬಿಜೆಪಿ ಮರಳಿ ಅಧಿಕಾರಕ್ಕೆ

‘ಬಂಗಾಳಕ್ಕೆ ದೀದಿ, ತಮಿಳುನಾಡಿಗೆ ಸ್ಟಾಲಿನ್’

ಜನತಂತ್ರದ ಹಬ್ಬ 2021


ಪ್ರಜಾವಾಣಿ ವಾರ್ತೆ

ಪಶ್ಚಿಮ ಬಂಗಾಳ




ಸಮೀಕ್ಷೆ ನಡೆಸಿದ ಸಂಸ್ಥೆಗಳು: ಎಬಿಪಿ-ಸಿವೋಟರ್, ರಿಪಬ್ಲಿಕ್ ಟಿವಿ-ಸಿಎನ್‌ಎಕ್ಸ್, ಪಿ-ಮಾರ್ಕ್, ನ್ಯೂಸ್18

ತಮಿಳುನಾಡು




ಸಮೀಕ್ಷೆ ನಡೆಸಿದ ಸಂಸ್ಥೆಗಳು: ರಿಪಬ್ಲಿಕ್ ಟಿವಿ-ಸಿಎನ್‌ಎಕ್ಸ್, ಪಿ-ಮಾರ್ಕ್

ಕೇರಳ




ಸಮೀಕ್ಷೆ ನಡೆಸಿದ ಸಂಸ್ಥೆಗಳು: ಇಂಡಿಯಾ ಟುಡೆ-ಆಕ್ಸಿಸ್ ಮೈ ಇಂಡಿಯಾ, ರಿಪಬ್ಲಿಕ್ ಟಿವಿ-ಸಿಎನ್‌ಎಕ್ಸ್

ಅಸ್ಸಾಂ



ಸಮೀಕ್ಷೆ ನಡೆಸಿದ ಸಂಸ್ಥೆಗಳು: ಎಬಿಪಿ-ಸಿವೋಟರ್, ಪಿ-ಮಾರ್ಕ್, ಇಂಡಿಯಾ ಟುಡೇ-ಆಕ್ಸಿಸ್ ಮೈ ಇಂಡಿಯಾ, ರಿಪಬ್ಲಿಕ್ ಟಿವಿ-ಸಿಎನ್‌ಎಕ್ಸ್

ಪುದುಚೇರಿ



ಸಮೀಕ್ಷೆ ನಡೆಸಿದ ಸಂಸ್ಥೆಗಳು ಎಬಿಪಿ-ಸಿವೋಟರ್, ಟೈಮ್ಸ್ ನೌ, ರಿಪಬ್ಲಿಕ್ ಟಿವಿ- ಸಿಎನ್‌ಎಕ್ಸ್

ಬೆಂಗಳೂರು: ಪಶ್ಚಿಮ ಬಂಗಾಳ, ಅಸ್ಸಾಂ, ತಮಿಳುನಾಡು, ಕೇರಳ ಮತ್ತು ಪುದುಚೇರಿ ವಿಧಾನಸಭೆಗಳ ಮತದಾನ ಪ್ರಕ್ರಿಯೆ ಗುರುವಾರ ಪೂರ್ಣಗೊಂಡಿದೆ. ಅದರ ಬೆನ್ನಿಗೇ ವಿವಿಧ ಮತಗಟ್ಟೆ ಸಮೀಕ್ಷೆಗಳ ಫಲಿತಾಂಶ ಬಹಿರಂಗವಾಗಿವೆ. ಅತ್ಯಂತ ಜಿದ್ದಿನಿಂದ ಚುನಾವಣಾ ಪ್ರಚಾರ ನಡೆದ ಪಶ್ಚಿಮ ಬಂಗಾಳದಲ್ಲಿ ಮಮತಾ ಬ್ಯಾನರ್ಜಿ (ದೀದಿ) ನೇತೃತ್ವದ ಟಿಎಂಸಿ ಮೂರನೇ ಅವಧಿಗೆ ಅಧಿಕಾರ ಉಳಿಸಿಕೊಳ್ಳಲಿದೆ ಎಂಬುದು ಸಮೀಕ್ಷೆಗಳ ಸರಾಸರಿಯಿಂದ ದೊರೆಯುವ ಭವಿಷ್ಯ. ಆದರೆ, ರಿಪಬ್ಲಿಕ್ ಟಿ.ವಿ ನಡೆಸಿದ ಸಮೀಕ್ಷೆಯಲ್ಲಿ ಬಿಜೆಪಿಗೆ ಮುನ್ನಡೆ ದೊರೆಯಬಹುದು ಎಂದು ಅಂದಾಜಿಸಲಾಗಿದೆ.

ಅಸ್ಸಾಂನಲ್ಲಿ ಬಿಜೆಪಿ ಮರಳಿ ಅಧಿಕಾರ ಹಿಡಿಯಲಿದೆ ಎಂಬುದು ಸಮೀಕ್ಷೆಗಳ ಸರಾಸರಿಯ ಅಂದಾಜು. ದಕ್ಷಿಣಕ್ಕೆ ಬಂದರೆ, ತಮಿಳುನಾಡಿನಲ್ಲಿ ಡಿಎಂಕೆ ನೇತೃತ್ವದ ಮೈತ್ರಿಕೂಟಕ್ಕೆ ಅಧಿಕಾರ ಖಚಿತ ಎಂಬುದು ಸರಾಸರಿ ಸಮೀಕ್ಷೆಗಳ ಭವಿಷ್ಯ. ಕೇರಳದಲ್ಲಿ ಎಲ್‌ಡಿಎಫ್-ಯುಡಿಎಫ್ ಪರ್ಯಾಯ ಆಡಳಿತದ ಹಲವು ದಶಕಗಳ ಪ್ರವೃತ್ತಿ ಬದಲಾಗಲಿದೆ ಎಂದು ಸಮೀಕ್ಷೆಗಳು ಹೇಳಿವೆ. ಎಲ್‌ಡಿಎಫ್ ಮರಳಿ ಅಧಿಕಾರಕ್ಕೆ ಬರಲಿದೆ ಎಂದು ಸಮೀಕ್ಷೆಗಳು ಹೇಳಿವೆ. ತಮಿಳುನಾಡಿನಲ್ಲಿ ಡಿಎಂಕೆ ನೇತೃತ್ವದ ಮೈತ್ರಿಕೂಟಕ್ಕೆ ಭಾರಿ ಜಯ ಲಭಿಸಲಿದೆ ಎಂದು ಸಮೀಕ್ಷೆಯು ಅಂದಾಜಿಸಿದೆ. ಪುದುಚೇರಿಯಲ್ಲಿ ಎನ್‌ಆರ್‌ಸಿ ನೇತೃತ್ವದ ಮೈತ್ರಿಕೂಟ ಗೆಲ್ಲಲಿದೆ ಎಂದು ಭವಿಷ್ಯ ಹೇಳಲಾಗಿದೆ. ಈ ಮೈತ್ರಿಕೂಟದಲ್ಲಿ ಬಿಜೆಪಿ ಕೂಡ ಇದೆ.

ಪಶ್ಚಿಮ ಬಂಗಾಳದಲ್ಲಿ ಟಿಎಂಸಿಗೆ 156 ಕ್ಷೇತ್ರಗಳಲ್ಲಿ ಗೆಲುವು ಸಿಗಲಿದೆ. ಬಿಜೆಪಿ 121 ಕ್ಷೇತ್ರಗಳಲ್ಲಿ ಗೆಲ್ಲಬಹುದು ಎಂದು ಅಂದಾಜಿಸಲಾಗಿದೆ. ಎಡರಂಗ–ಕಾಂಗ್ರೆಸ್–ಇಂಡಿಯನ್ ಸೆಕ್ಯುಲರ್ ಫ್ರಂಟ್ ಮೈತ್ರಿಕೂಟವು 16 ಕ್ಷೇತ್ರಗಳನ್ನಷ್ಟೇ ಪಡೆಯಬಹುದು ಎಂದು ಅಂದಾಜಿಸಲಾಗಿದೆ. ಸರಳ ಬಹುಮತಕ್ಕೆ 148 ಕ್ಷೇತ್ರಗಳಲ್ಲಿ ಗೆಲ್ಲಬೇಕಿದೆ. ಹಾಗಾಗಿ, ಮಮತಾ ಬ್ಯಾನರ್ಜಿ ಅವರಿಗೆ ಸರಳ ಬಹುಮತಕ್ಕೆ ತೊಡಕಾಗದು ಎಂಬುದು ಸಮೀಕ್ಷೆಗಳ ಭವಿಷ್ಯವಾಗಿದೆ.

ಅಸ್ಸಾಂನಲ್ಲಿ ಬಿಜೆಪಿ ನೇತೃತ್ವದ ಮೈತ್ರಿಕೂಟಕ್ಕೆ 76 ಕ್ಷೇತ್ರಗಳಲ್ಲಿ ಗೆಲುವು ದೊರೆತರೆ, ಕಾಂಗ್ರೆಸ್ ನೇತೃತ್ವದ ಮೈತ್ರಿಕೂಟಕ್ಕೆ 49 ಕ್ಷೇತ್ರಗಳಲ್ಲಿ ಗೆಲುವು ದೊರೆಯಲಿದೆ ಎಂದು ಈ ಸಮೀಕ್ಷೆಗಳು ಅಂದಾಜಿಸಿವೆ. ಇಲ್ಲಿ ಸರಳ ಬಹುಮತಕ್ಕೆ 64 ಕ್ಷೇತ್ರಗಳಲ್ಲಿ ಗೆಲುವು ಅಗತ್ಯ.

ಕೇರಳದಲ್ಲಿ ಸಿಪಿಎಂ ನೇತೃತ್ವದ ಎಲ್‌ಡಿಎಫ್ 87 ಕ್ಷೇತ್ರಗಳಲ್ಲಿ ಮತ್ತು ಕಾಂಗ್ರೆಸ್ ನೇತೃತ್ವದ ಯುಡಿಎಫ್ 51 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಬಹುದು.

9ನೇ ಪುಟ ನೋಡಿ

‘ಕೇರಳದಲ್ಲಿ ಬಿಜೆಪಿಗಿಲ್ಲ ಮುನ್ನಡೆ’

ಕೇರಳದಲ್ಲಿ ಪ್ರಮುಖ ಪಕ್ಷವಾಗಿ ಗುರುತಿಸಿಕೊಳ್ಳಬೇಕು ಎಂದು ಬಿಜೆಪಿ ಭಾರಿ ಪ್ರಯತ್ನ ಮಾಡಿದೆ. ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ, ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಸೇರಿ ಹಲವರು ಇಲ್ಲಿ ಹಲವು ಸುತ್ತು ಪ್ರಚಾರ ನಡೆಸಿದ್ದರು. ಮೆಟ್ರೊಮ್ಯಾನ್ ಎಂದೇ ಖ್ಯಾತರಾಗಿರುವ ತಂತ್ರಜ್ಞ ಇ. ಶ್ರೀಧರನ್ ಅವರನ್ನು ಪಕ್ಷಕ್ಕೆ ಸೇರಿಸಿಕೊಂಡು ಕಣಕ್ಕೆ ಇಳಿಸಿದೆ. ರಾಜ್ಯ ಸಭಾ ಸದಸ್ಯ ಮತ್ತು ಸಿನಿಮಾ ನಟ ಸುರೇಶ್ ಗೋಪಿ ಅವರನ್ನೂ ಅಭ್ಯರ್ಥಿಯನ್ನಾಗಿಸಿದೆ. ಆದರೆ, ಈ ಯಾವುದೂ ಫಲ ಕೊಡದು ಎಂದು ಸಮೀಕ್ಷೆಗಳು ಅಂದಾಜಿಸಿವೆ. ಸಮೀಕ್ಷೆಗಳ ಪ್ರಕಾರ ಇಲ್ಲಿ ಬಿಜೆಪಿಗೆ ಎರಡು ಕ್ಷೇತ್ರಗಳಲ್ಲಿ ಮಾತ್ರ ಗೆಲುವು ದೊರೆಯಲಿದೆ. ಕಳೆದ ಚುನಾವಣೆಯಲ್ಲಿ ತಿರುವನಂತಪುರದ ನೇಮಮ್ ಕ್ಷೇತ್ರದಲ್ಲಿ ಗೆಲ್ಲುವುದು ಮಾತ್ರ ಬಿಜೆಪಿಗೆ ಸಾಧ್ಯವಾಗಿತ್ತು.

‘ಕಮಲ್‌ಹಾಸನ್ ಸದ್ದಿಲ್ಲ’

ಚುನಾವಣಾ ಪ್ರಚಾರ ಸಂದರ್ಭದಲ್ಲಿ ಭಾರಿ ಸದ್ದು ಮಾಡಿದ್ದ ನಟ ಕಮಲ್‌ಹಾಸನ್ ಅವರ ಮಕ್ಕಳ್ ನೀಧಿ ಮಯ್ಯಂ ಪಕ್ಷವು ಚುನಾವಣೆಯಲ್ಲಿ ಯಾವುದೇ ಪರಿಣಾಮ ಉಂಟು ಮಾಡುವಲ್ಲಿ ವಿಫಲವಾಗಿದೆ ಎಂದು ಸಮೀಕ್ಷೆಗಳು ಅಂದಾಜಿಸಿವೆ.

ಸಮೀಕ್ಷೆಗಳಲ್ಲಿ ಅವರ ಪಕ್ಷದ ಪ್ರಸ್ತಾಪವೇ ಇಲ್ಲ. ‘ಇತರರು’ ಒಂದು ಕ್ಷೇತ್ರದಲ್ಲಿ ಗೆಲ್ಲಬಹುದು ಎಂದು ಹೇಳಲಾಗಿದೆ. ಕಮಲ್ ಅವರು ಕೊಯಮತ್ತೂರು ದಕ್ಷಿಣ ಕ್ಷೇತ್ರದಿಂದ ಸ್ಪರ್ಧಿಸಿದ್ದಾರೆ.

ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಜಯಲಲಿತಾ ಅವರ ಆಪ್ತೆ, ವಿ.ಕೆ. ಶಶಿಕಲಾ ಅವರ ಸೋದರಳಿಯ ಟಿ.ಟಿ.ವಿ. ದಿನಕರನ್ ನೇತೃತ್ವದ ಪಕ್ಷವು ನಾಲ್ಕು ಸ್ಥಾನ ಗೆಲ್ಲಬಹುದು ಎಂದು ಅಂದಾಜಿಸಲಾಗಿದೆ.

ಸಮೀಕ್ಷೆ ವಿವರ 7

ರೆಮ್‌ಡಿಸಿವಿರ್ ಕೃತಕ ಅಭಾವಕ್ಕೆ ಅವಕಾಶ ಕೊಡಬೇಡಿ: ಸಿ.ಎಂ

ಪ್ರಜಾವಾಣಿ ವಾರ್ತೆ



ಕೋವಿಡ್ ಪರಿಹಾರ ನಿಧಿಗೆ ಸಚಿವರು ಒಂದು ವರ್ಷದ ಹಾಗೂ ಶಾಸಕರು ಒಂದು ತಿಂಗಳ ವೇತನವನ್ನು ದೇಣಿಗೆ ನೀಡಲು ಮುಂದಾಗಬೇಕು

ಬಿ.ಎಸ್. ಯಡಿಯೂರಪ್ಪ, ಮುಖ್ಯಮಂತ್ರಿ

ಬೆಂಗಳೂರು: ‘ಕೋವಿಡ್ ರೋಗಿಗಳ ಪೈಕಿ, ಅಗತ್ಯ ಇರುವವರಿಗೆ ಮಾತ್ರ ರೆಮ್‌ಡಿಸಿವಿರ್ ಚುಚ್ಚುಮದ್ದು ಮತ್ತು ಆಮ್ಲಜನಕ ಸಹಿತ ಹಾಸಿಗೆ ಸೌಲಭ್ಯ ಒದಗಿಸಬೇಕು. ಕೃತಕ ಅಭಾವ ಸೃಷ್ಟಿ ಆಗದಂತೆ ಎಚ್ಚರಿಕೆ ವಹಿಸಬೇಕು’ ಎಂದು ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಸೂಚಿಸಿದರು.

ಕೋವಿಡ್ ಪರಿಸ್ಥಿತಿ ಅವಲೋಕಿಸಲು ಎಲ್ಲ ಜಿಲ್ಲೆಗಳ ಉಸ್ತುವಾರಿ ಸಚಿವರು, ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಪೊಲೀಸ್ ವರಿಷ್ಠಾಧಿಕಾರಿಗಳ ಜೊತೆ ಗುರುವಾರ ಅವರು ವಿಡಿಯೊ ಸಂವಾದ ನಡೆಸಿದರು.

‘ಪ್ರತಿ ಆಸ್ಪತ್ರೆಯಲ್ಲಿ ರೆಮ್‌ಡಿಸಿವರ್ ಔಷಧ ಮತ್ತು ಆಮ್ಲಜನಕ ಸಂಗ್ರಹದ ಬಗ್ಗೆ ಲೆಕ್ಕ ಪರಿಶೋಧನೆ ಆಗಬೇಕು. ವೆಂಟಿಲೇಟರ್ ಹಾಸಿಗೆಗಳನ್ನು ಕೂಡಾ ವಿವೇಚನೆಯಿಂದ ಬಳಸಬೇಕು. ಎಲ್ಲ ಆಸ್ಪತ್ರೆಗಳಿಗೆ ಆಮ್ಲಜನಕ ಕೊರತೆಯಾದರೆ ಅಥವಾ ತುರ್ತು ಸಂದರ್ಭದಲ್ಲಿ ನೆರೆಯ ಜಿಲ್ಲೆಯಿಂದ ಪಡೆದುಕೊಳ್ಳುವಂತೆ ಪರಸ್ಪರ ಸಹಕಾರದಿಂದ ಕಾರ್ಯನಿರ್ವಹಿಸಬೇಕು’ ಎಂದು ಸಲಹೆ ನೀಡಿದರು.

‘ಕೋವಿಡ್ ಸೋಂಕು ತಡೆಯಲು ಅಗತ್ಯ ಕ್ರಮಗಳನ್ನು ಆದ್ಯತೆಯ ಮೇಲೆ ಕೈಗೊಳ್ಳಬೇಕು. ರೋಗಲಕ್ಷಣ ಇದ್ದವರನ್ನು ಮಾತ್ರ ಪರೀಕ್ಷೆಗೆ ಒಳಪಡಿಸಿ, 24 ಗಂಟೆಗಳಲ್ಲಿ ಫಲಿತಾಂಶ ಕೊಡಬೇಕು. ಬಾಕಿ ಇರುವ ಪರೀಕ್ಷೆಗಳನ್ನು ಕೂಡಲೇ ಪೂರ್ಣಗೊಳಿಸಬೇಕು’ ಎಂದು ಸೂಚಿಸಿದರು.

‘ಕೆಲವು ಜಿಲ್ಲೆಗಳಲ್ಲಿ ಇನ್ನೂ ಕೋವಿಡ್ ಕೇರ್ ಸೆಂಟರ್‌ಗಳನ್ನು ತೆರೆದಿಲ್ಲ. ಅಂಥ ಜಿಲ್ಲೆಗಳಲ್ಲಿ ಆದ್ಯತೆಯ ಮೇರೆಗೆ ತೆರೆಯಬೇಕು. ಎಲ್ಲ ಜಿಲ್ಲಾ ಕೇಂದ್ರ ಮತ್ತು ತಾಲ್ಲೂಕು ಕೇಂದ್ರದಲ್ಲಿ ಸೆಂಟರ್‌ಗಳನ್ನು ತೆರೆಯಬೇಕು. ಈ ಉದ್ದೇಶಕ್ಕೆ ವಸತಿ ಶಾಲೆಗಳು, ಹಾಸ್ಟೆಲ್‌ಗಳನ್ನು ಬಳಸಿಕೊಳ್ಳಬಹುದು. ಗ್ರಾಮ ಪಂಚಾಯಿತಿ ಹಾಗೂ ತಾಲ್ಲೂಕುಮಟ್ಟದಲ್ಲಿ ಕಾರ್ಯಪಡೆ ರಚಿಸಿ, ರೋಗಿಗಳ ಮೇಲೆ ಕಾಳಜಿ ವಹಿಸಬೇಕು’ ಎಂದೂ ಮುಖ್ಯಮಂತ್ರಿ ನಿರ್ದೇಶನ ನೀಡಿದರು.

‘ಕೋವಿಡ್ ನಿರ್ವಹಣೆಗಾಗಿ ಜಿಲ್ಲಾಧಿಕಾರಿಗಳಿಗೆ ಈಗಾಗಲೇ ಹಣ ಬಿಡುಗಡೆ ಮಾಡಲಾಗಿದೆ. ಸರ್ಕಾರದ ಮಾರ್ಗಸೂಚಿಗಳನ್ನು ಉಲ್ಲಂಘಿಸಿದವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ತೆಗೆದುಕೊಳ್ಳಬೇಕು’ ಎಂದರು.

ರಾಜ್ಯ ಕೋವಿಡ್ ಅಂಕಿ–ಅಂಶ

14,74,846 ▲	ಒಟ್ಟು ಸೋಂಕಿತರು (14,39,822 ನಿನ್ನೆಯ ವಿವರ)
3,49,496 ▲	ಸಕ್ರಿಯ ಪ್ರಕರಣಗಳು
11,10,025 ▲	ಗುಣಮುಖರಾದವರು
15,306 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	35,024	▼
ಗುಣಮುಖ	14,142	▲
ಸಾವು	270	▲
2,431 ಐಸಿಯುನಲ್ಲಿ ಇರುವವರು		▲

ಆಧಾರ: ರಾಜ್ಯ ಆರೋಗ್ಯ ಇಲಾಖೆ ಪ್ರಜಾವಾಣಿ ಗ್ರಾಫಿಕ್ಸ್

ಹಾಲು ಮಾರಾಟದ ಅವಧಿ ವಿಸ್ತರಣೆ

ಬೆಂಗಳೂರು: ಲಾಕ್‌ಡೌನ್ ಅವಧಿಯಲ್ಲಿ ಕರ್ನಾಟಕ ಹಾಲು ಒಕ್ಕೂಟದ ನಂದಿನಿ ಹಾಲು ಮಾರಾಟ ಮಳಿಗೆಗಳನ್ನು ರಾತ್ರಿ 8 ಗಂಟೆಯವರೆಗೂ ತೆರೆಯಲು ಅವಕಾಶ ಕಲ್ಪಿಸಿ ಗುರುವಾರ ಆದೇಶ ಹೊರಡಿಸಲಾಗಿದೆ.

ಹಾಲಿನ ಮಳಿಗೆಗಳನ್ನು ಕೂಡ ಬೆಳಿಗ್ಗೆ 6ರಿಂದ 10ರವರೆಗೆ ಮಾತ್ರ ತೆರೆಯುವಂತೆ ಏಪ್ರಿಲ್ 26ರಂದು ಹೊರಡಿಸಿದ್ದ ಮಾರ್ಗಸೂಚಿಯಲ್ಲಿ ತಿಳಿಸಲಾಗಿತ್ತು.

ಗುರುವಾರ ಪರಿಷ್ಕೃತ ಆದೇಶ ಹೊರಡಿಸಿರುವ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಯೂ ಆಗಿರುವ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ್ ಪ್ರಸಾದ್, ‘ಹಾಲಿನ ಮಳಿಗೆಗಳು ಬೆಳಿಗ್ಗೆ 6ರಿಂದ ರಾತ್ರಿ 8ರವರೆಗೂ ಕಾರ್ಯನಿರ್ವಹಿಸಬಹುದು’ ಎಂದು ತಿಳಿಸಿದ್ದಾರೆ.

ಗಾಳಿಯಲ್ಲಿ ವೈರಾಣು: ನಾವೆಷ್ಟು ಸುರಕ್ಷಿತ?

• ಎಸ್ ರವಿಪ್ರಕಾಶ್

ಬೆಂಗಳೂರು: ಕೊರೊನಾ ವೈರಾಣು ಗಾಳಿಯಲ್ಲೂ ತೇಲುತ್ತವೆ ಎಂದು ಇತ್ತೀಚಿನ ವೈಜ್ಞಾನಿಕ ಸಂಶೋಧನೆಯೊಂದು ಪ್ರತಿಪಾದಿಸಿದೆ. ಇದರಿಂದಾಗಿ ಮನೆ, ಕಟ್ಟಡ, ಕೋವಿಡ್ ಆಸ್ಪತ್ರೆಗಳು, ಕೋವಿಡ್ ಆರೈಕೆ ಕೇಂದ್ರಗಳ ಸುರಕ್ಷತೆಯ ಬಗ್ಗೆಯೇ ಈಗ ಸಂದೇಹ ಮೂಡಲಾರಂಭಿಸಿದೆ.

ವಿಶ್ವ ಆರೋಗ್ಯ ಸಂಸ್ಥೆ ಪ್ರಾಯೋಜಿತ ‘ಸಾರ್ಸ್ ಕೋವಿಡ್–2’ ವೈರಾಣು ಕುರಿತು ವೈಜ್ಞಾನಿಕ ಅಧ್ಯಯನ ನಡೆದಿದೆ. ಅಮೆರಿಕಾ, ಯುಕೆ, ಕೆನಡಾದ ಪ್ರತಿಷ್ಠಿತ ಸಂಶೋಧನಾ ಸಂಸ್ಥೆಗಳು ಈ ಅಧ್ಯಯನದಲ್ಲಿ ಭಾಗಿಯಾಗಿದ್ದು, ದ ಲಾನ್ಸೆಟ್ ಸೇರಿ ವಿಶ್ವದ ಪ್ರತಿಷ್ಠಿತ ಮೆಡಿಕಲ್ ಜರ್ನಲ್‌ಗಳಲ್ಲಿ ಇದರ ವರದಿ ಪ್ರಕಟವಾಗಿದೆ.

ಅಧ್ಯಯನದ ಪ್ರಕಾರ, ‘ಆಸ್ಪತ್ರೆ, ಪ್ರಯೋಗಾಲಯಗಳು, ಸ್ಕ್ಯಾನಿಂಗ್ ಕೇಂದ್ರಗಳೂ ತೇಲುವ ವೈರಾಣು ಸೋಂಕಿನಿಂದ ಹೊರತಾಗಿಲ್ಲ. ಸಾರ್ವಜನಿಕ ಸ್ಥಳಗಳು, ಮನೆಗಳು, ಅಪಾರ್ಟ್‌ಮೆಂಟ್‌ಗಳಲ್ಲಿರುವ ಜನರೂ ಈ ವೈರಸ್‌ನಿಂದ ಬಚಾವಾಗುವುದು ಕಷ್ಟವಾಗಿದೆ’.

ಸೋಂಕಿತ ವ್ಯಕ್ತಿ ಕೆಮ್ಮಿದಾಗ ಅಥವಾ ಸೀನಿದಾಗ ಹೊರಬೀಳುವ ಹನಿಗಳಲ್ಲಿ ಈ ವೈರಾಣುಗಳು ಇರುತ್ತವೆ. ಅವು ಗಾಳಿಯಲ್ಲಿ ತೇಲುವುದಿಲ್ಲ ಎಂದೇ ಭಾವಿಸಲಾಗಿತ್ತು. ಆದರೆ, ಹೊಸ ಅಧ್ಯಯನ ಪ್ರಕಾರ, ಈ ವೈರಾಣುಗಳು ಗಾಳಿಯಲ್ಲೂ ತೇಲುತ್ತವೆ. ಸಕ್ರಿಯ ವೈರಾಣುಗಳ ಜೀವಿತಾವಧಿ 3 ಗಂಟೆಗಳು. ಸೋಂಕಿತ ವ್ಯಕ್ತಿ ಕೆಮ್ಮಿದರೆ, ಸೀನಿದರೆ ಮಾತ್ರವಲ್ಲ, ಮಾತನಾಡಿದರೆ, ಯಾರ ಮುಂದಾದರೂ ಕೂಗಾಡಿದರೆ ಅಥವಾ ಹಾಡಿದರೂ ವೈರಾಣುಗಳು ಹೊಮ್ಮುತ್ತವೆ ಎನ್ನುವುದು ಅಧ್ಯಯನದ ಸಾರಾಂಶ.

ವೈರಾಣುಗಳು ಈ ಮೊದಲು ಭಾವಿಸಿದ್ದಕ್ಕಿಂತಲೂ ಅತ್ಯಂತ ಸೂಕ್ಷ್ಮವಾಗಿದ್ದು, ಮಾಸ್ಕ್ ಧರಿಸಿದ್ದರೂ ಅದರ ಸಂದಿ ಮೂಲೆಯಿಂದಲೂ ಪ್ರವೇಶಿಸುವ ಚಾಕಚಕ್ಯತೆ ಹೊಂದಿವೆ. ಇವು ಬಾಯಿ, ಮೂಗು, ಕಣ್ಣುಗಳ ಮೂಲಕ ದೇಹದೊಳಗೆ ಪ್ರವೇಶಿಸಬಲ್ಲವು. ಆದ್ದರಿಂದ, ಹೊರಗೆ ಹೋಗುವಾಗ ಮಾತ್ರವಲ್ಲ ಮನೆಯ ಒಳಗೆ ಇದ್ದಾಗಲೂ ಮಾಸ್ಕ್ ಧರಿಸಬೇಕು. ಹೊರಗೆ ಹೋಗುವಾಗ ಡಬ್ಬಲ್ ಮಾಸ್ಕ್ ಹಾಕಿಕೊಳ್ಳುವುದು ಸೂಕ್ತ ಎನ್ನುತ್ತಾರೆ ವಿಜ್ಞಾನಿಗಳಾದ ಹೆನಗನ್ ಸಿ ಮತ್ತು ಸ್ಪೆನ್ಸರ್.

ಮನೆ, ಕಚೇರಿಗಳು ಅಥವಾ ಇತರ ಕಟ್ಟಡಗಳ ಒಳಗೆ ಸೋಂಕಿತ ವ್ಯಕ್ತಿಯಿಂದ ಹರಡುವ (ಗಾಳಿಯಲ್ಲಿ ತೇಲುವ) ವೈರಾಣುಗಳಿಂದ ರಕ್ಷಣೆ ಪಡೆಯಲು ಕಟ್ಟುನಿಟ್ಟಾದ ವ್ಯವಸ್ಥೆ ಮಾಡಿಕೊಳ್ಳಬೇಕು. ಮಾಸ್ಕ್ ಹಾಕಿಕೊಳ್ಳಬೇಕು, ಸ್ವಚ್ಛ ಗಾಳಿ ಸರಾಗವಾಗಿ ಹರಿದಾಡಬೇಕು (ಹವಾ ನಿಯಂತ್ರಿತವಲ್ಲ), ಏರ್ ಫಿಲ್ಟರ್ ಇಟ್ಟುಕೊಳ್ಳಬೇಕು. ವಿಶೇಷವಾಗಿ ಮುಂಚೂಣಿಯಲ್ಲಿರುವ ಆರೋಗ್ಯಕ್ಕೆ ಸಂಬಂಧಿಸಿದ ಕೋವಿಡ್ ವಾರಿಯರ್ಸ್‌ಗಳು ಉನ್ನತ ಗುಣಮಟ್ಟದ ಮಾಸ್ಕ್‌ಗಳನ್ನೇ ಧರಿಸಿಕೊಳ್ಳಬೇಕು.

ಸಾಮಾನ್ಯವಾಗಿ ದೊಡ್ಡ ಸಮಾವೇಶಗಳು, ಮದುವೆಗಳು, ಸಭೆಗಳು ಮಾತ್ರ ಅತಿಹೆಚ್ಚು ಸೋಂಕು ಹರಡುವ ಸ್ಥಳಗಳೆಂದು ಎಂದು ಭಾವಿಸಲಾಗಿತ್ತು. ಆದರೆ, ಕೊಠಡಿಗಳಲ್ಲಿ ಸಂಭಾಷಣೆ ನಡೆಸಿದಾಗ, ಸಂಗೀತ ಕಚೇರಿಗಳು, ಕ್ರೂಸ್ ಶಿಪ್, ಪ್ರಾಣಿ ವಧಾಗಾರ, ಹೋಂ ಕೇರ್ ಸೆಂಟರ್, ಕಚೇರಿಗಳಲ್ಲೂ ಸೂಪರ್ ಸ್ಪ್ರೆಡ್ ಆಗುತ್ತವೆ. ಆರು ಅಡಿಗಿಂತ ಹಲವು ಪಟ್ಟು ದೂರ ಇದ್ದವರಿಗೂ ಸೋಂಕು ತಗುಲಿದೆ ಎನ್ನುತ್ತಾರೆ ಹೆನಗನ್.

ಈ ಹೊಸ ಮಾಹಿತಿಯಿಂದ ಕೋವಿಡ್ ಆಸ್ಪತ್ರೆಗಳು, ಕೋವಿಡ್ ಕೇರ್ ಸೆಂಟರ್‌ಗಳು, ಪ್ರಯೋಗಾಲಯಗಳನ್ನು ಹೇಗೆ ಇನ್ನಷ್ಟು ಸುರಕ್ಷಿತಗೊಳಿಸಬೇಕು ಎಂಬ ಬಗ್ಗೆ ಕೋವಿಡ್ ತಜ್ಞರು ಚಿಂತನೆ ನಡೆಸಿದ್ದಾರೆ. ಏಕೆಂದರೆ ಈ ಅಧ್ಯಯನದ ಪ್ರಕಾರ, ಆಸ್ಪತ್ರೆಗಳ ಏರ್‌ಫಿಲ್ಟರ್‌ಗಳಲ್ಲಿ ಮತ್ತು ಕಟ್ಟಡಗಳ ಗಾಳಿ ಹೊರ ಹೋಗುವ ಕೊಳವೆಗಳಲ್ಲಿ ವೈರಸ್‌ಗಳು ಪತ್ತೆಯಾಗಿದ್ದವು.

ಇದನ್ನು (ಗಾಳಿಯಲ್ಲಿ ವೈರಸ್ ತೇಲುವಿಕೆ) ದೃಢಪಡಿಸಲು ಇನ್ನಷ್ಟು ಅಧ್ಯಯನಗಳು ನಡೆಯಬೇಕು ಎಂದೂ ವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದಾರೆ.

ಸಿ.ಟಿ ಸ್ಕ್ಯಾನ್ ಕೇಂದ್ರಗಳೂ ‘ಹಂಚುತ್ತವೆ’

ಕೋವಿಡ್ ಪರೀಕ್ಷೆಗೆ ಆರ್‌ಟಿಪಿಸಿಆರ್ ಪರೀಕ್ಷೆಯ ಬಳಿಕವೂ ಹೆಚ್ಚಿನ ದೃಢೀಕರಣಕ್ಕೆ ಸಿ.ಟಿ ಸ್ಕ್ಯಾನ್ ಮತ್ತು ಕೋವಿಡ್ ಪ್ಯಾನಲ್ ಪರೀಕ್ಷೆ ಮಾಡಿಸುವವರ ಸಂಖ್ಯೆಯೂ ಹೆಚ್ಚಾಗಿದೆ. ಸಿ.ಟಿ ಸ್ಕ್ಯಾನ್ ಕೊಠಡಿ ಮತ್ತು ಯಂತ್ರಗಳನ್ನು ಸ್ಯಾನಿಟೈಸ್ ಮಾಡದಿದ್ದರೆ ಕೊರೊನಾ ಸೋಂಕು ಹರಡುತ್ತದೆ.

ಪರೀಕ್ಷೆಗೆ ಜನ ಮುಗಿ ಬೀಳುತ್ತಿರುವುದರಿಂದ ಒಬ್ಬ ವ್ಯಕ್ತಿಯ ಪರೀಕ್ಷೆಯ ಬಳಿಕ ಸ್ಯಾನಿಟೈಸ್ ಮತ್ತಿತರ ಸುರಕ್ಷಾ ಕ್ರಮಗಳನ್ನು ಕೈಗೊಂಡು ಮತ್ತೊಬ್ಬ ವ್ಯಕ್ತಿಯನ್ನು ಪರೀಕ್ಷೆಗೆ ಒಳಪಡಿಸುತ್ತಿಲ್ಲ. ಇದರಿಂದಾಗಿ ಸೋಂಕು ಹರಡುತ್ತಿದೆ ಎನ್ನುತ್ತಾರೆ ವೈದ್ಯರು.



ಕೋವಿಡ್ ಪರೀಕ್ಷೆಗೆ ಪ್ರತ್ಯೇಕ ಸಿ.ಟಿ.ಸ್ಕ್ಯಾನ್ ಯಂತ್ರ ಇಡುವುದು ಸೂಕ್ತ. ಇತರ ರೋಗ ಲಕ್ಷಣ ಇದ್ದವರಿಗೂ ಒಂದೇ ಯಂತ್ರದಲ್ಲಿ ಪರೀಕ್ಷೆ ನಡೆಸಿದರೆ, ಕೋವಿಡ್ ಇಲ್ಲದವರಿಗೂ ಸೋಂಕು ತಗಲುತ್ತದೆ ಎನ್ನುತ್ತಾರೆ ಹಿರಿಯ ಲ್ಯಾಬ್ ಟೆಕ್ನಿಷಿಯನ್ ಸದಾನಂದ ಪೈ.

ಕೋವ್ಯಾಕ್ಸಿನ್ ದರ ₹ 200 ಕಡಿತ

ನವದೆಹಲಿ: ರಾಜ್ಯ ಸರ್ಕಾರಗಳಿಗೆ ನಿಗದಿಪಡಿಸಲಾದ ‘ಕೋವ್ಯಾಕ್ಸಿನ್’ ಲಸಿಕೆಯ ಪ್ರತಿ ಡೋಸ್‌ನ ದರವನ್ನು ₹ 200 ಕಡಿತಗೊಳಿಸಲು ಭಾರತ್ ಬಯೋಟೆಕ್ ಗುರುವಾರ ನಿರ್ಧರಿಸಿದೆ.

ಕೋವ್ಯಾಕ್ಸಿನ್ ಲಸಿಕೆಯ ಪ್ರತಿ ಡೋಸ್‌ಗೆ ರಾಜ್ಯಗಳಿಗೆ ₹600 ಹಾಗೂ ಖಾಸಗಿ ಆಸ್ಪತ್ರೆಗಳಿಗೆ ₹ 1,200 ದರ ನಿಗದಿಪಡಿಸಲಾಗಿತ್ತು. ಈಗ ಅದನ್ನು ₹ 400ಕ್ಕೆ ಇಳಿಸಲಾಗಿದೆ.

ಸೀರಂ ಇನ್‌ಸ್ಟಿಟ್ಯೂಟ್ ಲಸಿಕೆಯ ದರವನ್ನು ₹100 ಕಡಿತಗೊಳಿಸಿದ ಮರುದಿನವೇ ಭಾರತ್ ಬಯೋಟೆಕ್ ಈ ನಿರ್ಧಾರ ತೆಗೆದುಕೊಂಡಿದೆ.

‘ಆರೋಗ್ಯ ವ್ಯವಸ್ಥೆಯಲ್ಲಿನ ಅಗಾಧ ಸವಾಲುಗಳನ್ನು ಮನಗಂಡು, ದರ ಕಡಿತಗೊಳಿಸಲಾಗಿದೆ’ ಎಂದು ಭಾರತ್ ಬಯೋಟೆಕ್‌ನ ವ್ಯವಸ್ಥಾಪಕ ನಿರ್ದೇಶಕ ಡಾ. ಕೃಷ್ಣ ಎಲ್ಲಾ ತಿಳಿಸಿದ್ದಾರೆ.

ಲಸಿಕೆ ದರಗಳ ಬಗ್ಗೆ ರಾಜಕೀಯ ಪಕ್ಷಗಳು ಹಾಗೂ ವಿವಿಧ ವಲಯಗಳಿಂದ ಟೀಕೆಗಳು ವ್ಯಕ್ತವಾಗಿದ್ದವು. ಏಕರೂಪದ ದರ ನಿಗದಿಪಡಿಸಬೇಕು ಎಂದು ರಾಜಕೀಯ ಪಕ್ಷಗಳು ಒತ್ತಾಯಿಸಿದ್ದವು.

ಚಿನಕುರಳಿ

ಪ್ರಕಾಶ್ ಶೆಟ್ಟಿ




ಕೋವಿಡ್ ಎದುರಿಸಲು ಸಜ್ಜಾಗದ ಸರ್ಕಾರ: ಹೈಕೋರ್ಟ್ ತರಾಟೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೆಮ್‌ಡಿಸಿವಿರ್ ಮತ್ತು ಆಮ್ಲಜನಕ ಪ್ರಮಾಣ ಹೆಚ್ಚಿಸುವಂತೆ ರಾಜ್ಯ ಸರ್ಕಾರ ಸಲ್ಲಿಸುವ ಬೇಡಿಕೆಗೆ ಕೂಡಲೇ ಸ್ಪಂದಿಸುವಂತೆ ಹೈಕೋರ್ಟ್ ಗುರುವಾರ ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಿದೆ.

ಕೋವಿಡ್ ಪ್ರಕರಣಗಳ ಕುರಿತ ಅರ್ಜಿಗಳ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ಮತ್ತು ನ್ಯಾಯಮೂರ್ತಿ ಅರವಿಂದಕುಮಾರ್ ಅವರನ್ನು ಒಳಗೊಂಡ ವಿಶೇಷ ವಿಭಾಗೀಯದ ಪೀಠ, ಕೋವಿಡ್ ಎರಡನೇ ಅಲೆ ಬಗ್ಗೆ ಮಾಹಿತಿ ಇದ್ದರೂ ಸಜ್ಜಾಗದ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದೆ. ಹಾಸಿಗೆಗಳ ಅವಶ್ಯಕತೆ ಮತ್ತು ಸಾಮರ್ಥ್ಯ ಹೆಚ್ಚಿಸಲು ಕೈಗೊಂಡ ಕ್ರಮಗಳ ಬಗ್ಗೆ ವರದಿ ಸಲ್ಲಿಸುವಂತೆಯೂ ತಿಳಿಸಿದೆ.



ಹೆಚ್ಚುತ್ತಿರುವ ಕೋವಿಡ್ ಪ್ರಕರಣಗಳನ್ನು ಆಧರಿಸಿ ಸಾರ್ವಜನಿಕ ಆಸ್ಪತ್ರೆಗಳಿಗೆ ಅಗತ್ಯ ಇರುವ ರೆಮ್‌ಡಿಸಿವಿರ್ ಚುಚ್ಚುಮದ್ದು ಬಗ್ಗೆ ಅಂದಾಜು ಪಟ್ಟಿ ಸಲ್ಲಿಸಬೇಕು. ಗಂಭೀರ ಪರಿಸ್ಥಿತಿ ಪರಿಗಣಿಸಿ ಕರ್ನಾಟಕದ ಮನವಿ ಪುರಸ್ಕರಿಸಬೇಕು ಎಂದು ಕೇಂದ್ರ ಸರ್ಕಾರಕ್ಕೆ ತಿಳಿಸಿತು.

ಬೆಂಗಳೂರು ನಗರಕ್ಕೇ ದಿನಕ್ಕೆ 10 ಸಾವಿರ ವಯಲ್ ರೆಮ್‌ಡಿಸಿವಿರ್ ಚುಚ್ಚುಮದ್ದು ಅಗತ್ಯವಿದೆ ಎಂದು ಫನಾ ಅಧ್ಯಕ್ಷ ಡಾ. ಪ್ರಸನ್ನ ತಿಳಿಸಿದರು.

ರಾಜ್ಯದಲ್ಲಿ 821 ಟನ್ ಆಮ್ಲಜನಕ ಉತ್ಪಾದನೆ ಆಗುತ್ತಿದ್ದು, ದಿನಕ್ಕೆ 600 ಟನ್ ಕೊರತೆ ಇದೆ. ಮುಂದಿನ ಏಳು ದಿನಗಳಿಗೆ ಅಗತ್ಯ ಇರುವ ಆಮ್ಲಜನಕದ ಬಗ್ಗೆ ಕೇಂದ್ರ ಸರ್ಕಾರಕ್ಕೆ ಕೋರಿಕೆ ಸಲ್ಲಿಸುವಂತೆ ಸರ್ಕಾರಕ್ಕೆ ಪೀಠ ನಿರ್ದೇಶನ ನೀಡಿತು.

ಆಮ್ಲಜನಕ ಸಹಿತ ಹಾಸಿಗೆಗಳ ಸಂಖ್ಯೆ ಹೆಚ್ಚಿಸುವಂತೆ ಪೀಠವು ಹಿರಿಯ ಅಧಿಕಾರಿಗಳಿಗೆ ನಿರ್ದೇಶನ ನೀಡಿತು. ಮುಂದಿನ ವಿಚಾರಣೆ ದಿನಾಂಕವಾದ ಮೇ 5ರಂದು ರೆಮ್‌ಡಿಸಿವಿರ್ ಮತ್ತು ಆಮ್ಲಜನಕ ಪ್ರಮಾಣವನ್ನು ಹೆಚ್ಚಿಸುವ ಬಗ್ಗೆ ನಿರ್ಧಾರ ದಾಖಲಿಸುವಂತೆ ಪೀಠ ನಿರ್ದೇಶನ ನೀಡಿತು.



ಜನಸಂದಣಿ ಕೊರೊನಾ ಸೋಂಕು ನಿಯಂತ್ರಿಸಲು ರಾಜ್ಯ ಸರ್ಕಾರ ಹೇರಿರುವ ಲಾಕ್‌ಡೌನ್ ಮಧ್ಯೆ ಅವಶ್ಯಕ ವಸ್ತುಗಳ ಖರೀದಿಗೆ ವಿನಾಯಿತಿ ನೀಡಿದ್ದರಿಂದ ಕಲಬುರ್ಗಿಯ ಸೂಪರ್ ಮಾರುಕಟ್ಟೆಯ ಕಪಡಾ ಬಜಾರ್ ರಸ್ತೆಯಲ್ಲಿ ಗುರುವಾರ ಬೆಳಿಗ್ಗೆ ಜನದಟ್ಟಣೆ ಕಂಡು ಬಂತು ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್.ಜಿ.

ಖಾಸಗಿ ಆಸ್ಪತ್ರೆಗಳ ವಿರುದ್ಧ ಕಾನೂನು ಅಸ್ತ್ರ

ಮೃತದೇಹ ಮುಂದಿಟ್ಟು ವಸೂಲಿ ಶಿಕ್ಷಾರ್ಹ

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ಆಸ್ಪತ್ರೆಗೆ ದಾಖಲಾಗುವ ರೋಗಿ ಮೃತಪಟ್ಟಾಗ, ಆ ಮೃತದೇಹವನ್ನು ಒತ್ತೆಯಾಗಿಟ್ಟುಕೊಂಡು ಬಿಲ್ ನೀಡುವಂತೆ ಕುಟುಂಬದವರನ್ನು ಬ್ಲ್ಯಾಕ್‌ಮೇಲ್ ಮಾಡುವುದು ಶಿಕ್ಷಾರ್ಹ ಅಪರಾಧ.

ಆದ್ದರಿಂದ ಮೃತದೇಹ ಮುಂದಿಟ್ಟುಕೊಂಡು ಬಿಲ್ ಪಾವತಿಸುವಂತೆ ಪಟ್ಟು ಹಿಡಿಯುತ್ತಿರುವ ಕೆಲ ಖಾಸಗಿ ಆಸ್ಪತ್ರೆಗಳ ವಿರುದ್ಧ ಪ್ರಯೋಗಿಸಬಹುದಾದ ಕಾನೂನಿನ ಅಸ್ತ್ರಗಳ ಬಗ್ಗೆ ಸರ್ಕಾರದ ಪರ ವಕೀಲರು, ಪೊಲೀಸ್ ಇಲಾಖೆ ಗಮನಕ್ಕೆ ತಂದಿದ್ದಾರೆ. ಮೃತರ ಸಂಬಂಧಿಕರಿಂದ ದೂರು ಬಂದರೆ ತಪ್ಪಿತಸ್ಥ ಆಸ್ಪತ್ರೆಗಳ ಆಡಳಿತ ಮಂಡಳಿ ಅಥವಾ ವೈದ್ಯರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲು ಪೊಲೀಸರು ಮುಂದಾಗಿದ್ದಾರೆ.

ಯಾವುದೇ ಪ್ರಕರಣವಾದರೂ ಚಾಲ್ತಿಯಲ್ಲಿರುವ ಕಾನೂನು ಹಾಗೂ ನ್ಯಾಯಾಲಯದ ಆದೇಶಗಳನ್ವಯ ಆಯಾ ಠಾಣೆ ತನಿಖಾಧಿಕಾರಿಗಳೇ ಕ್ರಮ ಕೈಗೊಳ್ಳುತ್ತಾರೆ

ಪ್ರವೀಣ್ ಸೂದ್, ರಾಜ್ಯ ಪೊಲೀಸ್ ಮಹಾನಿರ್ದೇಶಕ

ಪ್ರಜಾವಾಣಿ ವಿಶೇಷ

₹ 4 ಲಕ್ಷ ಬಿಲ್ ಪಾವತಿಸಲಾಗದೆ ಪತಿಯ ಮೃತದೇಹವನ್ನು ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲೇ ಬಿಟ್ಟುಹೋಗಿದ್ದ ಪತ್ನಿಯ ಸುದ್ದಿ ರಾಜ್ಯದೆಲ್ಲೆಡೆ ಚರ್ಚೆಗೆ ಗ್ರಾಸವಾಗಿದೆ. ವಿಜಯಪುರದ ದಂಪತಿ ದುಡಿಯಲು ನಗರಕ್ಕೆ ಬಂದಿದ್ದರು. ಪೇಂಟರ್ ಆಗಿದ್ದ ಪತಿಗೆ ಕೊರೊನಾ ಸೋಂಕು ತಗುಲಿತ್ತು. ಚಿಕಿತ್ಸೆಗೆ ಸ್ಪಂದಿಸದೇ ಅವರು ಮೃತಪಟ್ಟಿದ್ದರು. ಆದರೆ, ಮೃತದೇಹ ನೀಡಲು ಖಾಸಗಿ ಆಸ್ಪತ್ರೆಯವರು ₹ 4 ಲಕ್ಷ ಬಿಲ್ ಪಾವತಿಸುವಂತೆ ಒತ್ತಾಯಿಸಿದ್ದರು. ಹಣವಿಲ್ಲವೆಂದಿದ್ದ ಪತ್ನಿ, ಮೃತದೇಹವನ್ನು ಬಿಟ್ಟು ಊರಿಗೆ ವಾಪಸ್ ಹೋಗಿದ್ದರು.

9ನೇ ಪುಟ ನೋಡಿ

‘ದೂರು ನೀಡಿದ ಕೂಡಲೇ ಎಫ್‌ಐಆರ್’

‘ಮೃತದೇಹ ಒತ್ತೆಯಾಗಿರಿಸಿಕೊಂಡ ಬಗ್ಗೆ ವಾರಸುದಾರರು ದೂರು ನೀಡಿದ ಕೂಡಲೇ ಸಂಬಂಧಪಟ್ಟ ಪೊಲೀಸ್ ಠಾಣೆಯ ಠಾಣಾಧಿಕಾರಿ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಬೇಕು. ಆಸ್ಪತ್ರೆಗಳ ವಿರುದ್ಧದ ಶಿಕ್ಷಾರ್ಹ ಅಪರಾಧ ಕೃತ್ಯಗಳು ಸಂಜ್ಞೆ ಅಪರಾಧಗಳಾಗಿದ್ದು, ದೂರು ನಿರಾಕರಿಸುವಂತಿಲ್ಲ’ ಎಂದೂ ಸರ್ಕಾರದ ವಕೀಲ ಹೇಳಿದರು. ‘ಕೆಲ ಆಸ್ಪತ್ರೆಗಳಲ್ಲಿ ಇಂಥ ಪ್ರಕರಣಗಳು ವರದಿಯಾಗಿದೆ. ಎಫ್‌ಐಆರ್ ದಾಖಲಾಗುವ ಭಯದಲ್ಲಿ ಆಸ್ಪತ್ರೆಯವರು ಮೃತದೇಹ ಕೊಟ್ಟು ಕಳುಹಿಸಿದ್ದಾರೆ’ ಎಂದೂ ತಿಳಿಸಿದರು.

‘ಸ್ವಯಂಪ್ರೇರಿತ ಪ್ರಕರಣಕ್ಕೂ ಅವಕಾಶ’

‘ಮೃತದೇಹವನ್ನು ಆಸ್ಪತ್ರೆಯವರು ಒತ್ತೆಯಾಗಿಟ್ಟುಕೊಂಡು ಶುಲ್ಕ ಪಾವತಿಸಲು ಬ್ಲ್ಯಾಕ್‌ಮೇಲ್ ಮಾಡಿದ ಘಟನೆಗಳು ಮಾಧ್ಯಮಗಳಲ್ಲಿ ವರದಿಯಾದರೆ ಅಥವಾ ಸಾರ್ವಜನಿಕ ವಲಯದಲ್ಲಿ ಚರ್ಚೆಯಾದರೆ ಪೊಲೀಸರು ಸ್ವಯಂಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಳ್ಳಲು ಕಾನೂನಿನಲ್ಲಿ ಅವಕಾಶವಿದೆ’ ಎಂದು ವಕೀಲ ಎಸ್. ಸುಧನ್ವ ‘ಪ್ರಜಾವಾಣಿ’ಗೆ ತಿಳಿಸಿದರು.

‘ಅರ್ಹರ’ ಪಟ್ಟಿಯಲ್ಲಿ ಮೃತ 4.43 ಲಕ್ಷ ಫಲಾನುಭವಿಗಳು

1.31 ಲಕ್ಷ ಪಡಿತರ ಚೀಟಿಗಳೇ ಅನರ್ಹ

• ರಾಜೇಶ್ ರೈ ಚಟ್ಲ

ಬೆಂಗಳೂರು: ರಾಜ್ಯದಲ್ಲಿರುವ ಅಂತ್ಯೋದಯ ಅನ್ನ ಯೋಜನೆ (ಎಎವೈ) ಮತ್ತು ಬಿಪಿಎಲ್ (ಆದ್ಯತಾ) ಪಡಿತರ ಚೀಟಿಗಳ ಪರಿಶೀಲನಾ ಕಾರ್ಯ ಆರಂಭಿಸಿರುವ ಆಹಾರ ಇಲಾಖೆ, ಮೂರೇ ತಿಂಗಳಲ್ಲಿ 1,31,082 ಅನರ್ಹ ಪಡಿತರ ಚೀಟಿಗಳನ್ನು ಪತ್ತೆಹಚ್ಚಿದೆ. ಇವುಗಳಿಗೆ ಮೇ ತಿಂಗಳಿಂದ ಆಹಾರಧಾನ್ಯ ವಿತರಣೆ ಸ್ಥಗಿತಗೊಳಿಸಲು ನಿರ್ಧರಿಸಿದೆ.

ಅಲ್ಲದೆ, ಕಂದಾಯ ಇಲಾಖೆಯ ಪಿಂಚಣಿದಾರರ ಪರಿಶೀಲನೆ ವೇಳೆ ಮೃತಪಟ್ಟಿದ್ದಾರೆಂದು ಗುರುತಿಸಿದ, ಆದರೆ ಇನ್ನೂ ಪಡಿತರ ಚೀಟಿಗಳಲ್ಲಿ ಹೆಸರು ಇರುವ 4,42,935 ಫಲಾನುಭವಿಗಳ ಆಹಾರಧಾನ್ಯ ಹಂಚಿಕೆಯನ್ನೂ ಸ್ಥಗಿತಗೊಳಿಸಲು ಇಲಾಖೆ ಮುಂದಾಗಿದೆ.

ಈ ಬಗ್ಗೆ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಮತ್ತು ಇಲಾಖೆಯ ಜಿಲ್ಲಾ ಮಟ್ಟದ ಹಿರಿಯ ಅಧಿಕಾರಿಗಳಿಗೆ ಆಹಾರ ಇಲಾಖೆಯ ಆಯುಕ್ತರಾದ ಶಮ್ಲಾ ಇಕ್ಬಾಲ್ ಪತ್ರ ಬರೆದಿದ್ದಾರೆ. ಯಾವುದೇ ಅನರ್ಹರಿಗೆ ಅಥವಾ ಮೃತಪಟ್ಟವರ ಹೆಸರಿಗೆ ಮೇ ತಿಂಗಳ ಪಡಿತರಧಾನ್ಯ ಹಂಚಿಕೆಯಾದರೆ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳೇ ಹೊಣೆ ಎಂದು ಎಚ್ಚರಿಕೆ ನೀಡಿದ್ದಾರೆ.

ಅನರ್ಹ ಪಡಿತರ ಚೀಟಿಗಳನ್ನು ಗುರುತಿಸುವ ಕಾರ್ಯ ಮುಂದುವರಿದಿದೆ. ಮುಖ್ಯಮಂತ್ರಿಯ ಗಮನಕ್ಕೆ ತಂದು, ಈ ಕಾರ್ಡ್‌ಗಳ ಬಗ್ಗೆ ಕ್ರಮ ವಹಿಸುತ್ತೇನೆ

ಉಮೇಶ ಕತ್ತಿ, ಆಹಾರ ಸಚಿವ

ಅನರ್ಹ ಪಡಿತರ ಚೀಟಿಗಳ ಸಂಖ್ಯೆ

ಕಾರಣ	ಎಎವೈ	ಬಿಪಿಎಲ್ (ಆದ್ಯತಾ)
ಜಿಲ್ಲೆಗಳಿಂದ ಅನರ್ಹ ಚೀಟಿ ಪತ್ತೆ	1,732	44,136
ಆದಾಯ ತೆರಿಗೆ ಪಾವತಿದಾರರು	5,000	80,204
ಮೃತಪಟ್ಟವರು (ಪಡಿತರ ಫಲಾನುಭವಿ)	4,42,935	

ಎಎವೈ ಮತ್ತು ಬಿಪಿಎಲ್ ಪಡಿತರ ಚೀಟಿ ಪಡೆಯಲು ಸರ್ಕಾರ ನಿಗದಿಪಡಿಸಿದ್ದ ಮಾನದಂಡ ಆಧರಿಸಿ ಜ. 30ರಿಂದ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಅನರ್ಹರನ್ನು ಪತ್ತೆ ಮಾಡುವ ಕಾರ್ಯಾಚರಣೆಯನ್ನು ಇಲಾಖೆ ಆರಂಭಿಸಿತ್ತು.

ದೂರುಗಳು ಬಂದ ಪಡಿತರ ಚೀಟಿಗಳ ಬಗ್ಗೆ ಆಹಾರ ನಿರೀಕ್ಷಕರು ಸ್ಥಳ ಪರಿಶೀಲನೆ ನಡೆಸಿ, ಅನರ್ಹ ಕಾರ್ಡ್‌ಗಳನ್ನು ಗುರುತಿಸಿದ್ದರು.

ಐಟಿ ಪಾವತಿದಾರರ ಬಳಿ ‘ಅನ್ನಭಾಗ್ಯ’ದ ಕಾರ್ಡ್!

‘ಅನ್ನಭಾಗ್ಯ’ ಯೋಜನೆಯ ಫಲಾನುಭವಿಗಳ ಪಟ್ಟಿಯಲ್ಲಿರುವ ಆದಾಯ ತೆರಿಗೆ (ಐಟಿ) ಪಾವತಿದಾರರ ಪೈಕಿ, 5 ಸಾವಿರ ಮಂದಿ ಕಡುಬಡವರಿಗೆ ಮೀಸಲಾದ ಎಎವೈ ಪಡಿತರ ಚೀಟಿ ಹೊಂದಿದ್ದರೆ, 80,204 ಮಂದಿಯ ಬಳಿ ಬಿಪಿಎಲ್ ಪಡಿತರ ಚೀಟಿ ಇದೆ.

‘ಆಧಾರ್’ ಸಂಖ್ಯೆಯ ಆಧಾರದಲ್ಲಿ ಆದಾಯ ತೆರಿಗೆ ಇಲಾಖೆಯ ನೆರವಿನಿಂದ ಈ ‘ಅನರ್ಹ’ರನ್ನು ಆಹಾರ ಇಲಾಖೆ ಗುರುತಿಸಿದೆ. ಬೆಂಗಳೂರು ಜಿಲ್ಲೆಯ (ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ, ಕೇಂದ್ರ ಪಡಿತರ ಪ್ರದೇಶ) 23,995 ತೆರಿಗೆ ಪಾವತಿದಾರರು ಬಿಪಿಎಲ್ ಕಾರ್ಡ್ ಹೊಂದಿದ್ದಾರೆ. 1,159 ಮಂದಿಯ ಬಳಿ ಎಎವೈ ಪಡಿತರ ಚೀಟಿ ಇದೆ.

9ನೇ ಪುಟ ನೋಡಿ

ಸೋಂಕು ದೃಢಪಟ್ಟವರಿಂದ ಖಾತರಿಗಾಗಿ ಪ್ರತ್ಯೇಕ ಪ್ರಯೋಗಾಲಯಗಳಲ್ಲಿ ಮತ್ತೆ ಪರೀಕ್ಷೆ ಸಾಧ್ಯತೆ

ಪದೇ ಪದೇ ಪರೀಕ್ಷೆ: ಸಂಖ್ಯೆ ಹೆಚ್ಚಳ?

• ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ಕೊರೊನಾ ಸೋಂಕಿತರು ಮತ್ತೆ ಮತ್ತೆ ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳುತ್ತಿರುವುದು ನಗರದಲ್ಲಿ ಈ ಸೋಂಕು ದೃಢಪಟ್ಟವರ ಸಂಖ್ಯೆ ವಾಸ್ತವಕ್ಕಿಂತ ಹೆಚ್ಚು ಇರುವಂತೆ ಬಿಂಬಿತವಾಗಲು ಕಾರಣವಾಗುತ್ತಿದೆಯೇ?

ಹೌದು ಎನ್ನುತ್ತಾರೆ ಬಿಬಿಎಂಪಿ ಪ್ರಾಥಮಿಕ ಆರೋಗ್ಯ ಸೇವೆಯಲ್ಲಿ ತೊಡಗಿಸಿರುವ ಸಿಬ್ಬಂದಿ.

'ಯಾವುದೇ ವ್ಯಕ್ತಿಗೆ ಕೋವಿಡ್ ಇರುವುದು ರ‍್ಯಾಪಿಡ್ ಆ್ಯಕ್ಷನ್ ಪರೀಕ್ಷೆ ಅಥವಾ ಆರ್‌ಟಿಪಿಸಿಆರ್ ಪರೀಕ್ಷೆಯಲ್ಲಿ ಒಮ್ಮೆ ಸಾಬೀತಾದರೆ ಮತ್ತೆ 14 ದಿನ ಮರು ಪರೀಕ್ಷೆ ಮಾಡಿಸಿಕೊಳ್ಳಬೇಕಾದ ಅಗತ್ಯ ಇಲ್ಲ. ಆದರೆ, ರೋಗಲಕ್ಷಣ ಇಲ್ಲದ ಸೊಂಕಿತರು ತಮ್ಮ ಸಂದೇಹ ನಿವಾರಣೆಗೆ ಪದೇ ಪದೇ ಪರೀಕ್ಷೆ ಮಾಡಿಸಿಕೊಳ್ಳುತ್ತಿದ್ದಾರೆ. ಒಬ್ಬ ಸೊಂಕಿತನ ವಿವರ ಒಂದಕ್ಕಿಂತ ಹೆಚ್ಚು ಬಾರಿ ಐಸಿಎಂಆರ್ ಪೋರ್ಟಲ್‌ನಲ್ಲಿ ದಾಖಲಾಗುತ್ತಿದ್ದು, ನಗರದಲ್ಲಿ ನಿಜವಾಗಿ ಕೋವಿಡ್ ಖಚಿತಪಟ್ಟವರ ಸಂಖ್ಯೆಗಿಂತ ಹೆಚ್ಚು ಮಂದಿ ಸೋಂಕು ಹೊಂದಿರುವಂತೆ ಕಾಣಿಸಿಕೊಳ್ಳುತ್ತಿದೆ' ಎಂದು ಹೆಸರು ಬಹಿರಂಗಪಡಿಸಲು ಬಯಸದ ವೈದ್ಯಾಧಿಕಾರಿ 'ಪ್ರಜಾವಾಣಿ'ಗೆ ಮಹಿತಿ ನೀಡಿದರು.

ಈಗ ಆನ್‌ಲೈನ್‌ನಲ್ಲಿ ಸಂಪರ್ಕಿಸಿದರೂ ಮನೆಗೇ ಬಂದು ಪರೀಕ್ಷೆ ನಡೆಸಿ ಫಲಿತಾಂಶ ತಲುಪಿಸುತ್ತಿವೆ. ರೋಗ ಲಕ್ಷಣ ಕಡಿಮೆ ಇರುವ ಹಾಗೂ ಪರೀಕ್ಷೆ ಬಗ್ಗೆ ಸಂದೇಹವುಳ್ಳ ಸೋಂಕಿತರು ಪ್ರತ್ಯೇಕ ಪ್ರಯೋಗಾಲಯದಲ್ಲಿ ಪರೀಕ್ಷೆ ಮಾಡಿಸುತ್ತಿದ್ದಾರೆ.

'ಕೋವಿಡ್ ದೃಢಪಟ್ಟವರಿಗೆ ರೋಗ ಲಕ್ಷಣಗಳಿಲ್ಲದಿದ್ದರೂ 14 ದಿನ ಪ್ರತ್ಯೇಕ ವಾಸ ಕಡ್ಡಾಯ. ಬಹುತೇಕರಿಗೆ ಪ್ರತ್ಯೇಕ ವಾಸ ಎರಡು ಮೂರು ದಿನಗಳಿಗೇ ರೇಜಿಗೆ ಎನ್ನಿಸುತ್ತದೆ. ಕೋವಿಡ್ ವಾಸಿಯಾಗಿರಬಹುದು ಎಂದು ಭಾವಿಸಿ ಕೆಲವರು ಸೊಂಕು ದೃಢಪಟ್ಟ ಎರಡು ಮೂರು ದಿನಗಳಲ್ಲೇ ಮತ್ತೆ ಪರೀಕ್ಷೆ ಮಾಡಿಸಿಕೊಳ್ಳುತ್ತಾರೆ. ಸೋಂಕು ಇಲ್ಲ ಎಂಬುದು ದೃಢಪಟ್ಟರೆ ಪ್ರತ್ಯೇಕವಾಸದಿಂದ ಮುಕ್ತಿ ಸಿಗುತ್ತದೆ ಎಂಬ ನಿರೀಕ್ಷೆ ಅವರದು. ಕೆಲವರು ಬೇರೆಡೆ ಹೋಗಬೇಕಾದ ಅನಿವಾರ್ಯ ಅಥವಾ ಮನೆಗಳಲ್ಲಿ ಶುಭ ಸಮಾರಂಭಗಳಲ್ಲಿ ಭಾಗವಹಿಸುವ ತವಕದಿಂದ ಹೀಗೆ ಮಾಡುತ್ತಾರೆ' ಎಂದು ವೈದ್ಯಾಧಿಕಾರಿ ವಿವರಿಸಿದರು.


ಮೊಬೈಲ್ ಸಂಖ್ಯೆ ಹಾಗೂ ಅದಕ್ಕೆ ಬಂದ ಒಟಿಪಿ ನೀಡಿದವರಿಗಷ್ಟೇ ಕೋವಿಡ್ ಪರೀಕ್ಷೆ ಮಾಡಲಾಗುತ್ತದೆ. ಕೆಲವರು ಬೇರೆ ಬೇರೆ ಮೊಬೈಲ್ ಸಂಖ್ಯೆ ನೀಡಿ ಪರೀಕ್ಷೆ ಮಾಡಿಸಿಕೊಳ್ಳುತ್ತಿದ್ದಾರೆ. ಪ್ರತಿ ಪರೀಕ್ಷೆಯ ವೇಳೆಯೂ ಒಂದೇ ಮೊಬೈಲ್ ನಂಬರ್ ನೀಡಿದರೂ ಬೇರೆ ಬೇರೆ ಎಸ್‌ಆರ್‌ಎಫ್ ಸಂಖ್ಯೆ ಬರುತ್ತದೆ. ಬಿಬಿಎಂಪಿ ಸಿಬ್ಬಂದಿ ಸೋಂಕಿತರ ಮನೆಗೆ ಖುದ್ದು ಭೇಟಿ ನೀಡಿ ಪರೀಕ್ಷೆ ಮಾಡಿದರಷ್ಟೇ ಆ ವಿಳಾಸದಲ್ಲಿ ನಿಜಕ್ಕೂ ಎಷ್ಟು ಕೋವಿಡ್ ರೋಗಿಗಳಿದ್ದಾರೆ ಎಂಬುದು ತಿಳಿಯುತ್ತದೆ. ಸೋಂಕಿತರ ಕೈಗೆ ಮುದ್ರೆ ಹಾಕಬೇಕು ಎಂದು ಬಿಬಿಎಂಪಿ ಹೇಳಿದೆ. ಆದರೆ, ಇದನ್ನು ಅನುಷ್ಠಾನಕ್ಕೆ ತರಲು ಅಗತ್ಯ, ತಳಮಟ್ಟದ ಸಿಬ್ಬಂದಿ ಇಲ್ಲ.

'ಒಮ್ಮೆಲೆ ಭಾರಿ ಸಂಖ್ಯೆಯಲ್ಲಿ ಪ್ರಕರಣಗಳು ವರದಿಯಾಗುತ್ತಿರುವುದರಿಂದ ತಳಮಟ್ಟದ ಸಿಬ್ಬಂದಿಯೆಲ್ಲಾ ಸೋಂಕಿತರ ಜೊತೆ ನೇರ ಹಾಗೂ ಪರೋಕ್ಷ ಸಂಪರ್ಕಕ್ಕೆ ಬಂದವರನ್ನು ಪತ್ತೆ ಹಚ್ಚುವುದರಲ್ಲೇ ಹೈರಾಣಾಗುತ್ತಾರೆ. ಕೈಗೆ ಮುದ್ರೆ ಹಾಕುವ ಕಾರ್ಯವೂ ಸರಿಯಾಗಿ ನಡೆಯುತ್ತಿಲ್ಲ. ಮುದ್ರೆ ಹಾಕಿದರೂ ಅದನ್ನು ಅಳಿಸುವುದಕ್ಕೆ ನಾನಾ ತಂತ್ರಗಳಿವೆ. ಹಾಗಾಗಿ ಇದೊಂದು ಪರಿಣಾಮಕಾರಿ ಕ್ರಮ ಅಲ್ಲ' ಎಂದರು.

'ಕಳೆದ ವರ್ಷದ ಹಾಗೆ ಕೋವಿಡ್ ಸೋಂಕಿತರ ಮನೆ ಪರಿಸರವನ್ನು ಕಂಟೈನ್‌ಮೆಂಟ್ ವಲಯವೆಂದು ಗುರುತಿಸಿ ಸೋಂಕು ಹರಡದಂತೆ ಸೀಲ್ ಡೌನ್ ಮಾಡುವ ವಿಧಾನವನ್ನು ಈಗ ಅನುಸರಿಸುತ್ತಿಲ್ಲ. ಇಷ್ಟೊಂದು ಸಂಖ್ಯೆಯಲ್ಲಿ ಪ್ರಕರಣಗಳು ವರದಿಯಾಗುತ್ತಿರುವಾಗ ಹಾಗೆ ಮಾಡುವುದು ಕಾರ್ಯಸಾಧುವೂ ಅಲ್ಲ. ಹಾಗಾಗಿ ಸೋಂಕಿತರ ಪ್ರತ್ಯೇಕ ವಾಸದ ಮೇಲೆ ಕಠಿಣ ನಿಗಾ ಇಡುವ ವ್ಯವಸ್ಥೆಯೇ ಇಲ್ಲದಂತಾಗಿದೆ' ಎಂದು ಅವರು ವಸ್ತುಸ್ಥಿತಿಯನ್ನು ಬಿಚ್ಚಿಟ್ಟರು.

'ಪರೀಕ್ಷೆ ಮಾಡಿಸದವರ ಸಂಖ್ಯೆಯೂ ಬಹಳಷ್ಟಿದೆ': 'ಎರಡನೇ ಬಾರಿ ಪರೀಕ್ಷೆ ಮಾಡಿಸಿಕೊಳ್ಳುವವರ ಪ್ರಮಾಣಕ್ಕಿಂತ ಸೋಂಕು ಲಕ್ಷಣವಿದ್ದರೂ ಪರೀಕ್ಷೆಯನ್ನೇ ಮಾಡಿಸಿಕೊಳ್ಳದವರ ಸಂಖ್ಯೆ ಹೆಚ್ಚಿದೆ. ಒಂದು ಕೋವಿಡ್ ಬಂದರೂ ವಾಸಿಯಾಗುತ್ತದೆ ಎಂಬ ಅತಿಯಾದ ಆತ್ಮವಿಶ್ವಾಸ ಮತ್ತು ಪರೀಕ್ಷೆ ಮಾಡಿಸಿಕೊಂಡರೆ ಎಲ್ಲಿ ಕೋವಿಡ್ ದೃಢಪಡುತ್ತದೋ ಎಂಬ ಆತಂಕಗಳೆರಡೂ ಇದಕ್ಕೆ ಕಾರಣ' ಎಂದು ಇನ್ನೊಬ್ಬರು ಆರೋಗ್ಯಾಧಿಕಾರಿ ಅಭಿಪ್ರಾಯಪಟ್ಟರು.

ನಗರದ ಕೋವಿಡ್ ಪ್ರಕರಣಗಳು



'ಜನರೂ ಜವಾಬ್ದಾರಿಯಿಂದ ವರ್ತಿಸಲಿ'



'ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಾಗದಂತೆ ತಡೆಯುವ ಜವಾಬ್ದಾರಿ ಜನರಲ್ಲೂ ಇರಬೇಕು. ಪದೇ ಪದೇ ಪರೀಕ್ಷೆ ಮಾಡಿಸಿಕೊಂಡು ಒಬ್ಬರಿಗೇ ಹೆಚ್ಚು ಬಾರಿ ಕೋವಿಡ್ ದೃಢಪಟ್ಟ ಫಲಿತಾಂಶ ಪಡೆದರೆ ನಗರದಲ್ಲಿ ಕೋವಿಡ್ ಸೋಂಕಿತರು ಹೆಚ್ಚು ಇದ್ದಂತೆ ಕಂಡು ಬರುತ್ತದೆ. ಸರ್ಕಾರ ಸೋಂಕು ನಿಯಂತ್ರಣಕ್ಕೆ ಅನಿವಾರ್ಯವಾಗಿ ಲಾಕ್‌ಡೌನ್‌ನಂತಹ ಕಠಿಣ ಕ್ರಮ ಅನುಸರಿಸಬೇಕಾಗುತ್ತದೆ. ಜನರು ಇದಕ್ಕೆ ಆಸ್ಪದ ನೀಡಬಾರದು' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ 'ಪ್ರಜಾವಾಣಿ'ಗೆ ತಿಳಿಸಿದರು.

ಒಮ್ಮೆ ಕೋವಿಡ್ ದೃಢಪಟ್ಟರೆ 14 ದಿನ ಪರೀಕ್ಷೆ ಮಾಡಿಸಿಕೊಳ್ಳಬಾರದು. ಒಂದಕ್ಕಿಂತ ಹೆಚ್ಚು ಸಲ ಫಲಿತಾಂಶ ಪಡೆದು, ಪ್ರಕರಣ ಸಂಖ್ಯೆ ಹೆಚ್ಚು ಇರುವಂತೆ ಬಿಂಬಿತವಾಗುತ್ತದೆ

ಗೌರವ್ ಗುಪ್ತ
ಮುಖ್ಯ ಆಯುಕ್ತ, ಬಿಬಿಎಂಪಿ

ಸುದ್ದಿ 2 ನಿಮಿಷ

ಶಿಕ್ಷಕರ ವರ್ಗಾವಣೆ: ರಾಜ್ಯಪಾಲರಿಂದ ಸುಗ್ರೀವಾಜ್ಞೆಗೆ ಅಂಕಿತ

ಬೆಂಗಳೂರು: 2019–20ನೇ ಸಾಲಿನಲ್ಲಿ ಕಡ್ಡಾಯ ಮತ್ತು ಹೆಚ್ಚುವರಿ ವರ್ಗಾವಣೆಗೆ ಒಳಗಾಗಿ ತೊಂದರೆ ಅನುಭವಿಸುತ್ತಿರುವ ಶಿಕ್ಷಕರಿಗೆ ಕೌನ್ಸೆಲಿಂಗ್ ಮೂಲಕ ಒಂದು ಬಾರಿಗೆ ವರ್ಗಾವಣೆಗೆ ಅವಕಾಶ ಮಾಡಿಕೊಡುವ 'ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಕಾಯ್ದೆ–2020' ತಿದ್ದುಪಡಿಯ ಸುಗ್ರೀವಾಜ್ಞೆಗೆ ರಾಜ್ಯಪಾಲ ವಜುಭಾಯಿ ವಾಲಾ ಅಂಕಿತ ಹಾಕಿದ್ದಾರೆ.

ಸೋಮವಾರ (ಏ. 26) ನಡೆದ ಸಚಿವ ಸಂಪುಟ ಸಭೆಯಲ್ಲಿ ಸುಗ್ರೀವಾಜ್ಞೆಗೆ ಅನುಮೋದನೆ ನೀಡಲಾಗಿತ್ತು. ಸುಗ್ರೀವಾಜ್ಞೆಗೆ ರಾಜ್ಯಪಾಲರು ಒಪ್ಪಿಗೆ ನೀಡಿದ್ದರಿಂದ, ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿದ್ದು, ಶೀಘ್ರದಲ್ಲಿಯೇ 2020–21ನೇ ಸಾಲಿನ ವರ್ಗಾವಣೆ ಪ್ರಕ್ರಿಯೆ ಆರಂಭಿಸಲು ಶಿಕ್ಷಣ ಇಲಾಖೆ ನಿರ್ಧರಿಸಿದೆ.

ವರ್ಗಾವಣೆಗೆ ನ. 11ರಂದು ಅಧಿಸೂಚನೆ ಹೊರಡಿಸಲಾಗಿತ್ತು. 70 ಸಾವಿರಕ್ಕೂ ಹೆಚ್ಚು ಶಿಕ್ಷಕರು ಅರ್ಜಿ ಸಲ್ಲಿಸಿದ್ದರು. ಆದರೆ, 2019–20ನೇ ಸಾಲಿನಲ್ಲಿ ಕಡ್ಡಾಯ ಮತ್ತು ಹೆಚ್ಚುವರಿ ವರ್ಗಾವಣೆ ಶಿಕ್ಷೆಗೆ ಒಳಗಾದ ಶಿಕ್ಷಕರಿಗೆ ವಿಶೇಷ ಆದ್ಯತೆ ನೀಡುವ ವಿಷಯ ವರ್ಗಾವಣೆ ಕಾಯ್ದೆಯಲ್ಲಿ ಇರಲಿಲ್ಲವೆಂದು ಕೆಲವರು ನ್ಯಾಯಾಲಯದ ಮೊರೆ ಹೋಗಿದ್ದರು. ಹೀಗಾಗಿ, ಕಾಯ್ದೆಗೆ ತಿದ್ದುಪಡಿ ತರಲಾಗಿದೆ.

ಹಡಗಿನಲ್ಲಿ 'ಧ್ರುವ್' ಸಾಮರ್ಥ್ಯ ಪರೀಕ್ಷೆ



ಬೆಂಗಳೂರು: ಎಚ್‌ಎಎಲ್ ಅಭಿವೃದ್ಧಿಪಡಿಸಿದ 'ಧ್ರುವ್ ಎಂಕೆ 3' ಸುಧಾರಿತ ಲಘು ಹೆಲಿಕಾಪ್ಟರ್ ಹಡಗಿನ ಮೇಲೆ ಇಳಿಯುವ, ಬ್ಲೇಡ್‌ಗಳನ್ನು ಮಡಚುವ ಮತ್ತು ಹ್ಯಾಂಗರ್‌ನೊಳಗೆ ನಿಲ್ಲುವ ಸಾಮರ್ಥ್ಯವನ್ನು ಯಶಸ್ವಿಯಾಗಿ ಪ್ರದರ್ಶಿಸಿದೆ.

ಇತ್ತೀಚೆಗೆ ಚೆನ್ನೈನ ಕಡಲ ತೀರದಲ್ಲಿ ಭಾರತೀಯ ಕೋಸ್ಟ್ ಗಾರ್ಡ್ ಸಹಯೋಗದಲ್ಲಿ ಪ್ರಾತ್ಯಕ್ಷಿಕೆ ನಡೆಯಿತು. ಹಡಗಿನ ಮೇಲೆ ಇಳಿದ ಬಳಿಕ ಎಲ್ಲ ಚಟುವಟಿಕೆಗಳ ಜತೆಗೆ ಇಂಧನ ತುಂಬಿಸುವ ಪ್ರಯೋಗವೂ ನಡೆಯಿತು ಎಂದು ಎಚ್‌ಎಎಲ್ ಪ್ರಕಟಣೆ ತಿಳಿಸಿದೆ.

ಹೆಲಿಕಾಪ್ಟರ್ ಅತ್ಯಾಧುನಿಕ 'ಶಕ್ತಿ' ಎಂಜಿನ್ ಮತ್ತು ಗಾಜಿನ ಕಾಕ್‌ಪಿಟ್ ಅನ್ನು ಹೊಂದಿದೆ. ಇತ್ತೀಚೆಗಷ್ಟೇ ಭಾರತೀಯ ಕೋಸ್ಟ್ ಗಾರ್ಡ್‌ಗೆ ಎಚ್‌ಎಎಲ್ ಧ್ರುವ್ ಎಂಕೆ 3 ಎಂಆರ್ ಅನ್ನು ಪೂರೈಕೆ ಮಾಡಿತ್ತು. 16 ಎಎಲ್‌ಎಚ್ ಪೂರೈಕೆಯ ಒಪ್ಪಂದ ಆಗಿತ್ತು.

ಈ ಪ್ರಾಯೋಗಿಕ ಪ್ರಾತ್ಯಕ್ಷಿಕೆಯ ಮೂಲಕ ಹಡಗಿನಲ್ಲಿ ಎಎಲ್‌ಎಚ್ ಧ್ರುವ್ ಹೆಲಿಕಾಪ್ಟರ್‌ನ ಸಾಮರ್ಥ್ಯವನ್ನು ಸಾಬೀತುಪಡಿಸಲು ಸಾಧ್ಯವಾಗಿದೆ. ನಿಗಾ ಇಡುವುದು, ಹುಡುಕಾಟ ಮತ್ತು ರಕ್ಷಣೆ ಕಾರ್ಯಕ್ಕೆ ಈ ಹೆಲಿಕಾಪ್ಟರ್ ಬಳಸಬಹುದಾಗಿದೆ ಎಂದು ಎಚ್‌ಎಎಲ್‌ನ ಮುಖ್ಯ ವ್ಯವಸ್ಥಾಪಕ ನಿರ್ದೇಶಕ ಆರ್.ಮಾಧವನ್ ತಿಳಿಸಿದ್ದಾರೆ.

ಕರುಣೆಯ ಕೈಗಳಿಂದ ಉಚಿತ ದಾಸೋಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಕರ್ಫ್ಯೂವಿನಿಂದ ಹಲವರು ಸಂಕಷ್ಟಕ್ಕೆ ಒಳಗಾಗಿದ್ದಾರೆ. ಹೊರಗೆ ಹೋಗಲೂ ಸಾಧ್ಯವಾಗದೆ, ಮನೆಯಲ್ಲಿಯೂ ಅಡುಗೆ ಮಾಡಿಕೊಳ್ಳಲು ಆಗದೆ ಕಷ್ಟದಲ್ಲಿದ್ದಾರೆ. ಇಂಥವರ ನೆರವಿಗೆ ಸಹಾಯಹಸ್ತ ಚಾಚಿರುವ ನಗರದ ವಿವಿಧ ಸಂಘ–ಸಂಸ್ಥೆಗಳು, ಉತ್ಸಾಹಿ ಯುವಕರು ರೋಗಿಗಳ ಮನೆ ಬಾಗಿಲಿಗೇ ಉಚಿತ ಆಹಾರ ಪೂರೈಸುತ್ತಿದ್ದಾರೆ.

ಅಗರ್‌ವಾಲ್ ಸಮುದಾಯದಿಂದ ಆಹಾರ ವಿತರಣೆ

ಸೋಂಕಿತರಾಗಿ ಮನೆಯಲ್ಲಿರುವವರಿಗೆ ಅಗರ್‌ವಾಲ್ ಸಮಾಜದ ಕರ್ನಾಟಕ ಘಟಕ 'ಘರ್ ಕಾ ಖಾನಾ' ಹೆಸರಿನಲ್ಲಿ ಮನೆ ಬಾಗಿಲಿಗೆ ಉಚಿತವಾಗಿ ಆಹಾರ ಪೂರೈಸುತ್ತಿದೆ.



ಸಂಜಯ್ ಗರ್ಗ್

'ನಮ್ಮ ಸಮುದಾಯದವರು ಬೆಂಗಳೂರಿನಲ್ಲಿ ಸುಮಾರು ನಾಲ್ಕು ಲಕ್ಷ ಜನರಿದ್ದಾರೆ. ಈ ಪೈಕಿ ಸಂಘದ ಸದಸ್ಯರು 25 ಸಾವಿರ ಇದ್ದರೆ, ಮಹಿಳಾ ಸದಸ್ಯರ ಸಂಖ್ಯೆ ನಾಲ್ಕು ಸಾವಿರವಿದೆ. ಪಾಳಿಯಂತೆ ದಿನಕ್ಕೆ 200 ಮಹಿಳೆಯರು ತಮ್ಮ ಮನೆಯಲ್ಲಿಯೇ ಆಹಾರ ತಯಾರಿಸುತ್ತಿದ್ದಾರೆ. ಒಂದು ಹೊತ್ತಿಗೆ ಎರಡು ಸಾವಿರ ಪ್ಲೇಟ್‌ನಂತೆ ದಿನಕ್ಕೆ ನಾಲ್ಕು ಸಾವಿರ ಪ್ಲೇಟ್ ಆಹಾರ ಪೂರೈಸುತ್ತಿದ್ದೇವೆ' ಎಂದು ಸಂಘದ ಅಧ್ಯಕ್ಷ ಸಂಜಯ್ ಗರ್ಗ್ 'ಪ್ರಜಾವಾಣಿ'ಗೆ ತಿಳಿಸಿದರು.

'ಕೋವಿಡ್ ಪಾಸಿಟಿವ್ ಇದ್ದವರಿಗೆ ಮಾತ್ರ ಆಹಾರ ನೀಡಲಾಗುತ್ತಿದೆ. ಡುಂಝೋ ಸೇರಿದಂತೆ ಮತ್ತಿತರ ಆ್ಯಪ್ ಮೂಲಕ ಆಹಾರ ತರಿಸಿಕೊಳ್ಳಬಹುದು. ಸ್ವಿಗ್ಗಿ ಮೂಲಕವೂ ಆನ್‌ಲೈನ್‌ನಲ್ಲಿ ತರಿಸಿಕೊಳ್ಳಬಹುದು. ಆಹಾರ ಉಚಿತವಾಗಿರುತ್ತದೆ. ಫುಡ್ ಡೆಲಿವರಿ ಶುಲ್ಕ ಮಾತ್ರ ನೀಡಬೇಕಾಗುತ್ತದೆ. ಅನ್ನ ಸಾಂಬರ್, ಎರಡು ಚಪಾತಿ, ಎರಡು ರೀತಿ ಪಲ್ಯ, ಎರಡು ಬಗೆಯ ಹಣ್ಣು, ಕಿಚಡಿ, ದಾಲ್ ನೀಡಲಾಗುತ್ತದೆ ಎಂದು ಹೇಳಿದರು.

ಮಾಹಿತಿಗೆ ಮತ್ತು ಆಹಾರಕ್ಕಾಗಿ 99009 55009, 99860–40143, 99861–85871, 97300–10953, 98448–01461 ಸಂಪರ್ಕಿಸಬಹುದು.

'ರೆಸಿಪಿ ಆಫ್ ಹೋಪ್' ನಿಂದ ಸೇವೆ

ಜೈನ ಸಮುದಾಯದವರು 'ರೆಸಿಪಿ ಆಫ್ ಹೋಪ್' ಸಂಸ್ಥೆಯ ಮೂಲಕ ಕೋವಿಡ್ ರೋಗಿಗಳಿಗೆ ಉಚಿತವಾಗಿ ಆಹಾರ ಪೂರೈಸುತ್ತಿದ್ದಾರೆ.

'ಹೋಂ ಐಸೊಲೇಶನ್‌ನಲ್ಲಿದ್ದವರು ಆಹಾರಕ್ಕಾಗಿ ನಮಗೆ ಕರೆ ಮಾಡಿದರೆ ಅವರ ಮೊಬೈಲ್ ಸಂಖ್ಯೆಯನ್ನು ನಾವು ದಾಖಲು ಮಾಡಿಕೊಳ್ಳುತ್ತೇವೆ. ನಂತರ, ನಾವೇ ಕರೆ ಮಾಡುತ್ತೇವೆ. ನಮ್ಮ ಕಡೆಯಿಂದ ಆಹಾರ ಉಚಿತವಾಗಿ ನೀಡುತ್ತೇವೆ. ಆದರೆ, ಅವರು ಡಂಝೊ ಮತ್ತಿತರ ಆ್ಯಪ್ ಮೂಲಕ ಆರ್ಡರ್ ಮಾಡಿ ತರಿಸಿಕೊಳ್ಳಬೇಕು. ಡೆಲಿವರಿ ಚಾರ್ಜ್ ಕೊಡಬೇಕಾಗುತ್ತದೆ' ಎಂದು ಸಂಸ್ಥೆಯ ಪಿಯೂಷ್ ಜೈನ್ 'ಪ್ರಜಾವಾಣಿ'ಗೆ ತಿಳಿಸಿದರು.

ನೀತಿ ದೇಸಾಯಿ, ಪೀಯೂಷ್ ಜೈನ್ ಈ ಸಂಸ್ಥೆ ಪ್ರಾರಂಭಿಸಿದ್ದಾರೆ.

'ಈ ಸೇವೆ ಆರಂಭಿಸಿ ಆರು ದಿನಗಳಾಗಿವೆ. ಮೊದಲ ದಿನ 20 ಪ್ಲೇಟ್ ಕೊಟ್ಟಿದ್ದೇವೆ. ಈಗ ದಿನಕ್ಕೆ 200 ಪ್ಲೇಟ್ ಆಹಾರ ಪೂರೈಸುತ್ತಿದ್ದೇವೆ. ಎರಡು ದಿನದಲ್ಲಿ 400 ಆಗಬಹುದು. ಸದ್ಯಕ್ಕೆ ಮಧ್ಯಾಹ್ನದ ಊಟ ಮಾತ್ರ ಕೊಡುತ್ತಿದ್ದೇವೆ. ನಮ್ಮ ಸಮುದಾಯದವರು ತಮ್ಮ ಮನೆಯಲ್ಲಿಯೇ ಆಹಾರ ಸಿದ್ಧ ಪಡಿಸುತ್ತಿದ್ದಾರೆ. ಈಗ ಕೆಲವು ಸ್ವಯಂ ಸೇವಕರು ಕೂಡ ನಮ್ಮ ಕೈ ಜೋಡಿಸಿದ್ದಾರೆ. ಆಯಾ ಪ್ರದೇಶದಲ್ಲಿದ್ದವರು ಕರೆ ಮಾಡಿದವರಿಗೆ, ಆಯಾ ಪ್ರದೇಶದಲ್ಲಿರುವ ಮನೆಗಳಲ್ಲಿ ತಯಾರಿಸಲಾದ ಆಹಾರವನ್ನು ಪೂರೈಸಲಾಗುತ್ತಿದೆ' ಎಂದು ಪೀಯೂಷ್ ಹೇಳಿದರು.

ಆಹಾರ ಬೇಕಾದವರು ಉಲ್ಲಾಸ್–99017 91982, ಮಂಜುನಾಥ್ 97389–48947, ಶಿವಂ 99860–66215 ಸಂಪರ್ಕಿಸಬಹುದು. ಆಹಾರ ತಯಾರಿಸಲು ಆಸಕ್ತರಿರುವವರು– ಸ್ನೇಹಾ 97419–55994ಗೆ ಕರೆ ಮಾಡಬಹುದು.

ಪತ್ರಕರ್ತರಿಗೆ ಆಹಾರ

ಹೋಂ ಐಸೊಲೇಶನ್‌ನಲ್ಲಿ ಇರುವ ಪತ್ರಕರ್ತರು ಮತ್ತು ಅವರ ಕುಟುಂಬದವರ ಮನೆ ಬಾಗಿಲಿಗೆ ಮಲ್ಲೇಶ್ವರದ 'ನಮ್ಮ ಕುಡ್ಲ' ಹೋಟೆಲ್ ವತಿಯಿಂದ ಆಹಾರ ಪೂರೈಸಲಾಗುತ್ತಿದೆ.

'ಬೆಳಿಗ್ಗೆ, ಮಧ್ಯಾಹ್ನ ಮತ್ತು ರಾತ್ರಿ ಆಹಾರ ನೀಡಲಾಗುತ್ತದೆ. ಊಟಕ್ಕೆ ತಕ್ಷಣ ದುಡ್ಡು ಕೊಡಬೇಕಿಲ್ಲ. ಮುಂದೆ ನೀವು ಹುಷಾರಾದ ಮೇಲೆ ಸಂಪರ್ಕಿಸಬಹುದು. ಅದೂ ಕಡ್ಡಾಯವಲ್ಲ' ಎಂದು ಬಿಜೆಪಿ ಮುಖಂಡ ಮಂಜುನಾಥ ಕನ್ಯಾಡಿ ಹೇಳಿದ್ದಾರೆ.

ಆಹಾರಕ್ಕಾಗಿ ಸಂಪರ್ಕಿಸಬೇಕಾದ ಸಂಖ್ಯೆಗಳು ಪ್ರಕಾಶ್ - 99011 03243, ಶಿವರಾಂ - 91 98457 72754, ನವೀನ - +91 99010 23639.

ಬೆಂಗಳೂರು ಹುಡುಗರ ಸೇವಾ ಮನೋಭಾವ

'ಹಸಿವು ಮುಕ್ತ ಬೆಂಗಳೂರು' ಅಡಿಯಲ್ಲಿ ಈ ಅಭಿಯಾನ ಹಮ್ಮಿಕೊಂಡಿದ್ದೇವೆ. ಬೀದಿ ಬದಿಯಲ್ಲಿ ಇದ್ದವರಿಗೆ, ಹಸಿವಿನಿಂದ ನರಳುತ್ತಿದ್ದವರಿಗೆ ಮಂಗಳವಾರ, ಬುಧವಾರ ಆಹಾರ ಪೊಟ್ಟಣಗಳನ್ನು ವಿತರಿಸಿದ್ದೇವೆ. ಕೋವಿಡ್‌ಗೆ ತುತ್ತಾಗಿ ಹೋಂ ಐಸೊಲೇಶನ್‌ನಲ್ಲಿರುವವರಿಗೆ ಮೇ 1ರಿಂದ ಆಹಾರ ವಿತರಿಸಲಾಗುತ್ತದೆ' ಎಂದು ಬೆಂಗಳೂರು ಹುಡುಗರು ತಂಡದ ಸ್ಥಾಪಕ ವಿನೋದ್ ಕರ್ತವ್ಯ ಹೇಳಿದರು.

'ದಿನಕ್ಕೆ ಒಂದು ಹೊತ್ತು ಆಹಾರದ ಪೊಟ್ಟಣ ವಿತರಿಸಲಾಗುತ್ತದೆ. ಒಬ್ಬ ರೋಗಿ ಇದ್ದರೆ ಅವರಿಗೆ ಎರಡು ಪಾಕೆಟ್‌ಗಳನ್ನು ನೀಡಲಾಗುತ್ತದೆ. ಕರೆ ಮಾಡಿದರೂ ಸಾಕು ಅವರ ಮನೆಗೇ ತಲುಪಿಸಲಾಗುತ್ತದೆ' ಎಂದು 'ಪ್ರಜಾವಾಣಿ'ಗೆ ತಿಳಿಸಿದರು.

'ಹೋಂ ಐಸೊಲೇಶನ್‌ನಲ್ಲಿರುವವರು ಆಹಾರಕ್ಕಾಗಿ ಹೊರಗಡೆ ಓಡಾಡುತ್ತಿರುವುದರಿಂದಲೂ ಸೋಂಕು ವ್ಯಾಪಕವಾಗಿ ಹರಡುತ್ತಿದೆ. ಹಣಕ್ಕೆ ತೆಗೆದುಕೊಳ್ಳಿ ಎಂದು ಹೇಳಿದರೆ ಅವರು ನಾವೇ ತೆಗೆದುಕೊಳ್ಳುತ್ತೇವೆ ಎಂದು ಹೊರಗೆ ಹೋಗಬಹುದು.



ಆಹಾರ ತಯಾರಿಸುತ್ತಿರುವ ಬೆಂಗಳೂರು ಹುಡುಗರು ತಂಡದ ಸದಸ್ಯರು

ಅವರು ಆಚೆ ಬರಬಾರದು ಎಂಬ ಉದ್ದೇಶದಿಂದ ಉಚಿತವಾಗಿ ಹಂಚುತ್ತಿದ್ದೇವೆ' ಎಂದು ಹೇಳಿದರು.

'40 ಯುವಕರು ಸೇರಿ ಈ ತಂಡ ಕಟ್ಟಿಕೊಂಡಿದ್ದೇವೆ. ನಾವೇ ಹಣ ಹಾಕಿ, ಅಡುಗೆ ಸಿದ್ಧ ಮಾಡುತ್ತಿದ್ದೇವೆ. ಅಭಿಯಾನ ಆರಂಭವಾದ ನಂತರ ಹೆಚ್ಚು ಕರೆಗಳು ಬರಬಹುದು. ಆಹಾರ ತಯಾರಿಸಲು ನೆರವು ನೀಡಲು ಬಯಸುವವರು ಪಡಿತರ ಅಥವಾ ಹಣ ನೀಡಬಹುದು' ಎಂದೂ ಹೇಳಿದರು.

ಆಹಾರ ಬೇಕಾದವರು, ಮೇ 1ರ ನಂತರ 96117–33032 ಸಂಪರ್ಕಿಸಬಹುದು.

ಸ್ಪಂದನೆ: ನಿಮ್ಮ ನೋವಿಗೆ ನಮ್ಮ ಧ್ವನಿ

'ಲಸಿಕೆ ಪಡೆಯಲು ಹರಸಾಹಸ'

ಬೆಂಗಳೂರು: ಕೊರೊನಾ ಲಸಿಕೆಯ ಎರಡನೆಯ ಡೋಸ್ ಪಡೆಯಲು ಪಟ್ಟ ಪಾಡನ್ನು ಸಾಹಿತಿ ಅಗ್ರಹಾರ ಕೃಷ್ಣಮೂರ್ತಿ ಹೇಳಿಕೊಂಡಿದ್ದಾರೆ.

'ಏಪ್ರಿಲ್ ಎರಡನೇ ವಾರದ ನಾನು ಖಾಸಗಿ ಆಸ್ಪತ್ರೆಯಲ್ಲಿ ₹250 ಕೊಟ್ಟು ಕೊರೊನಾ ಲಸಿಕೆ ಹಾಕಿಸಿಕೊಂಡಿದ್ದೆ. ಮೂರು ದಿನಗಳ ಹಿಂದೆ ಅದೇ ಆಸ್ಪತ್ರೆಗೆ ಹೋದಾಗ ಲಸಿಕೆ ನೀಡಲಾಗುತ್ತಿಲ್ಲ ಎಂದರು. ಮತ್ತೊಂದು ಖಾಸಗಿ ಆಸ್ಪತ್ರೆಗೆ ಹೋದರೂ ಅಲ್ಲಿಯೂ ಇಲ್ಲ ಎಂದರು. ಕೊನೆಗೆ, ಅರಕೆರೆಯ ಸರ್ಕಾರಿ ಆರೋಗ್ಯ ಕೇಂದ್ರಕ್ಕೆ ಮೂರು ದಿನಕ್ಕೆ ಮೊದಲು ಹೋದಾಗ ಇವತ್ತು 75 ಟೋಕನ್ ಮುಗೀತು, ನಾಳೆ 9 ಗಂಟೆಗೆ ಬಂದು ಟೋಕನ್ ತಗೊಳಿ ಎಂದರು'.

'ಮರುದಿನ ಬೆಳಿಗ್ಗೆ 8.30ಕ್ಕೇ ಹೋಗಿ ಸರದಿಯಲ್ಲಿ ನಿಂತಿದ್ದೆ. 10-15 ಜನರಿಗಿಂತ ಮೊದಲೇ ಟೋಕನ್ ಖಾಲಿ ಎಂದರು. ಅದರ ಮರುದಿನವೂ ಬೆಳಿಗ್ಗೆ ಬೇಗ ಹೋದರೂ 20ರಿಂದ 25 ಜನ ಅದಾಗಲೇ ನಿಂತಿದ್ದರು. ಅಂದು 50 ಟೋಕನ್ ಮಾತ್ರ ಕೊಡುವುದು ಎಂದು ಹೇಳಿದ್ದರು. 7-8 ಜನರಿದ್ದಾಗಲೇ ಖಾಲಿ ಆಯ್ತು ಅಂದ್ರು. ಹಿರಿಯ ನಾಗರಿಕರು ವಾಪಸ ತೆರಳಿದರು'.



ಅಗ್ರಹಾರ ಕೃಷ್ಣಮೂರ್ತಿ

'ಗುರುವಾರ ಬೆಳಿಗ್ಗೆ ಅದೇ ಕೇಂದ್ರದ ಎದುರು ಮತ್ತೆ ಸರದಿಯಲ್ಲಿ ನಿಂತೆ. 25 ಟೋಕನ್ ಕೊಡುವುದಾಗಿ ಹೇಳಿದ್ದವರು, ಇನ್ನೂ 10,12 ಜನರಿದ್ದಂತೆ ಮತ್ತೆ ಮುಗಿಯಿತು ಎಂದು ಹೇಳಿದರು. ಸಮಸ್ಯೆ ಏನೆಂದು ತಿಳಿಯಲು ಅರಕೆರೆ ಪಿಎಚ್‌ಸಿ ಒಳಗೆ ಹೋದರೆ ಯಾವ ಅಧಿಕಾರಿಯೂ ಇರಲಿಲ್ಲ. ಅಲ್ಲಿದ್ದವರು ಯಾರೂ ಜವಾಬ್ದಾರಿಯಿಂದ ಮಾತನಾಡಲಿಲ್ಲ'

'ಒಂದು ಸರ್ಕಾರಿ ಪ್ರಾಥಮಿಕ ಕೇಂದ್ರದ ಕತೆಯೇ ಹೀಗಾದರೆ, ಉಳಿದ ಕೇಂದ್ರಗಳು ಹೇಗಿವೆಯೊ?' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸಿ.ಡಿ. ತನಿಖೆ ಸದ್ಯ ತಟಸ್ಥ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚರ್ಚೆಗೆ ಗ್ರಾಸವಾಗಿದ್ದ ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಅವರಿಗೆ ಸೇರಿದ್ದು ಎನ್ನಲಾದ ಸಿ.ಡಿ. ಪ್ರಕರಣದ ತನಿಖೆ ಸದ್ಯ ತಟಸ್ಥವಾಗಿದೆ. ತನಿಖೆಗೆ ನಿಯೋಜಿಸಿದ್ದ ಎಸ್‌ಐಟಿ ಅಧಿಕಾರಿಗಳನ್ನು ಕರ್ಫ್ಯೂ ಕರ್ತವ್ಯಕ್ಕೆ ನಿಯೋಜಿಸಲಾಗಿದೆ.

ಸಂತ್ರಸ್ತೆ ಕಬ್ಬನ್ ಪಾರ್ಕ್ ಠಾಣೆಗೆ ದೂರು ನೀಡಿದ್ದರು. 'ಸಿ.ಡಿ. ಇಟ್ಟುಕೊಂಡು ಕೆಲವರು ಬ್ಲ್ಯಾಕ್‌ಮೇಲ್ ಮಾಡಿದ್ದಾರೆ' ಎಂದು ಆರೋಪಿಸಿ ರಮೇಶ ಜಾರಕಿಹೊಳಿ ಅವರೂ ಸದಾಶಿವನಗರ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು.

ಎರಡೂ ಪ್ರಕರಣದ ತನಿಖೆಗೆ ಬೆಂಗಳೂರು ಹೆಚ್ಚುವರಿ ಪೊಲೀಸ್ ಕಮಿಷನರ್ ಸೌಮೇಂದು ಮುಖರ್ಜಿ ನೇತೃತ್ವದಲ್ಲಿ ಎಸ್‌ಐಟಿ ರಚಿಸಲಾಗಿತ್ತು. ಅಜ್ಞಾತ ಸ್ಥಳದಲ್ಲಿದ್ದ ಯುವತಿ ನೇರವಾಗಿ ನ್ಯಾಯಾಲಯಕ್ಕೆ ತೆರಳಿ ಹೇಳಿಕೆ ದಾಖಲಿಸಿದ್ದರು. ಹೇಳಿಕೆ ಆಧರಿಸಿ ತನಿಖೆ ನಡೆಸಿದ್ದ ಎಸ್‌ಐಟಿ, ವೈದ್ಯಕೀಯ ಪರೀಕ್ಷೆ ಹಾಗೂ ಮಹಜರು ಪೂರ್ಣಗೊಳಿಸಿತ್ತು.

ವಿಚಾರಣೆಗೆ ಹಾಜರಾಗುವಂತೆ ರಮೇಶ ಜಾರಕಿಹೊಳಿ ಅವರಿಗೂ ನೋಟಿಸ್ ನೀಡಿತ್ತು. ಕೊರೊನಾ ಸೋಂಕು ತಗುಲಿದೆ ಎಂದು ಅವರು ಆಸ್ಪತ್ರೆಗೆ ದಾಖಲಾಗಿದ್ದರು. ಚೇತರಿಸಿಕೊಂಡ ಬಳಿಕ ಎಸ್‌ಐಟಿ ಮತ್ತೆ ನೋಟಿಸ್ ನೀಡಿತ್ತು. ಆದರೆ, ಹೋಂ ಐಸೋಲೇಷನ್ ಕಾರಣ ನೀಡಿ ವಿಚಾರಣೆಗೆ ಗೈರಾಗಿದ್ದಾರೆ. ಮತ್ತೆ ನೋಟಿಸ್ ನೀಡಿಲ್ಲವೆಂದು ಮೂಲಗಳು ಹೇಳಿವೆ.

ನಿಧನ ವಾರ್ತೆ

ಧನಲಕ್ಷ್ಮಮ್ಮ



ಬೆಂಗಳೂರು: ನಗರದ ಶ್ರೀ ಸಾಯಿಗೋಲ್ಡ್ ಪ್ಯಾಲೇಸ್ ಮಾಲೀಕ ಟಿ.ಎ. ಶರವಣ ಅವರ ತಾಯಿ ಧನಲಕ್ಷ್ಮಮ್ಮ (76) ಹೃದಯಾಘಾತದಿಂದಾಗಿ ಗುರುವಾರ ನಿಧನರಾದರು.

ಅವರಿಗೆ ಇಬ್ಬರು ಪುತ್ರರು ಹಾಗೂ ಐವರು ಪುತ್ರಿಯರು ಇದ್ದಾರೆ. 'ಚಾಮರಾಜಪೇಟೆಯಲ್ಲಿರುವ ಚಿತಾಗಾರದಲ್ಲಿ ಗುರುವಾರ ಅಂತ್ಯಕ್ರಿಯೆ ನಡೆಸಲಾಯಿತು' ಎಂದು ಶರವಣ ತಿಳಿಸಿದರು.

ಡಾ.ರಾಮೇಗೌಡ

ಕೆ.ಆರ್.ಪುರ: ರಾಶಿ ಡಯಾಗ್ನಸ್ಟಿಕ್ ಸೆಂಟರ್‌ನ ಸಂಸ್ಥಾಪಕ ಹಾಗೂ ವೈದ್ಯಕೀಯ ನಿರ್ದೇಶಕ ಡಾ.ರಾಮೇಗೌಡ (52) ಅವರು ಕೋವಿಡ್‌ನಿಂದ ಗುರುವಾರ ನಿಧನರಾದರು.

ಒಂದು ವಾರದ ಹಿಂದೆ ಅವರಿಗೆ ಕೋವಿಡ್ ಧೃಡಪಟ್ಟಿತ್ತು. ವೈಟ್ ಫೀಲ್ಡ್‌ನ ಕಾವೇರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಅವರಿಗೆ ಪತ್ನಿ, ಇಬ್ಬರು ಪುತ್ರರು ಇದ್ದಾರೆ.



ರಾಹುಲ್ ತಾರದಾಳೆ

ಬೆಂಗಳೂರು: ಬಿಜೆಪಿ ಯುವ ಮೋರ್ಚಾ ಕಾರ್ಯಾಲಯ ಕಾರ್ಯದರ್ಶಿ ರಾಹುಲ್ ತಾರದಾಳೆ ಅವರು ಕೋವಿಡ್‌ನಿಂದ ಮೃತಪಟ್ಟಿದ್ದಾರೆ.

ಬಿಜೆಪಿ 'ಧ್ಯೇಯ ಕಮಲ' ಮಾಸ ಪತ್ರಿಕೆಯ ಸಂಪಾದಕೀಯ ಮಂಡಳಿ ಸದಸ್ಯರಾಗಿದ್ದ ಅವರು, ಯುನಿವರ್ಸಿಟಿ ವಿಶ್ವೇಶ್ವರಯ್ಯ ಕಾಲೇಜ್ ಆಫ್ ಎಂಜಿನಿಯರಿಂಗ್‌ನಲ್ಲಿ ಅಸಿಸ್ಟೆಂಟ್ ಪ್ರೊಫೆಸರ್ ಆಗಿ ಕಾರ್ಯನಿರ್ವಹಿಸುತ್ತಿದ್ದರು.

ಖಾಸಗಿ ಆಸ್ಪತ್ರೆಗಳ ನಡೆ ಹೇಗಿರಬೇಕಿತ್ತು?

ಬೆಂಗಳೂರು: ಕೋವಿಡ್ ರೋಗಿಗಳ ಚಿಕಿತ್ಸೆಯ ವಿಚಾರದಲ್ಲಿ ನಗರದಲ್ಲಿ ಬಿಬಿಎಂಪಿ ಮತ್ತು ಖಾಸಗಿ ಆಸ್ಪತ್ರೆಗಳ ನಡುವೆ ಜಟಾಪಟಿಯೇ ನಡೆಯುತ್ತಿದೆ. ಕೆಲವು ಖಾಸಗಿ ಆಸ್ಪತ್ರೆಗಳು ಇಂತಹ ದುರಿತ ಕಾಲದಲ್ಲೂ ಲಾಭವೇ ಮುಖ್ಯ ಎಂಬಂತೆ ವರ್ತಿಸುತ್ತಿವೆ. ಹಿಂದೆಂದೂ ಕಂಡರಿಯದ ಬಿಕ್ಕಟ್ಟಿನ ಸಂದರ್ಭದಲ್ಲಿ ಖಾಸಗಿ ಆಸ್ಪತ್ರೆಗಳು ಹೇಗೆ ನಡೆದುಕೊಳ್ಳಬೇಕಿತ್ತು ಎಂಬ ಅಭಿಪ್ರಾಯವನ್ನು ಹಲವರು 'ಪ್ರಜಾವಾಣಿ' ಜತೆ ಹಂಚಿಕೊಂಡಿದ್ದಾರೆ.

ಹೆಣಗಳ ಮೇಲೆ ವ್ಯಾಪಾರ




ಆರೋಗ್ಯ ಕ್ಷೇತ್ರದಲ್ಲಿರುವ ಎಲ್ಲರೂ ಒಂದಾಗಿ ಸಾಂಕ್ರಾಮಿಕದ ವಿರುದ್ಧ ಹೋರಾಡಬೇಕಾದ ಸಂದರ್ಭವಿದು. ಕೋವಿಡ್ ರೋಗಿಗಳ ಚಿಕಿತ್ಸೆಯ ವಿಚಾರದಲ್ಲಿ ಕೆಲವು ಖಾಸಗಿ ಆಸ್ಪತ್ರೆಗಳು ಚೆಲ್ಲಾಟ ಆಡುತ್ತಿವೆ ಎಂಬುದು ದುರದೃಷ್ಟಕರ ಸಂಗತಿ.

ಜನರು ಚಿಕಿತ್ಸೆ ಇಲ್ಲದೇ ಪ್ರಾಣ ಬಿಡುವ ಸ್ಥಿತಿ ನಿರ್ಮಾಣವಾದ ಸಂದರ್ಭದಲ್ಲಿ ಹೆಣಗಳ ಮೇಲೆ ವ್ಯಾಪಾರ ಮಾಡುತ್ತಾ ಲಾಭದ ಲೆಕ್ಕಾಚಾರ ಹಾಕುವುದು ಸಲ್ಲದು. ಈಗ ವ್ಯಾಪಾರ ಮುಖ್ಯ ಆಗಬಾರದು. ಮಾನವೀಯತೆಯೇ ಮೇಲುಗೈ ಸಾಧಿಸಬೇಕು.

ರಾಜಶೇಖರ್ ಡಿ.ಎಸ್., ಬೆಂಗಳೂರು ಪ್ರಜಾ ವೇದಿಕೆ

ಪಾರದರ್ಶಕವಾಗಿರಲಿ

ಇಡೀ ಜನಸಮೂಹ ಬಿಕ್ಕಟ್ಟಿನಲ್ಲಿ ಸಿಲುಕಿದೆ. ಈ ಸಂದರ್ಭದಲ್ಲಿ ಖಾಸಗಿ ಆಸ್ಪತ್ರೆಗಳು ತಮ್ಮ ಬಳಿ ಇರುವ ಸೌಲಭ್ಯಗಳು, ಬೆಡ್‌ಗಳ ಕುರಿತು ಪಾರದರ್ಶಕವಾಗಿ ನಡೆದುಕೊಳ್ಳಬೇಕು. ಆಸ್ಪತ್ರೆಗಳು ಸೇವಾ ಕ್ಷೇತ್ರಕ್ಕೆ ಸೇರಿವೆ. ಹಣ ಗಳಿಸುವುದೇ ಇವುಗಳ ಮೂಲ ಉದ್ದೇಶವಲ್ಲ. ಕೋವಿಡ್ ರೋಗಿಗಳ ಚಿಕಿತ್ಸೆಗೆ ಸಹಕಾರ ನೀಡದ ಆಸ್ಪತ್ರೆಗಳ ಪರವಾನಗಿಯನ್ನೇ ರದ್ದು ಮಾಡುವ ಧೈರ್ಯವನ್ನು ಸರ್ಕಾರ ಪ್ರದರ್ಶಿಸಬೇಕು. ಆಗ ಮಾತ್ರ ವ್ಯವಸ್ಥೆ ಸರಿದಾರಿಗೆ ಬರುತ್ತದೆ.



ಎನ್.ಎಸ್. ಮುಕುಂದ್, ಸಿಟಿಜನ್ ಆ್ಯಕ್ಷನ್ ಫೋರಂ ಸಂಸ್ಥಾಪಕ

ರಾಜಕೀಯ ಮುಖಂಡರೇ ಹಿಂದಿರುತ್ತಾರೆ



ಕೋವಿಡ್ ವಿಚಾರದಲ್ಲಿ ಸರ್ಕಾರವೇ ಎಡವಿದೆ. ಖಾಸಗಿ ಆಸ್ಪತ್ರೆಗಳ ನಿಯಂತ್ರಣದ ಅಧಿಕಾರ ಪೂರ್ಣವಾಗಿ ರಾಜ್ಯ ಸರ್ಕಾರದ ಬಳಿ ಇದೆ. ಆದರೆ, ಬಹುತೇಕ ಖಾಸಗಿ ಆಸ್ಪತ್ರೆಗಳ ಹಿಂದೆ ರಾಜಕೀಯ ಮುಖಂಡರೇ ಇರುತ್ತಾರೆ. ಈ ಕಾರಣದಿಂದ ಕ್ರಮ ಆಗುವುದಿಲ್ಲ.

ಲಸಿಕೆ ಹಾಕುವುದರಲ್ಲೂ ಲೋಪ ನಡೆದಿದೆ. ಇದಕ್ಕೆ ಸರ್ಕಾರವೇ ಹೊಣೆ. ಒಂದು ವರ್ಷದ ಅವಧಿಯಲ್ಲಿ ಎರಡನೇ ಅಲೆ ಎದುರಿಸಲು ಯಾವ ಸಿದ್ಧತೆಯನ್ನೂ ಸರ್ಕಾರ ಮಾಡಿಲ್ಲ. ಜನರು ಆತಂಕದಿಂದ ಆಸ್ಪತ್ರೆ ಸೇರುವುದೇ ಹೆಚ್ಚುತ್ತಿದೆ. ಅದನ್ನೆಲ್ಲ ನಿಯಂತ್ರಿಸುವುದಕ್ಕೆ ಕ್ರಮ ಕೈಗೊಳ್ಳಬೇಕಿದೆ.

ಶಾಂತಲಾ ದಾಮ್ಲೆ, ಆಮ್ ಆದ್ಮಿ ಪಕ್ಷದ ರಾಜ್ಯ ಸಹ ಸಂಚಾಲಕಿ

ಇಷ್ಟ ಬಂದಂತೆ ವಸೂಲಿ

ಕೆಲವು ಖಾಸಗಿ ಆಸ್ಪತ್ರೆಗಳು ಕೋವಿಡ್ ಚಿಕಿತ್ಸೆಯನ್ನು ಹಬ್ಬದಂತೆ ಸಂಭ್ರಮಿಸುತ್ತಿವೆ. ಇಷ್ಟ ಬಂದ ಹಾಗೆ ಬಿಲ್ ವಸೂಲಿ ಮಾಡಬಹುದು ಎಂಬ ನಿಲುವು ತಳೆದಿವೆ. ಈಗ ಖಾಸಗಿ ಆಸ್ಪತ್ರೆಗಳನ್ನು ನಿಯಂತ್ರಿಸಲಾಗದ ಪರಿಸ್ಥಿತಿ ಇದೆ. ಬಿಬಿಎಂಪಿ ಮೊದಲೇ ಎಲ್ಲ ಆಸ್ಪತ್ರೆಗಳಲ್ಲೂ ಸಹಾಯ ಕೇಂದ್ರ ಆರಂಭಿಸಬೇಕಿತ್ತು. ಎಲ್ಲ ಕಡೆಗಳಲ್ಲೂ ವಾರ್ಡ್ ಸಮಿತಿಗಳನ್ನು ಬಳಸಿಕೊಂಡು ಕೆಲಸ ಮಾಡಿದ್ದರೆ ಹೆಚ್ಚು ಅನುಕೂಲ ಆಗುತ್ತಿತ್ತು. ಬಿಬಿಎಂಪಿ ಆರಂಭಿಸಿರುವ ನಿಯಂತ್ರಣ ಕೊಠಡಿ ಈಗ ಕೇವಲ ದೂರು ಕೊಠಡಿಯಾಗಿ ಉಳಿದಿದೆ.



ವಿಷ್ಣುಪ್ರಸಾದ್, ಸದಸ್ಯ, ಕಸವನಹಳ್ಳಿ ಫೋರಂ

ಎಲ್ಲರಿಗೂ ಜವಾಬ್ದಾರಿ ಇರಬೇಕು



ಕೋವಿಡ್ ಸಾಂಕ್ರಾಮಿಕ ಒಂದು ದುರಂತ. ಇಂತಹ ಸನ್ನಿವೇಶದಲ್ಲಿ ಸರ್ಕಾರಿ ಆಸ್ಪತ್ರೆಗಳು, ಖಾಸಗಿ ಆಸ್ಪತ್ರೆಗಳು, ಸರ್ಕಾರ ಯಾರೂ ಪರಿಸ್ಥಿತಿಯನ್ನು ದುರ್ಬಳಕೆ ಮಾಡಲು ಯತ್ನಿಸಬಾರದು. ಖಾಸಗಿ ಆಸ್ಪತ್ರೆಗಳು ಪಾರದರ್ಶಕವಾಗಿ ನಡೆದುಕೊಂಡು ನಿಗದಿತ ಹಾಸಿಗೆಗಳನ್ನು ಸರ್ಕಾರಕ್ಕೆ ಬಿಟ್ಟು ಕೊಡಬೇಕು. ಅದರ ಜತೆಯಲ್ಲೇ ಸರ್ಕಾರವೂ ಜವಾಬ್ದಾರಿಯಿಂದ ನಡೆದುಕೊಳ್ಳಬೇಕು. ಜನರ ಚಿಕಿತ್ಸೆಯ ಬಾಬ್ತು ಖಾಸಗಿ ಆಸ್ಪತ್ರೆಗಳು, ಪ್ರಯೋಗಾಲಯಗಳಿಗೆ ಕಳೆದ ವರ್ಷದಿಂದಲೂ ಬಾಕಿ ಮೊತ್ತ ಪಾವತಿಸಿಲ್ಲ ಎಂಬ ದೂರುಗಳಿವೆ. ಅದನ್ನು ಬೇಗ ಇತ್ಯರ್ಥ ಮಾಡಬೇಕು. ಇಲ್ಲವಾದರೆ ಖಾಸಗಿ ಆಸ್ಪತ್ರೆಗಳೂ ಸೇವೆಗೆ ಇರುವುದಿಲ್ಲ.

ವಿಕ್ರಂ ರೈ, ಪ್ರಧಾನ ಕಾರ್ಯದರ್ಶಿ,ಬೆಂಗಳೂರು ಅಪಾರ್ಟ್‌ಮೆಂಟ್‌ಗಳ ಫೆಡರೇಷನ್

ಆಕ್ಸಿಜನ್ ಸಿಲಿಂಡರ್‌ಗಳ ಕೊರತೆ ● ನಗರದಲ್ಲಿ ಕೋವಿಡ್ ಪೀಡಿತರಿಗೆ ತಪ್ಪದ ಪರದಾಟ

ಮನೆಯಲ್ಲಿ ಸಂಗ್ರಹ: ಆಸ್ಪತ್ರೆಗಳಲ್ಲಿ ಅಭಾವ

● ವರುಣ ಹೆಗಡೆ

ಬೆಂಗಳೂರು: ಆಸ್ಪತ್ರೆಗಳಲ್ಲಿ ವೈದ್ಯಕೀಯ ಆಮ್ಲಜನಕದ (ಆಕ್ಸಿಜನ್) ಕೊರತೆ ಉಂಟಾಗುತ್ತಿರುವುದರಿಂದ ನಗರದಲ್ಲಿ ಕೆಲವರು ಮುನ್ನೆಚ್ಚರಿಕೆಯಾಗಿ ಆಕ್ಸಿಜನ್ ಸಿಲಿಂಡರ್‌ಗಳನ್ನು ಮನೆಗೆ ಒಯ್ಯಲಾರಂಭಿಸಿದ್ದಾರೆ. ಇದರಿಂದಾಗಿ ಸಮಸ್ಯೆ ಮತ್ತಷ್ಟು ಹೆಚ್ಚಿದೆ.

2.24 ಲಕ್ಷಕ್ಕೂ ಅಧಿಕ ಸಕ್ರಿಯ ಪ್ರಕರಣಗಳು ನಗರದಲ್ಲಿದ್ದು, ತೀವ್ರ ನಿಗಾ ಘಟಕಕ್ಕೆ ದಾಖಲಾಗುವವರ ಸಂಖ್ಯೆ ಹೆಚ್ಚಳವಾಗಿದೆ. ಸೋಂಕಿತರಲ್ಲಿ ಶೇ 10ರಷ್ಟು ಮಂದಿ ತೀವ್ರ ಅಸ್ವಸ್ಥೆಯಿಂದ ಆಸ್ಪತ್ರೆಗೆ ದಾಖಲಾಗಲಾರಂಭಿಸಿದ್ದಾರೆ. ಇದರಿಂದ ಆಸ್ಪತ್ರೆಗಳಲ್ಲಿ ವೈದ್ಯಕೀಯ ಆಮ್ಲಜನಕಕ್ಕೆ ಬೇಡಿಕೆ ಹೆಚ್ಚಿದೆ. ಕೋವಿಡ್ ಪೂರ್ವದ ಸ್ಥಿತಿಗೆ ಹೋಲಿಸಿದಲ್ಲಿ ಬೇಡಿಕೆ 3-4 ಪಟ್ಟು ಹೆಚ್ಚಳವಾಗಿದೆ.

ಖಾಸಗಿ ಆಸ್ಪತ್ರೆಗಳು ಪ್ರತಿನಿತ್ಯ 300 ಟನ್ ಆಕ್ಸಿಜನ್‌ಗೆ ಬೇಡಿಕೆ ಇಡುತ್ತಿವೆ. ಆದರೆ, ಶೇ 50ರಷ್ಟು ಆಮ್ಲಜನಕವನ್ನು ಮಾತ್ರ ಪೂರೈಕೆದಾರರು ಒದಗಿಸುತ್ತಿದ್ದಾರೆ. ಇದರಿಂದಾಗಿ ಕೆಲ ಖಾಸಗಿ ಆಸ್ಪತ್ರೆಗಳು ರೋಗಿಗಳನ್ನು ದಾಖಲಿಸಿಕೊಳ್ಳಲು ನಿರಾಕರಿಸುತ್ತಿವೆ. ಇನ್ನೂ ಕೆಲವು ಆಸ್ಪತ್ರೆಗಳು ರೋಗಿಗಳನ್ನು ಬೇರೆ ಆಸ್ಪತ್ರೆಗಳಿಗೆ ಸ್ಥಳಾಂತರಿಸಲು ಮುಂದಾಗುತ್ತಿವೆ. ಹೀಗಾಗಿ, ಪೀಣ್ಯ ಸೇರಿದಂತೆ ವಿವಿಧೆಡೆಯಿಂದ ಮನೆಗೆ ಆಕ್ಸಿಜನ್ ಸಿಲಿಂಡರ್ ಕೊಂಡೊಯ್ಯುವವರ ಸಂಖ್ಯೆ ಹೆಚ್ಚಳವಾಗುತ್ತಿದೆ. 'ಪೂರೈಕೆದಾರರು ದುಪ್ಪಟ್ಟು ಹಣಕ್ಕೆ ಸಣ್ಣ ಆಕ್ಸಿಜನ್ ಸಿಲಿಂಡರ್‌ಗಳನ್ನು ಮಾರುತ್ತಿದ್ದಾರೆ. ಇದರಿಂದಾಗಿ ಆಮ್ಲಜನಕದ ಅಭಾವ ಮತ್ತಷ್ಟು ಹೆಚ್ಚಳವಾಗಿದೆ' ಎಂದು ವೈದ್ಯರು ಆರೋಪಿಸಿದ್ದಾರೆ.



ನಗರದಲ್ಲಿರುವ ಯುನಿಟಿ ಗ್ಯಾಸ್ ಕಂಪನಿಯಲ್ಲಿ ಸಿಬ್ಬಂದಿ ಆಕ್ಸಿಜನ್ ಸಿಲಿಂಡರ್‌ಗಳನ್ನು ತುಂಬುತ್ತಿರುವುದು – ಪ್ರಜಾವಾಣಿ ಚಿತ್ರ

ಪ್ರಜಾವಾಣಿ ವಿಶೇಷ

ಹೆಚ್ಚಿದ ಬೇಡಿಕೆ: 'ಕೋವಿಡ್ ಕಾಣಿಸಿಕೊಳ್ಳುವ ಮೊದಲು ಸಹ ಮನೆಗೆ ಕೊಂಡೊಯ್ಯಬಹುದಾದ ಆಕ್ಸಿಜನ್ ಸಿಲಿಂಡರ್‌ಗಳಿಗೆ ಕೆಲವರು ಬೇಡಿಕೆ ಇಡುತ್ತಿದ್ದರು. ಆಗ ಪೂರೈಕೆ ಮಾಡಲಾಗುತ್ತಿತ್ತು. ಕೋವಿಡ್ ಕಾಣಿಸಿಕೊಂಡ ಬಳಿಕ ಆಸ್ಪತ್ರೆಗಳಿಗೆ ಅಗತ್ಯಕ್ಕೆ ಅನುಸಾರವಾಗಿ ಒದಗಿಸಲು ಸಾಧ್ಯವಾಗುತ್ತಿಲ್ಲ. ಮನೆಗೆ ಕೊಂಡೊಯ್ಯಬಹುದಾದ ಸಿಲಿಂಡರ್‌ಗಳಿಗೆ ಪ್ರತಿನಿತ್ಯ 100ರಿಂದ 200 ಮಂದಿ ವಿಚಾರಿಸುತ್ತಿದ್ದಾರೆ. ತುರ್ತಾಗಿ ಅಗತ್ಯ ಇರುವವರಿಗೆ, ವೈದ್ಯರ ಶಿಫಾರಸು ಪತ್ರ ಹೊಂದಿರುವವರಿಗೆ ಒದಗಿಸುತ್ತಿದ್ದೇವೆ' ಎಂದು ಪೀಣ್ಯದ ಆಕ್ಸಿಜನ್ ಸಿಲಿಂಡರ್ ವಿತರಕರೊಬ್ಬರು ತಿಳಿಸಿದರು.

'ಸಮಾಲೋಚನೆ ನಡೆಸದಿದ್ದಲ್ಲಿ ಅಪಾಯ'

'ಸ್ವಯಂ ಆರೈಕೆ ಯಾವಾಗಲೂ ಅಪಾಯ. ಯಾವುದೇ ರೋಗಿ ಮನೆಗೆ ಆಕ್ಸಿಜನ್ ಸಿಲಿಂಡರ್ ಕೊಂಡೊಯ್ಯುವ ಮೊದಲು ವೈದ್ಯರ ಜತೆಗೆ ಸಮಾಲೋಚನೆ ನಡೆಸಬೇಕು. ಶ್ವಾಸಕೋಶಕ್ಕೆ ಹಾನಿಯಾಗಿದೆಯೇ ಎನ್ನುವುದನ್ನು ಖಚಿತಪಡಿಸಿಕೊಳ್ಳಬೇಕು. ಹಾನಿಯಾಗಿಲ್ಲ ಎಂದಾದಲ್ಲಿ ಮನೆಯಲ್ಲಿ ಆಕ್ಸಿಜನ್ ಪಡೆದುಕೊಳ್ಳಬಹುದು. ಇಲ್ಲವಾದಲ್ಲಿ ಶ್ವಾಸಕೋಶಕ್ಕೆ ಸಂಪೂರ್ಣ ಹಾನಿಯಾಗಿ, ಜೀವಕ್ಕೆ ಅಪಾಯವಾಗುವ ಸಾಧ್ಯತೆ ಇರುತ್ತದೆ. ಶ್ವಾಸಕೋಶಕ್ಕೆ ಹಾನಿಯಾಗಲು 3-4 ದಿನಗಳು ಬೇಕಾಗುತ್ತವೆ.' ಎಂದು ವಿಕ್ಟೋರಿಯಾ ಆಸ್ಪತ್ರೆಯ ವೈದ್ಯಕೀಯ ಅಧಿಕಾರಿ ಡಾ. ಶಿವಕುಮಾರ್ ತಿಳಿಸಿದರು.

'ವೈದ್ಯರ ಮಾರ್ಗದರ್ಶನ ಪಡೆದು, ಮನೆಯಲ್ಲಿಯೇ ಆಕ್ಸಿಜನ್ ಸಿಲಿಂಡರ್ ಅಳವಡಿಸಿಕೊಳ್ಳಬಹುದು. ರಕ್ತದಲ್ಲಿನ ಆಮ್ಲಜನಕದ ಪ್ರಮಾಣ ಪರೀಕ್ಷೆ ಮಾಡಿಕೊಳ್ಳುತ್ತಿರಬೇಕು. ಕೆಲವರು ಪೂರೈಕೆದಾರರಿಂದ ನೇರವಾಗಿ ಪಡೆದು, ಮನೆಗೆ ಕೊಂಡೊಯ್ಯುತ್ತಿದ್ದಾರೆ. ಇದರಿಂದ ಇನ್ನಷ್ಟು ಅಭಾವ ಸೃಷ್ಟಿಯಾಗುತ್ತಿದೆ' ಎಂದು ಬೆಂಗಳೂರು ನಗರ ಜಿಲ್ಲಾ ಶಸ್ತ್ರಚಿಕಿತ್ಸಕ ಡಾ. ಅನ್ಸರ್ ಅಹಮದ್ ತಿಳಿಸಿದರು.

'ಮನೆಯಲ್ಲಿ ಶೇಖರಿಸಿದ್ದಲ್ಲಿ ಸಮಸ್ಯೆ'

'ಆಮ್ಲಜನಕದ ಕೊರತೆ ಮುಂದುವರಿದಿದೆ. ನಮ್ಮ ಕೈಲಾದ ಪ್ರಯತ್ನ ಮಾಡುತ್ತಿದ್ದೇವೆ. ನಾವು 40 ಕೋವಿಡ್ ಪೀಡಿತರಿಗೆ ಚಿಕಿತ್ಸೆ ಒದಗಿಸುತ್ತಿದ್ದೇವೆ. 20 ಮಂದಿ ಸ್ಥಿತಿ ಗಂಭೀರವಾಗಿದೆ. ನಮಗೆ ಪ್ರತಿನಿತ್ಯ 40ರಿಂದ 45 ಜಂಬೋ ಸಿಲಿಂಡರ್ ಅಗತ್ಯವಿದೆ. ಆದರೆ, 25ರಿಂದ 30 ಸಿಲಿಂಡರ್ ಸಿಗುತ್ತಿದೆ' ಎಂದು ಆತ್ರೇಯಾ ಆಸ್ಪತ್ರೆಯ ಡಾ. ನಾರಾಯಣಸ್ವಾಮಿ ಅವರು ತಿಳಿಸಿದರು.


'ಆಸ್ಪತ್ರೆಗಳಲ್ಲಿ ಆಕ್ಸಿಜನ್ ಸಿಗದ ಕಾರಣ ಕೆಲವರು ದುಪ್ಪಟ್ಟು ಹಣ ನೀಡಿ, ಪೂರೈಕೆದಾರರಿಂದ ಖರೀದಿಸುತ್ತಿದ್ದಾರೆ' ಎಂದು ಅವರು ಹೇಳಿದರು.

ಗೃಹ ಸಚಿವ ಬಸವರಾಜ ಬೊಮ್ಮಾಯಿ

ಜೈಲುಗಳಲ್ಲಿ ಪಾಸಿಟಿವ್ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಸೋಂಕಿತ ಕೈದಿಗಳನ್ನು ಪ್ರತ್ಯೇಕವಾಗಿ ಇರಿಸಲಾಗಿದೆ ಎಂದರು

ಕೋವಿಡ್ ನಿರ್ವಹಣೆ: ಗೃಹ ರಕ್ಷಕ ದಳ ಬಳಕೆ

ಬೆಂಗಳೂರು: ಕೋವಿಡ್ ನಿರ್ವಹಣೆಗಾಗಿ 8,500 ಮಂದಿ ಗೃಹ ರಕ್ಷಕ ದಳದ ಸಿಬ್ಬಂದಿಯನ್ನು ಬಳಕೆ ಮಾಡಲು ನಿರ್ಧರಿಸಲಾಗಿದೆ ಎಂದು ಗೃಹ ಮತ್ತು ಕಾನೂನು ಸಚಿವ ಬಸವರಾಜ ಬೊಮ್ಮಾಯಿ ತಿಳಿಸಿದರು.



ಮುಖ್ಯಮಂತ್ರಿಯವರ ಗೃಹ ಕಚೇರಿ 'ಕೃಷ್ಣಾ'ದಲ್ಲಿ ಎಲ್ಲ ಜಿಲ್ಲೆಗಳ ಜಿಲ್ಲಾಧಿಕಾರಿಗಳು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಜತೆ ವಿಡಿಯೊ ಸಂವಾದದ ಬಳಿಕ ಅವರು ಸುದ್ದಿಗಾರರಿಗೆ ಈ ವಿಷಯ ತಿಳಿಸಿದರು.

ಬೆಂಗಳೂರು ನಗರದಲ್ಲಿ 15,000 ಮಂದಿ ಸಿವಿಲ್ ಡಿಫೆನ್ಸ್ ತರಬೇತಿ ಪಡೆದವರು ಇದ್ದಾರೆ. ಅವರನ್ನು ಪ್ರತಿ ವಾರ್ಡ್‌ನಲ್ಲಿ ಸೋಂಕಿತರನ್ನು ಪತ್ತೆ ಹಚ್ಚಲು ಮತ್ತು ಪ್ರತ್ಯೇಕಿಸುವ ಕೆಲಸಕ್ಕೆ ಬಳಸಲಾಗುವುದು. ಬೆಂಗಳೂರು ನಗರದ ಶುಚಿತ್ವ ಕಾಪಾಡಲು ಅಗ್ನಿಶಾಮಕ ಸಿಬ್ಬಂದಿಗೆ ಸೂಚಿಸಲಾಗಿದೆ ಎಂದು ಬೊಮ್ಮಾಯಿ ತಿಳಿಸಿದರು.

ರಾಜ್ಯದ ಎಲ್ಲ ಕಾರಾಗೃಹಗಳನ್ನು ಸ್ಯಾನಿಟೈಸ್ ಮಾಡುವಂತೆ ಸೂಚಿಸಲಾಗಿದೆ. ಸದ್ಯಕ್ಕೆ ಪರಿಸ್ಥಿತಿ ನಿಯಂತ್ರಣದಲ್ಲಿದ್ದು, ರಾಜ್ಯದ ಎಲ್ಲ ಕಾರಾಗೃಹಗಳಲ್ಲಿನ ಪರಿಸ್ಥಿತಿಯನ್ನು ನಿರಂತರವಾಗಿ ಪರಿಶೀಲಿಸುವುದಾಗಿ ಅವರು ಹೇಳಿದರು.

ಊರಿಗೆ ಹೋಗುವ ಧಾವಂತ ● ರಾತ್ರಿ ರೈಲು, ಬೆಳಿಗ್ಗೆಯೇ ನಿಲ್ದಾಣಕ್ಕೆ ಹಾಜರು

ನಿಲ್ದಾಣದಲ್ಲೇ ದಿನ ಕಳೆದ ಪ್ರಯಾಣಿಕರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊರೊನಾ ಸೋಂಕು ಹರಡುವಿಕೆ ತಡೆಗಾಗಿ ನಗರದಲ್ಲಿ ಕರ್ಫ್ಯೂ ಜಾರಿ ಮಾಡಲಾಗಿದ್ದು, ಇದರ ನಡುವೆಯೂ ಸಾವಿರಾರು ಮಂದಿ ತಮ್ಮೂರಿಗೆ ಹೊರಟಿದ್ದಾರೆ.

ರಾಜ್ಯದಾದ್ಯಂತ ಗೂಡ್ಸ್ ವಾಹನಗಳನ್ನು ಹೊರತುಪಡಿಸಿ ಎಲ್ಲ ಬಗೆಯ ವಾಹನಗಳ ಸಂಚಾರವನ್ನು ನಿರ್ಬಂಧಿಸಲಾಗಿದೆ. ರೈಲು ಹಾಗೂ ವಿಮಾನ ಪ್ರಯಾಣಿಕರ ಅನುಕೂಲಕ್ಕಾಗಿ ಮಾತ್ರ ಕ್ಯಾಬ್, ಬಸ್ ಹಾಗೂ ಆಟೊ ಬಳಕೆಗೆ ಅನುಮತಿ ನೀಡಲಾಗಿದೆ.

ಅದೇ ಕಾರಣಕ್ಕೆ ರೈಲು ನಿಲ್ದಾಣ ಹಾಗೂ ವಿಮಾನ ನಿಲ್ದಾಣಗಳಲ್ಲಿ ಜನರು ಹೆಚ್ಚಿನ ಸಂಖ್ಯೆಯಲ್ಲಿ ಸೇರುತ್ತಿದ್ದಾರೆ. ಗಂಟುಮೂಟೆ ಸಮೇತ ಬೆಂಗಳೂರು ತೊರೆದು ತಮ್ಮೂರಿನ ರೈಲು ಹಾಗೂ ವಿಮಾನ ಹತ್ತುತ್ತಿದ್ದಾರೆ.

ನಿತ್ಯ ಬೆಳಿಗ್ಗೆ 6 ಗಂಟೆಯಿಂದ 10 ಗಂಟೆಯವರೆಗೆ ಅಗತ್ಯ ವಸ್ತುಗಳ ಖರೀದಿಗೆ ಅವಕಾಶ ಕಲ್ಪಿಸಲಾಗಿದ್ದು, ಈ ಸಂದರ್ಭದಲ್ಲಿ ಸಾರ್ವಜನಿಕರು ನಗರದಲ್ಲಿ ಓಡಾಡಬಹುದಾಗಿದೆ. ಬೆಳಿಗ್ಗೆ 10 ಗಂಟೆ ನಂತರ ಯಾರಾದರೂ ರಸ್ತೆಯಲ್ಲಿ ಅನಗತ್ಯವಾಗಿ ಸುತ್ತಾಡಿದರೆ ಅಂಥವರ ವಿರುದ್ಧ ಪೊಲೀಸರು ಕಾನೂನು ಕ್ರಮ ಜರುಗಿಸುತ್ತಿದ್ದಾರೆ. ವಾಹನಗಳನ್ನು ಜಪ್ತಿ ಮಾಡುತ್ತಿದ್ದಾರೆ.

ಹೊರ ಜಿಲ್ಲೆ ಹಾಗೂ ಹೊರ ರಾಜ್ಯಗಳಿಗೆ ಹೋಗಲು ರೈಲಿನಲ್ಲಿ ಟಿಕೆಟ್ ಕಾಯ್ದಿರಿಸಿರುವ ಪ್ರಯಾಣಿಕರು, ನಗರದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ನಿಲ್ದಾಣಕ್ಕೆ ಬೆಳಿಗ್ಗೆಯೇ ಬರುತ್ತಿದ್ದಾರೆ.

'ರಾತ್ರಿ ರೈಲುಗಳಿಗೆ ಟಿಕೆಟ್ ಕಾಯ್ದಿರಿಸುತ್ತಿರುವ ಪ್ರಯಾಣಿಕರು, ಬೆಳಿಗ್ಗೆ 6ರಿಂದ 10 ಗಂಟೆಯೊಳಗೆ ನಿಲ್ದಾಣಕ್ಕೆ ಬರುತ್ತಿದ್ದಾರೆ. ರಾತ್ರಿ ನಿಗದಿತವೇಳೆಗೆ ನಿಲ್ದಾಣಕ್ಕೆ ಬರುವಾಗ ಪೊಲೀಸರು ತೊಂದರೆ ಉಂಟು ಮಾಡಬಹುದೆಂಬ ಆತಂಕ ಪ್ರಯಾಣಿಕರಲ್ಲಿದೆ' ಎಂದು ರೈಲು ನಿಲ್ದಾಣದ ಸಿಬ್ಬಂದಿಯೊಬ್ಬರು ಹೇಳಿದರು.

ನಿಲ್ದಾಣದಲ್ಲೇ ಪ್ರಯಾಣಿಕರು ಗಂಟುಮೂಟೆ ಇಟ್ಟುಕೊಂಡು ಮಲಗುತ್ತಿದ್ದಾರೆ. ಕೆಲವರು, ನಿಲ್ದಾಣದಲ್ಲಿ ಸಿಗುವ ತಿಂಡಿ– ಊಟ ಮಾಡಿ ಕಾಲ ಕಳೆಯುತ್ತಿದ್ದಾರೆ. ಗುರುವಾರವೂ ಸಾವಿರಾರು ಮಂದಿ ನಿಲ್ದಾಣದಲ್ಲೇ ಜಮಾಯಿಸಿದ್ದು ಕಂಡುಬಂತು.

ಟಿಕೆಟ್ ತೋರಿಸಿ ಪ್ರಯಾಣ: ವಿಮಾನ ನಿಲ್ದಾಣಕ್ಕೆ ಹೋಗುವವರು ಹಾಗೂ ನಿಲ್ದಾಣದಿಂದ ಮನೆಗೆ ಬರುವವರು ಪೊಲೀಸರಿಗೆ ಟಿಕೆಟ್ ತೋರಿಸಿ ಪ್ರಯಾಣಿಸುತ್ತಿದ್ದಾರೆ.

'ಕರ್ಫ್ಯೂ ಜಾರಿಯಲ್ಲಿದ್ದರೂ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆಯಲ್ಲಿ ಕ್ಯಾಬ್, ಕಾರುಗಳ ಓಡಾಟವಿದೆ. ಪರಿಶೀಲನೆ ನಡೆಸಿದಾಗ, ವಿಮಾನದ ಟಿಕೆಟ್ ತೋರಿಸುತ್ತಿದ್ದಾರೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಸಂಚಾರ ದಟ್ಟಣೆ: ಹಲವೆಡೆ ಗುರುವಾರ ಸಂಚಾರ ದಟ್ಟಣೆ ಕಂಡುಬಂತು.

'ಬೆಳಿಗ್ಗೆ 10 ಗಂಟೆ ನಂತರವೂ ಕೆ.ಆರ್. ಮಾರುಕಟ್ಟೆ, ಯಶವಂತಪುರ, ಮೇಖ್ರಿ ವೃತ್ತ, ಕಾರ್ಪೊರೇಷನ್ ವೃತ್ತ, ತುಮಕೂರು ರಸ್ತೆ, ಆನಂದರಾವ್ ವೃತ್ತ ಸೇರಿ ಹಲವೆಡೆ ಆಟೊ, ಕ್ಯಾಬ್, ಕಾರುಗಳ ಸಂಚಾರವಿತ್ತು. ಅಲ್ಲಲ್ಲ ದಟ್ಟಣೆ ಉಂಟಾಗಿ ವಾಹನಗಳು ಸಾಲುಗಟ್ಟಿ ನಿಂತಿದ್ದವು. ಅಗತ್ಯ ವಸ್ತುಗಳನ್ನು ಖರೀದಿಸಲು ಬಂದು ತಡವಾಯಿತೆಂದು ಹಲವರು ಕಾರಣ ನೀಡಿದರು. ಕೆಲವರ ವಾಹನಗಳನ್ನು ಜಪ್ತಿ ಮಾಡಲಾಯಿತು' ಎಂದು ಪೊಲೀಸ್ ಅಧಿಕಾರಿ ಹೇಳಿದರು.

ಪಶ್ಚಿಮ ವಿಭಾಗ ವ್ಯಾಪ್ತಿಯಲ್ಲಿ ಅನಗತ್ಯವಾಗಿ ಸಂಚರಿಸುತ್ತಿದ್ದವರ 175 ವಾಹನಗಳನ್ನು ಪೊಲೀಸರು ಜಪ್ತಿ ಮಾಡಲಾಗಿದೆ. ಕೆಲ ಜನ, ಕಂಪನಿ ಹಾಗೂ ಇತರೆ ಸೇವೆಗಳ ಗುರುತಿನ ಚೀಟಿಗಳನ್ನು ತೋರಿಸಿ ನಗರದಲ್ಲಿ ಸಂಚರಿಸಿದರು.



ತಮ್ಮ ಊರುಗಳಿಗೆ ತೆರಳುವ ಸಲುವಾಗಿ ಗುರುವಾರ ನಗರದ ರೈಲ್ವೆ ನಿಲ್ದಾಣಕ್ಕೆ ಬಂದಿದ್ದ ಜನರು –ಪ್ರಜಾವಾಣಿ ಚಿತ್ರ

ಕುದುರೆ ಏರಿ ಬಂದ ಯುವಕ

ಕುದುರೆ ಏರಿ ಬಂದಿದ್ದ ಯುವಕರೊಬ್ಬರನ್ನು ಕೆ.ಆರ್. ಮಾರುಕಟ್ಟೆ ಬಳಿ ತಡೆದು ಪೊಲೀಸರು ವಿಚಾರಣೆ ನಡೆಸಿದರು.

'ಮದುವೆಯೊಂದಕ್ಕೆ ಹೊರಟಿದ್ದೇನೆ. ಮಧುಮಗನನ್ನು ಕುದುರೆ ಮೇಲೆ ಹತ್ತಿಸಿ ನಿಗದಿತ ಜಾಗದಲ್ಲೇ ಮೆರವಣಿಗೆ ಮಾಡಬೇಕು. ಅದಕ್ಕಾಗಿ ಅನುಮತಿ ಸಿಕ್ಕಿದೆ' ಎಂದು ಯುವಕ ಪೊಲೀಸರಿಗೆ ಹೇಳಿದ್ದ. ನಂತರ, ಅವರನ್ನು ಬಿಟ್ಟು ಕಳುಹಿಸಲಾಯಿತು.

ಐಸಿಯು ಬೆಡ್ ಹೆಸರಿನಲ್ಲಿ ವಂಚನೆ

ಹೌಸ್ ಕೀಪಿಂಗ್ ಏಜೆನ್ಸಿ ನಡೆಸುತ್ತಿದ್ದ ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊರೊನಾ ಸೋಂಕಿತರಿಗೆ ಬಿಬಿಎಂಪಿ ವತಿಯಿಂದ ಐಸಿಯು ಬೆಡ್ ಕೊಡಿಸುವುದಾಗಿ ಹೇಳಿ ಜನರಿಂದ ಹಣ ಪಡೆದು ವಂಚಿಸುತ್ತಿದ್ದ ಆರೋಪಿ ಮನೀಶ್ ಸರ್ಕಾರ್ ಎಂಬಾತನನ್ನು ಜಯನಗರ ಪೊಲೀಸರು ಬಂಧಿಸಿದ್ದಾರೆ.

'ಪಶ್ಚಿಮ ಬಂಗಾಳದ ಮನೀಶ್, ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದ. ಮಲ್ಲೇಶ್ವರದಲ್ಲಿ ನೆಲೆಸಿ, ಹೌಸ್ ಕೀಪಿಂಗ್ ಏಜೆನ್ಸಿ ಆರಂಭಿಸಿದ್ದ. ಸ್ಥಳೀಯ ನಿವಾಸಿಯೊಬ್ಬರು ನೀಡಿದ್ದ ದೂರಿನನ್ವಯ ಆತನನ್ನು ಬಂಧಿಸಲಾಗಿದ್ದು, ಸದ್ಯ ಆತ ನ್ಯಾಯಾಂಗ ಬಂಧನದಲ್ಲಿದ್ದಾನೆ' ಎಂದು ದಕ್ಷಿಣ ವಿಭಾಗದ ಡಿಸಿಪಿ ಹರೀಶ್ ಪಾಂಡೆ ತಿಳಿಸಿದರು.

'ಕೊರೊನಾ ಸೋಂಕಿತರಿಗೆ ಐಸಿಯು ಬೆಡ್ ಒದಗಿಸಲಾಗುವುದು' ಎಂಬುದಾಗಿ ಹೇಳಿ ಮೊಬೈಲ್ ನಂಬರ್ ಸಹಿತ ಆರೋಪಿ ಸಂದೇಶ ಹರಿಬಿಟ್ಟಿದ್ದ. ಹಲವು ವಾಟ್ಸ್‌ಆ್ಯಪ್ ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಸಂದೇಶ ಹರಿದಾಡಿತ್ತು.'

'ಸಂದೇಶ ನಂಬಿದ್ದ ದೂರುದಾರ, ತಮ್ಮ ತಾಯಿಗೆ ಬೆಡ್ ಕೊಡಿಸುವಂತೆ ಕೋರಿ ಆರೋಪಿಯನ್ನು ಸಂಪರ್ಕಿಸಿದ್ದರು. 'ಬೆಡ್ ಕೊಡಿಸಲು ಹಣ ಖರ್ಚಾಗುತ್ತದೆ' ಎಂದಿದ್ದ ಆರೋಪಿ, ದೂರುದಾರರಿಂದ ಗೂಗಲ್ ಪೇ ಮೂಲಕ ₹ 20,000 ಪಡೆದಿದ್ದ. ಅದಾದ ನಂತರ ದೂರುದಾರರ ಮೊಬೈಲ್ ನಂಬರ್ ಬ್ಲಾಕ್ ಮಾಡಿ ನಾಪತ್ತೆಯಾಗಿದ್ದ' ಎಂದೂ ಹರೀಶ್ ಪಾಂಡೆ ಹೇಳಿದರು.

'ದೂರುದಾರರ ತಂದೆ–ತಾಯಿ ಇಬ್ಬರಿಗೂ ಕೊರೊನಾ ಸೋಂಕು ತಗುಲಿತ್ತು. ತಾಯಿ ಆರೋಗ್ಯ ತೀವ್ರ ಹದಗೆಟ್ಟಿತ್ತು. ಅವರಿಗಾಗಿ ಐಸಿಯು ಬೆಡ್ ಹುಡುಕುತ್ತಿದ್ದರು. ಆದರೆ, ಏಪ್ರಿಲ್ 24ರಂದು ತಾಯಿ ತೀರಿಕೊಂಡಿದ್ದಾರೆ. ಮರುದಿನ ತಂದೆ ಸಹ ಅಸುನೀಗಿದ್ದಾರೆ. ಅವರಿಬ್ಬರ ಅಂತ್ಯಕ್ರಿಯೆ ಮುಗಿಸಿದ ಬಳಿಕ ದೂರುದಾರ ಠಾಣೆಗೆ ಬಂದು ದೂರು ನೀಡಿದ್ದರು' ಎಂದೂ ಅವರು ವಿವರಿಸಿದರು.

'ತಮಗಾದ ವಂಚನೆ ಬೇರೆ ಯಾರಿಗೂ ಆಗಬಾರದೆಂದು ದೂರುದಾರರು ಬಯಸಿದ್ದರು. ದೂರು ದಾಖಲಾಗುತ್ತಿದ್ದಂತೆ ಆರೋಪಿಯನ್ನು ಬಂಧಿಸಲಾಗಿದೆ. ಇಂಥ ಆರೋಪಿಗಳ ಬಗ್ಗೆ ಜನರು ಎಚ್ಚರಿಕೆ ವಹಿಸಬೇಕು. ಬೆಡ್ ಹಂಚಿಕೆ ಪ್ರಕ್ರಿಯೆ ಸಾಫ್ಟ್‌ವೇರ್ ಮೂಲಕ ಆಗುತ್ತಿದ್ದು, ಯಾವುದೇ ಹಣ ನೀಡಬೇಕಿಲ್ಲ. ಶ್ರೀಮಂತರು ಹಾಗೂ ಬಡವರೆಂಬ ತಾರತಮ್ಯವೂ ಇಲ್ಲ' ಎಂದರು.

ಐಸಿಯು ಬೆಡ್, ಆಕ್ಸಿಜನ್ ಹಾಗೂ ಇತರೆ ಸೇವೆ ಹೆಸರಿನಲ್ಲಿ ಹಣಕ್ಕೆ ಬೇಡಿಕೆ ಇಟ್ಟು ವಂಚಿಸಲು ಯತ್ನಿಸುವವರ ಬಗ್ಗೆ ಸಾರ್ವಜನಿಕರು ಪೊಲೀಸ್ ಠಾಣೆಗೆ ಮಾಹಿತಿ ನೀಡಬೇಕು

ಹರೀಶ್ ಪಾಂಡೆ

ದಕ್ಷಿಣ ವಿಭಾಗದ ಡಿಸಿಪಿ

'ಸಿಟಿ ಸ್ಕ್ಯಾನ್‌ಗೆ ಏಕರೂಪ ದರ ನಿಗದಿಪಡಿಸಿ'

ಬೆಂಗಳೂರು: 'ಖಾಸಗಿ ಸಿಟಿ ಸ್ಕ್ಯಾನ್ ಸೆಂಟರ್‌ಗಳು ಮನಸೋ ಇಚ್ಛೆ ಹಣ ವಸೂಲಿ ಮಾಡುತ್ತಿರುವ ಬಗ್ಗೆ ದೂರುಗಳು ಬಂದಿವೆ. ಹಾಗಾಗಿ, ಏಕರೂಪದ ದರ ವನಿಗದಿಪಡಿಸಬೇಕು' ಎಂದು ಸಂಸದ ಪಿ.ಸಿ. ಮೋಹನ್ ಅವರು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಅವರಿಗೆ ಮನವಿ ಮಾಡಿ ಪತ್ರ ಬರೆದಿದ್ದಾರೆ.

'ಕೋವಿಡ್ ಎರಡನೇ ಅಲೆಯಲ್ಲಿ ವಿವಿಧ ರೀತಿಯ ರೋಗ ಲಕ್ಷಣಗಳು ಗೋಚರಿಸುತ್ತಿವೆ. ವೈದ್ಯರ ಸಲಹೆಯಂತೆ ಆರ್‌ಟಿ–ಪಿಸಿಆರ್ ಪರೀಕ್ಷೆ ಮಾಡಿಸಿದರೆ ಕೆಲವರಿಗೆ ನೆಗಟಿವ್ ವರದಿ ಬರುತ್ತಿದೆ. ಆದರೆ, ಸಿಟಿ ಸ್ಕ್ಯಾನ್‌ನಲ್ಲಿ ಸೋಂಕಿತರಾಗಿರುವುದು ದೃಢಪಡುತ್ತಿದೆ. ಏಕರೂಪ ದರ ಇಲ್ಲದ ಕಾರಣ ಖಾಸಗಿ ಸಿಟಿ ಸ್ಕ್ಯಾನ್ ಸೆಂಟರ್‌ಗಳು ಹೆಚ್ಚಿನ ಹಣ ಪಡೆಯುತ್ತಿವೆ. ಇದಕ್ಕೆ ಕಡಿವಾಣ ಹಾಕಬೇಕಿದೆ' ಎಂದು ತಿಳಿಸಿದ್ದಾರೆ.

ಕೋವಿಡ್ –19 ಭೀತಿ: ನೆರವಿಗೆ ಬಾರದ ಸಂಬಂಧಿಕರು

ನರಳಾಡಿ ರಸ್ತೆಯಲ್ಲೇ ಪ್ರಾಣಬಿಟ್ಟ ಮಹಿಳೆ

ಪ್ರಜಾವಾಣಿ ವಾರ್ತೆ

ಮುಳಬಾಗಿಲು: ಕೋವಿಡ್ ಭೀತಿಯಿಂದ ಸಂಬಂಧಿಕರು ಸೇರಿ ಯಾರೊಬ್ಬರೂ ನೆರವಿಗೆ ಬಾರದೆ, ತೀವ್ರ ಅಸ್ವಸ್ಥರಾಗಿದ್ದ ಮಹಿಳೆಯೊಬ್ಬರು ನಡು ರಸ್ತೆಯಲ್ಲಿಯೇ ನರಳಿ ಪ್ರಾಣ ಬಿಟ್ಟ ಘಟನೆ ಗುರುವಾರ ತಾಲ್ಲೂಕಿನ ಸಂಗಂಡ್ಲಹಳ್ಳಿಯಲ್ಲಿ ನಡೆದಿದೆ.

ಶವದ ಬಳಿ ತೆರಳಲು ಗ್ರಾಮಸ್ಥರು ಹಿಂಜರಿದ ಕಾರಣ ಹಲವು ಗಂಟೆಗಳು ಶವ ನಡುರಸ್ತೆಯಲ್ಲಿಯೇ ಅನಾಥವಾಗಿ ಬಿದ್ದಿತ್ತು. ಕೊನೆಗೆ ತಾಲ್ಲೂಕು ಆಡಳಿತದವರು ಅಂತ್ಯಕ್ರಿಯೆ ನಡೆಸಿದರು.

ಜ್ವರ ಮತ್ತು ಉಸಿರಾಟ ತೊಂದರೆಯಿಂದ ಬಳಲುತ್ತಿದ್ದ 50 ವರ್ಷದ ಮಹಿಳೆ ನೆರವು ಕೋರಿ ಬೆಳಿಗ್ಗೆಯೇ ರಸ್ತೆಗೆ ಬಂದು ಕುಸಿದು ಬಿದ್ದಿದ್ದಾಳೆ. ಮದ್ಯ ವ್ಯಸನಿ ಪತಿ ಹಾಗೂ ಬಂಧುಗಳು ಸೇರಿ ಯಾರೊಬ್ಬರೂ ನೆರವಿಗೆ ಧಾವಿಸಲಿಲ್ಲ. ಮಹಿಳೆಗೆ ಕೊರೊನಾ ಸೋಂಕು ತಗುಲಿರಬಹುದು ಎಂಬ ಭೀತಿಯಿಂದ ದೂರದಿಂದಲೇ ಮಹಿಳೆಯ ನರಳಾಟ ನೋಡುತ್ತ ನಿಂತಿದ್ದರು.

ಹೆಚ್ಚಿನವರು ಮಹಿಳೆಯ ನರಳಾಟ ಮತ್ತು ಸಾವಿನ ದೃಶ್ಯವನ್ನು ಮೊಬೈಲ್‌ನಲ್ಲಿ ಸೆರೆ ಹಿಡಿಯುವಲ್ಲಿ ನಿರತರಾಗಿದ್ದರೇ ಹೊರತು ಅಂಗಲಾಚಿ ಬೇಡಿಕೊಂಡರೂ ಯಾರೊಬ್ಬರೂ ಆಕೆಯ ನೆರವಿಗೆ ಧಾವಿಸಿರಲಿಲ್ಲ.

ಮಧ್ಯಾಹ್ನ 1 ಗಂಟೆಗೆ ಸ್ಥಳಕ್ಕೆ ಬಂದ ತಹಶೀಲ್ದಾರ್ ಕೆ.ಎನ್.ರಾಜಶೇಖರ್ ಶವ ಸಾಗಿಸಲು ಗ್ರಾಮಸ್ಥರ ನೆರವು ಕೇಳಿದ್ದಾರೆ. ಆಗಲೂ ಯಾರು ಮುಂದೆ ಬಂದಿಲ್ಲ. ಪಂಚಾಯಿತಿ ಸಿಬ್ಬಂದಿ ಮತ್ತು ಪೊಲೀಸರ ನೆರವಿನಿಂದ ಟ್ರ್ಯಾಕ್ಟರ್‌ನಲ್ಲಿ ಹೆಣ ಸಾಗಿಸಿ, ಅಂತ್ಯಕ್ರಿಯೆ ನಡೆಸಿದರು. ಮೃತಳಿಗೆ ಕೊರೊನಾ ಸೋಂಕು ತಗುಲಿದ್ದ ಕುರಿತು ಖಚಿತ ಮಾಹಿತಿ ಇಲ್ಲ.



ಮಹಿಳೆಯೊಬ್ಬರ ಶವ ಗ್ರಾಮದ ನಡುರಸ್ತೆಯಲ್ಲೇ ಅನಾಥವಾಗಿ ಬಿದ್ದಿತ್ತು

ಮಾವಳ್ಳಿಪುರದಲ್ಲಿ ಪ್ರತಿಭಟನೆ ● ಕೋರ್ಟ್ ಆದೇಶ ಪಾಲನೆಗೆ ಒತ್ತಾಯ

ಬಯಲು ಶವಸಂಸ್ಕಾರ: ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾವಳ್ಳಿಪುರದ ಬಯಲು ಪ್ರದೇಶದಲ್ಲಿ ಕೋವಿಡ್ ಶವ ಸಂಸ್ಕಾರಕ್ಕೆ ಮುಂದಾಗಿರುವ ಬಿಬಿಎಂಪಿ ಕ್ರಮ ಖಂಡಿಸಿ ಗ್ರಾಮಸ್ಥರು ಗುರುವಾರವೂ ಪ್ರತಿಭಟನೆ ಮುಂದುವರಿಸಿದರು.

ಬುಧವಾರದಿಂದ ಪ್ರತಿಭಟನೆ ಆರಂಭಿಸಿದ್ದ ಗ್ರಾಮಸ್ಥರು, ಬಿಬಿಎಂಪಿ ತನ್ನ ನಿರ್ಧಾರ ವಾಪಸ್ ತೆಗೆದುಕೊಳ್ಳುವವರೆಗೆ ಪ್ರತಿಭಟನೆ ನಿಲ್ಲಿಸುವುದಿಲ್ಲ ಎಂದು ಪಟ್ಟು ಹಿಡಿದರು.

ಕೋವಿಡ್ ಕರ್ಫ್ಯೂ ಜಾರಿಯಲ್ಲಿ ಇದ್ದುದರಿಂದ ಒಂದೊಂದು ಕಡೆ ಕೇವಲ ಐದೈದು ಜನ ನಿಂತು ಪ್ರತಿಭಟಿಸಿದರು. ಬಿಬಿಎಂಪಿ, ಕಂದಾಯ ಇಲಾಖೆ ಮತ್ತು ಪೊಲೀಸ್ ವಾಹನಗಳು ಗ್ರಾಮವನ್ನು ಪ್ರವೇಶಿಸಿದಂತೆ ತಡೆದರು.

'ಬೆಂಗಳೂರು ನಗರದ ತ್ಯಾಜ್ಯವನ್ನು ಗ್ರಾಮದಲ್ಲಿ ತಂದು ಸುರಿಯಲಾಗುತ್ತಿದೆ. ಇದನ್ನು ವಿರೋಧಿಸಿ ನಾವು ನ್ಯಾಯಾಲಯದ ಮೊರೆ ಹೋಗಿದ್ದೆವು. ಕಸದ ಸಮಸ್ಯೆಯಿಂದ ಗ್ರಾಮದ ಮೇಲಾಗುತ್ತಿರುವ ದುಷ್ಪರಿಣಾಮಗಳು ಮತ್ತು ಗ್ರಾಮದ ಜನ–ಜಾನುವಾರುಗಳ ಆರೋಗ್ಯ ಸಮೀಕ್ಷೆ ನಡೆಸಬೇಕು ಎಂದು ಹೈಕೋರ್ಟ್ ಹೇಳಿತ್ತು. ಆ ಕಾರ್ಯ ಆಗಿಲ್ಲ. ಇನ್ನು, ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪಿಸಬೇಕು. ಅದರ ಮೂಲಕ ಕುಡಿಯುವ ನೀರು ಪೂರೈಸಬೇಕು ಎಂದೂ ನ್ಯಾಯಾಲಯ ಹೇಳಿತ್ತು. ಆದರೆ, ಬಹುತೇಕ ಘಟಕಗಳು ಕೆಟ್ಟು ನಿಂತಿವೆ. ಕುಡಿಯುವ ನೀರು ಪೂರೈಕೆಯಾಗುತ್ತಿಲ್ಲ' ಎಂದು ಗ್ರಾಮದ ಮುಖಂಡ ಬಿ. ಶ್ರೀನಿವಾಸ ಹೇಳಿದರು.

'ಹೈಕೋರ್ಟ್ ನೀಡಿದ್ದ ಮಾರ್ಗಸೂಚಿಗಳ ಪೈಕಿ ಶೇ 10ರಷ್ಟನ್ನೂ ಸರ್ಕಾರ ಪೂರೈಸಿಲ್ಲ. ಈಗ ಕೋವಿಡ್ ಶವಗಳ ಸಂಸ್ಕಾರಕ್ಕೆ ನಮ್ಮ ಗ್ರಾಮವನ್ನೇ ಆಯ್ಕೆ ಮಾಡಿಕೊಳ್ಳಲಾಗಿದೆ. ಮತ್ತೆ ಗ್ರಾಮಸ್ಥರ ಆರೋಗ್ಯದ ಮೇಲೆ ಇದು ಪರಿಣಾಮ ಬೀರಲಿದೆ' ಎಂದು ಅವರು ಆತಂಕ ವ್ಯಕ್ತಪಡಿಸಿದರು.

ಕಂದಾಯ ಮತ್ತು ಬಿಬಿಎಂಪಿ ಅಧಿಕಾರಿಗಳು ಗ್ರಾಮಕ್ಕೆ ಭೇಟಿ ನೀಡಿ ಗ್ರಾಮಸ್ಥರ ಮನವೊಲಿಸಲು ಪ್ರಯತ್ನಿಸಿದರು. ಆದರೆ, ಸ್ಥಳೀಯರು ಒಪ್ಪಿಕೊಳ್ಳಲಿಲ್ಲ. ಪ್ರತಿಭಟನೆ ಮುಂದುವರಿಸಿದ್ದಾರೆ.

ಬಿಬಿಎಂಪಿ ತನ್ನ ನಿರ್ಧಾರವನ್ನು ವಾಪಸ್ ಪಡೆಯಬೇಕು ಎಂದು ಪರಿಸರ ತಜ್ಞ ಲಿಯೊ ಸಲ್ಡಾನಾ ನೇತೃತ್ವದ 'ಎನ್ವಿರಾನ್ಮೆಂಟಲ್ ಸೋಷಿಯಲ್ ಜಸ್ಟೀಸ್ ಅಂಡ್ ಗವರ್ನೆನ್ಸ್ ಇನ್ಶಿಯೇಟಿವ್ಸ್' ಸಂಸ್ಥೆಯ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರಿಗೆ ಪತ್ರ ಬರೆದಿದೆ.



ಸ್ಥಳಕ್ಕೆ ಭೇಟಿ ನೀಡಿದ ಪೊಲೀಸರು ಪ್ರತಿಭಟನೆಯನ್ನು ನಿಲ್ಲಿಸುವಂತೆ ಗ್ರಾಮಸ್ಥರ ಮನವೊಲಿಸಲು ಯತ್ನಿಸಿದರು

18 ಮೇಲ್ಪಟ್ಟವರಿಗೆ ಮೇ ಕೊನೆಗೆ ಲಸಿಕೆ ?

ಬೆಂಗಳೂರು: ಕೋವಿಡ್ ಲಸಿಕೆ ಪೂರೈಕೆ ತಡವಾಗುವುದರಿಂದ 18 ರಿಂದ 44 ವರ್ಷ ವಯಸ್ಸಿನವರಿಗೆ ಮೇ 1 ರಿಂದ ಲಸಿಕೆ ನೀಡುವುದಿಲ್ಲ. ಮೇ ಮೂರನೇ ವಾರದಿಂದ ಲಸಿಕೆ ಅಭಿಯಾನ ಆರಂಭಿಸುವ ಸಾಧ್ಯತೆ ಇದೆ ಎಂದು ಸರ್ಕಾರದ ಮೂಲಗಳು ತಿಳಿಸಿವೆ.

ಈ ವರ್ಗಕ್ಕೆ ಉಚಿತ ಲಸಿಕೆ ನೀಡುವ ಉದ್ದೇಶದಿಂದ ಈಗಾಗಲೇ 1 ಕೋಟಿ ಡೋಸ್ ಲಸಿಕೆಗೆ ಸರ್ಕಾರ ಬೇಡಿಕೆ ಸಲ್ಲಿಸಿದೆ. ಅಲ್ಲದೆ, ಹೆಚ್ಚುವರಿಯಾಗಿ ಇನ್ನೂ 1 ಕೋಟಿ ಡೋಸ್‌ಗಳಿಗೆ ಕಾರ್ಯಾದೇಶ ನೀಡಲಾಗಿದೆ. ಲಸಿಕೆ ಕಂಪನಿಗಳು ಹೆಚ್ಚುವರಿ ಲಸಿಕೆ ಉತ್ಪಾದನೆ ಆರಂಭಿಸಿದ್ದು, ಮೇ ಎರಡನೇ ವಾರ ಮೊದಲ ಬ್ಯಾಚ್‌ನ ಲಸಿಕೆ ಸಿಗುವ ಸಾಧ್ಯತೆ ಇದೆ ಎಂದು ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ.

ಲಸಿಕೆ ತಯಾರಿಕೆ ಕಂಪನಿಗಳು ಮೇ ಎರಡನೇ ವಾರದ ಬಳಿಕ ಪೂರೈಕೆ ಮಾಡುವುದಾಗಿ ಭರವಸೆ ನೀಡಿವೆ. ಅದಕ್ಕೂ ಮೊದಲು ಕನಿಷ್ಠ 10 ಲಕ್ಷ ಡೋಸ್‌ಗಳಂತೆ ಪೂರೈಕೆ ಆರಂಭಿಸಲು ಕೋರಿಕೆ ಸಲ್ಲಿಸಲಾಗಿದೆ ಎಂದರು.

ಕೋವಿಡ್ ಕಾರ್ಯಕರ್ತರು ಮತ್ತು ಹಿರಿಯ ನಾಗರಿಕರಿಗೆ ಲಸಿಕೆ ನೀಡುವ ಕಾರ್ಯ ಮುಂದುವರಿದಿದೆ. ಈ ವರ್ಗದವರಿಗೆ ಕೇಂದ್ರ ಸರ್ಕಾರ ಲಸಿಕೆ ಪೂರೈಕೆ ಮಾಡುತ್ತಿದೆ. ಈಗ 5 ಲಕ್ಷ ಡೋಸ್‌ಗಳು ಲಭ್ಯತೆ ಇವೆ. ಏ. 30ರಂದು 10 ಲಕ್ಷ ಡೋಸ್ ಬರಲಿದೆ ಎಂದು ಲಸಿಕೆ ಕುರಿತ ನಡೆದ ಸಭೆಯ ಬಳಿಕ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ತಿಳಿಸಿದ್ದಾರೆ.

ರೆಮ್‌ಡಿಸಿವಿರ್ ಮಾರಾಟ; ವೈದ್ಯ, ನರ್ಸ್ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊರೊನಾ ಸೋಂಕಿತರಿಗೆ ನೀಡುವ 'ರೆಮ್‌ಡಿಸಿವಿರ್' ಚುಚ್ಚುಮದ್ದು ಅಕ್ರಮವಾಗಿ ಮಾರಾಟ ಮಾಡುತ್ತಿದ್ದವರ ವಿರುದ್ಧ ಸಿಸಿಬಿ ಕಾರ್ಯಾಚರಣೆ ಮುಂದುವರಿದಿದ್ದು, ವಾರದಲ್ಲಿ 40 ಆರೋಪಿಗಳನ್ನು ಬಂಧಿಸಲಾಗಿದೆ.

'ಕೊರೊನಾ ಸೋಂಕಿತರ ಸಂಖ್ಯೆ ಹೆಚ್ಚಾಗುತ್ತಿದ್ದಂತೆ ರೆಮ್‌ಡಿಸಿವಿರ್ ಚುಚ್ಚುಮದ್ದಿಗೆ ಬೇಡಿಕೆ ಬಂದಿದೆ. ಇದನ್ನೇ ಬಂಡವಾಳ ಮಾಡಿಕೊಂಡಿರುವ ಹಲವರು, ಕಾಳಸಂತೆಯಲ್ಲಿ ದುಬಾರಿಗೆ ಬೆಲೆಗೆ ಚುಚ್ಚುಮದ್ದು ಮಾರಾಟ ಮಾಡುತ್ತಿದ್ದಾರೆ' ಎಂದು ಸಿಸಿಬಿ ಜಂಟಿ ಕಮಿಷನರ್ ಸಂದೀಪ್ ಪಾಟೀಲ ಹೇಳಿದರು.


'ಚುಚ್ಚುಮದ್ದು ಅಕ್ರಮವಾಗಿ ಸಂಗ್ರಹಿಸಿಟ್ಟುಕೊಂಡಿದ್ದ ಹಾಗೂ ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿದ್ದವರನ್ನು ಕಾರ್ಯಾಚರಣೆ ನಡೆಸಿ ಬಂಧಿಸಲಾಗುತ್ತಿದೆ. ಇದುವರೆಗೂ 40 ಮಂದಿಯನ್ನು ಬಂಧಿಸಲಾಗಿದ್ದು, ಅವರಿಂದ ಒಟ್ಟು 80 ಚುಚ್ಚುಮದ್ದು ಬಾಟಲಿಗಳನ್ನು ಜಪ್ತಿ ಮಾಡಲಾಗಿದೆ' ಎಂದೂ ತಿಳಿಸಿದರು.

'ಬಂಧಿತರಲ್ಲಿ ಆಯುರ್ವೇದ ವೈದ್ಯ, ಕೆಲವರು ನರ್ಸ್, ಔಷಧಿ ಮಳಿಗೆ ಮಾಲೀಕರು, ಔಷಧಿ ವಿತರಕರೂ ಇದ್ದಾರೆ. ಎಲ್ಲರ ವಿರುದ್ಧವೂ ಪ್ರತ್ಯೇಕವಾಗಿ ನಗರದ ಪೊಲೀಸ್ ಠಾಣೆಗಳಲ್ಲಿ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದೂ ಅವರು ಹೇಳಿದರು.

ಕಂಪನಿಯಿಂದ ತರಿಸಿ ಮಾರಾಟ: 'ಕೊರೊನಾ ಸೋಂಕಿತರ ಮಾಹಿತಿ ಸಮೇತ ಬೇಡಿಕೆ ಇರುವುದಾಗಿ ಹೇಳಿ ಆರೋಪಿಗಳು ಕಂಪನಿಯಿಂದ ರೆಮ್‌ಡಿಸಿವಿರ್ ತರಿಸುತ್ತಿದ್ದರು. ಅಕ್ರಮವಾಗಿ ಸಂಗ್ರಹಿಸಿಟ್ಟುಕೊಂಡು ಪ್ರತಿ ಡೋಸ್‌ಗೆ ₹10.000ದಿಂದ ₹11,500ರವರೆಗೂ ಮಾರಾಟ ಮಾರುತ್ತಿದ್ದರು' ಎಂದೂ ಪಾಟೀಲ ತಿಳಿಸಿದರು.



ಅಂಬೇಡ್ಕರ್ ವೈದ್ಯಕೀಯ ಕಾಲೇಜು ಆಸ್ಪತ್ರೆ ಕೋವಿಡ್‌ಗೆ ಮೀಸಲು



ಬೆಂಗಳೂರು: ಬಿಬಿಎಂಪಿ ಪೂರ್ವ ವಲಯದ ವ್ಯಾಪ್ತಿಯಲ್ಲಿರುವ ಅಂಬೇಡ್ಕರ್ ವೈದ್ಯಕೀಯ ಕಾಲೇಜು ಆಸ್ಪತ್ರೆಯನ್ನು ಸಂಪೂರ್ಣವಾಗಿ ಕೋವಿಡ್ ಆಸ್ಪತ್ರೆಯಾಗಿ ಪರಿವರ್ತಿಸಲು ನಿರ್ಧರಿಸಲಾಗಿದೆ.

ಕೋವಿಡ್ ಸೋಂಕಿತರ ಚಿಕಿತ್ಸೆಗೆ ಸಂಬಂಧಿಸಿದಂತೆ ವಲಯ ಉಸ್ತುವಾರಿಯೂ ಆಗಿರುವ ವಸತಿ ಸಚಿವ ವಿ. ಸೋಮಣ್ಣ ನೇತೃತ್ವದಲ್ಲಿ ಗುರುವಾರ ಸಭೆ ನಡೆಯಿತು. ವಲಯ ವ್ಯಾಪ್ತಿಯ ಎಲ್ಲ ಕ್ಷೇತ್ರಗಳಿಗೆ ತಲಾ 20 ಆಕ್ಸಿಜನ್ ಕಾನ್ಸಂಟ್ರೇಟರ್ ನೀಡಲು ಕೂಡಾ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಅಂಬೇಡ್ಕರ್ ವೈದ್ಯಕೀಯ ಕಾಲೇಜು ಆಸ್ಪತ್ರೆಯಲ್ಲಿ ಆಕ್ಸಿಜನ್ ಸೌಲಭ್ಯವಿರುವ 175 ಬೆಡ್‌ಗಳು ಚಿಕಿತ್ಸೆಗೆ ಲಭ್ಯವಾಗಲಿದೆ. ಚರಕ ಆಸ್ಪತ್ರೆಯಲ್ಲಿರುವ 28 ಐಸಿಯು ಬೆಡ್‌ಗಳಲ್ಲಿ 10 ಐಸಿಯು ಬೆಡ್‌ಗಳನ್ನು ಕೂಡಾ ಸೋಂಕಿತರಿಗೆ ಮೀಸಲಿಡಲಾಗಿದೆ. ಶಾಂತಿನಗರದಲ್ಲಿ 175 ಬೆಡ್‌ಗಳ ಕೋವಿಡ್ ಕೇರ್ ಸೆಂಟರ್ ಆರಂಭಗೊಂಡಿದೆ. ಚರ್ಚ್ ಆಫ್ ಸೌತ್ ಇಂಡಿಯಾ ಆಸ್ಪತ್ರೆಯಲ್ಲಿ 100 ಬೆಡ್‌ಗಳ ಸೆಂಟರ್ ಭಾನುವಾರದಿಂದ ಹಾಗೂ ಸಿ.ವಿ ರಾಮನ್ ನಗರ ಎಂಡಾಕ್ರಿನೋಲಜಿ ಸೆಂಟರ್‌ನಲ್ಲಿ 100 ಬೆಡ್‌ಗಳ ಸೆಂಟರ್ ಸೋಮವಾರದಿಂದ ಆರಂಭವಾಗಲಿದೆ.

ಇಂದಿರಾನಗರದ ಇಎಸ್‌ಐ ಆಸ್ಪತ್ರೆಯಲ್ಲಿ 50 ಆಕ್ಸಿಜನ್ ಬೆಡ್‌ಗಳನ್ನು ಹೆಚ್ಚಿಸಲು ಮತ್ತು ಸಿ.ವಿ ರಾಮನ್ ನಗರದ ಎಪಿಡೆಮಿಕ್ ಆಸ್ಪತ್ರೆಯ 24 ವೆಂಟಿಲೇಟರ್‌ಗಳನ್ನು ಬಳಕೆಗೆ ಸಜ್ಜುಗೊಳಿಸಿ ಅಗತ್ಯವಿರುವ ಕಡೆಗೆ ನೀಡಲು ಕೂಡಾ ಸಭೆಯಲ್ಲಿ ನಿರ್ಧರಿಸಲಾಗಿದೆ.

ಶಾಸಕರಾದ ಸಿ.ರಘು, ಕೆ.ಜೆ.ಜಾರ್ಜ್, ರಿಜ್ವಾನ್ ಅರ್ಷದ್, ರಮೇಶ್ ಗೌಡ, ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್, ವಸತಿ ಇಲಾಖೆ ಕಾರ್ಯದರ್ಶಿ ಮನೋಜ್ ಕುಮಾರ್ ಮೀನಾ, ಪೂರ್ವ ವಲಯ ಆಯುಕ್ತ ಮನೋಜ್ ಜೈನ್, ಪಾಲಿಕೆಯ ಜಂಟಿ ಆಯುಕ್ತರಾದ ಪಲ್ಲವಿ ಸಭೆಯಲ್ಲಿದ್ದರು.

'ಬಾಂಗ್ಲಾ ರೆಮ್‌ಡಿಸಿರ್' ತನಿಖೆ

'ಮೇಡ್ ಇನ್ ಬಾಂಗ್ಲಾ ದೇಶ' ಎಂದು ಹೆಸರಿರುವ ರೆಮ್‌ಡಿಸಿರ್ ಔಷಧಿ ಮಾರಾಟ ಪ್ರಕರಣವನ್ನು ಸಿಸಿಬಿ ಪೊಲೀಸರು ಪತ್ತೆಹಚ್ಚಿದ್ದಾರೆ. ಈ ಸಂಬಂಧ ಕೆಲವರನ್ನು ಬಂಧಿಸಲಾಗಿದೆ. ಈ ಔಷಧ ಬೆಂಗಳೂರಿಗೆ ಹೇಗೆ ಬಂತು? ಯಾವ ಆಸ್ಪತ್ರೆಯಿಂದ ಬಂತು? ಇದನ್ನು ಇಲ್ಲಿಗೆ ತಂದ ವ್ಯಕ್ತಿ ಯಾರು ಎಂಬುದರ ಕುರಿತು ತನಿಖೆ ನಡೆಯುತ್ತಿದೆ ಎಂದು ಸಚಿವ ಬಸವರಾಜ ಬೊಮ್ಮಾಯಿ ಹೇಳಿದರು.

ಮೇಡ್ ಇನ್ ಬಾಂಗ್ಲಾ

'ಬಾಂಗ್ಲಾದೇಶದಲ್ಲಿ ಉತ್ಪಾದಿಸಲಾಗಿದೆ ಎನ್ನಲಾದ ರೆಮ್‌ಡಿಸಿವಿಆರ್ ಚುಚ್ಚುಮದ್ದು ಆರೋಪಿಯೊಬ್ಬನ ಬಳಿ ಸಿಕ್ಕಿದೆ. ಅದನ್ನು ಬೆಂಗಳೂರಿಗೆ ತಂದವರು ಯಾರು? ಎಲ್ಲಿಂದ ಬಂತು ? ಎಂಬುದು ತನಿಖೆಯಿಂದ ತಿಳಿಯಬೇಕಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಪರಸ್ಪರ ಅಂತರ ಕಾಯ್ದುಕೊಳ್ಳಿ

ತಾಯಿ, ಗರ್ಭಿಣಿ ಪತ್ನಿ, ಮಕ್ಕಳನ್ನು ಕೊಂದು ಪರಾರಿ

ಸರಗೂರು (ಮೈಸೂರು ಜಿಲ್ಲೆ): ತಾಲ್ಲೂಕಿನ ಚಾಮೇಗೌಡನಹುಂಡಿಯಲ್ಲಿ ಮಣಿಕಂಠಸ್ವಾಮಿ ಎಂಬಾತ ತನ್ನ ತಾಯಿ, ಗರ್ಭಿಣಿ ಪತ್ನಿ, ಇಬ್ಬರು ಮಕ್ಕಳನ್ನು ಬುಧವಾರ ತಡರಾತ್ರಿ ಕೊಲೆಗೈದು ಪರಾರಿಯಾಗಿದ್ದಾನೆ.



ಮಣಿಕಂಠಸ್ವಾಮಿ

ಕೆಂಪಾಜಮ್ಮ (60), ಪತ್ನಿ ಗಂಗಾ (28), ಪುತ್ರರಾದ ಸಾಮ್ರಾಟ್(4) ಹಾಗೂ ರೋಹಿತ್ (2) ಕೊಲೆಯಾದವರು.

ಆರೋಪಿ ಟೈಲರ್ ವೃತ್ತಿ ಮಾಡುತ್ತಿದ್ದ. 8ವರ್ಷದ ಹಿಂದೆ ಮದುವೆಯಾಗಿದ್ದು, ಆಗಾಗ್ಗೆ ಜಗಳವಾಗುತ್ತಿತ್ತು. ಸಂಬಂಧಿಕರು ರಾಜಿ ಮಾಡಿ ಒಂದಾಗಿಸುತ್ತಿದ್ದರು. ಕೊಲೆಗೆ ಕಾರಣ ತಿಳಿದು ಬಂದಿಲ್ಲ' ಎಂದು ಪೊಲೀಸರು ತಿಳಿಸಿದ್ದಾರೆ.

'ನಾವು ಪರಿಹಾರದ ಭಾಗವಾಗಿದ್ದೇವೆ, ಸಮಸ್ಯೆಯ ಭಾಗವಲ್ಲ' ತಂಡದ ಘೋಷವಾಕ್ಯ

ನೆರವಿನ ಹಸ್ತ ಚಾಚಿದ 'ರಿಲೀಫ್ ರೈಡರ್ಸ್'

• ಬಸವರಾಜ ಹವಾಲ್ದಾರ



ಹುಬ್ಬಳ್ಳಿಯ ರಿಲೀಫ್ ರೈಡರ್ಸ್ ತಂಡದ ಸದಸ್ಯರು

ಹುಬ್ಬಳ್ಳಿ: 'ನಾವು ಪರಿಹಾರದ ಭಾಗವಾಗಿದ್ದೇವೆ, ಸಮಸ್ಯೆಯ ಭಾಗವಲ್ಲ' -ಇದು ಲಾಕ್‌ಡೌನ್‌ನಿಂದಾಗಿ ಅಗತ್ಯ ವಸ್ತು, ಔಷಧ ಪಡೆಯಲು ಸಾಧ್ಯವಾಗದವರ ನೆರವಿಗೆ ನಿಂತಿರುವ ಹುಬ್ಬಳ್ಳಿ ರಿಲೀಫ್ ರೈಡರ್ಸ್ ತಂಡದ ಘೋಷವಾಕ್ಯ.

'ರಿಲೀಫ್ ರೈಡರ್ಸ್' ಹೆಸರಿನಲ್ಲಿ ತಂಡ ವಯಸ್ಸಾದವರು, ಹೊರಗಡೆ ಹೋಗಿ ಅಗತ್ಯ ವಸ್ತುಗಳನ್ನು ತರಲು ಆಗದವರು ಮನೆಯಲ್ಲಿ ಯಾರೂ ಇಲ್ಲದವರಿಗೆ ಲಾಕ್‌ಡೌನ್ ಸಡಲಿಕೆ ಸಮಯದಾದ ಬೆಳಿಗ್ಗೆ 6 ರಿಂದ 10ರವರೆಗೆ ಮನೆ ಬಾಗಿಲಿಗೇ ಉಚಿತ ಸೇವೆ ಒದಗಿಸಲು ಮುಂದಾಗಿದೆ.

ಅವಶ್ಯ ವಸ್ತು (ತರಕಾರಿ, ಕಿರಾಣಿ, ಇತ್ಯಾದಿ), ಔಷಧದ ಪಟ್ಟಿಯನ್ನು ಮೊಬೈಲ್ ಮೂಲಕ ಇವರಿಗೆ ತಿಳಿಸಿದರೆ ಸಾಕು, ಈ ತಂಡದ ಸದಸ್ಯರು ಮನೆ ಬಾಗಿಲಿಗೆ ಮುಟ್ಟಿಸುತ್ತಾರೆ. ಔಷಧಗಳನ್ನು ತರಲು ವೈದ್ಯರು ಬರೆದುಕೊಟ್ಟ ಚೀಟಿ ಕಡ್ಡಾಯ.

'ಡಾ.ಸತ್ಯ ಎಂಬುವವರು ಬೆಂಗಳೂರಿನಲ್ಲಿ ಇಂತಹ ಕಾರ್ಯವನ್ನು ಮಾಡುತ್ತಿದ್ದಾರೆ. ಅದೇ ಮಾದರಿಯಲ್ಲಿ ನಾವು ಹುಬ್ಬಳ್ಳಿ-ಧಾರವಾಡ ನಗರಗಳಲ್ಲಿ ಮಾಡುತ್ತಿದ್ದೇವೆ. ತಂಡದಲ್ಲಿ ಈಗಾಗಲೇ 20ಕ್ಕೂ ಹೆಚ್ಚು ಸದಸ್ಯರಿದ್ದಾರೆ. ನಮ್ಮ ವಾಟ್ಸ್‌ಆ್ಯಪ್‌ಗೆ ಬಂದಿರುವ ಬೇಡಿಕೆಯನ್ನು ಸಮೀಪದ ನಿವಾಸಿಯಾಗಿರುವ ತಂಡದ ಸದಸ್ಯರಿಗೆ ಕಳಿಸಲಾಗುತ್ತದೆ. ಅವರು ಅಂಗಡಿಗಳಿಂದ ಖರೀದಿಸಿ ಅವರ ಮನೆಗೆ ತಲುಪಿಸುತ್ತಾರೆ' ಎಂದು ತಂಡದ ಸದಸ್ಯ ಸ್ಟೀವರ್ಟ್ ಲಗಳಿ ತಿಳಿಸಿದರು.

'ನಾನು ರೈಲ್ವೆ ಉದ್ಯೋಗಿ. ಇನ್ನು ಕೆಲವರು ಸಹೋದ್ಯೋಗಿಗಳಿದ್ದಾರೆ. ಅಲ್ಲದೇ, ಬಿಸಿನೆಸ್ ಮ್ಯಾನ್, ಫಾರ್ಮಾಸಿಸ್ಟ್ ಸೇರಿದಂತೆ ವಿವಿಧ ಉದ್ಯೋಗಗಳಲ್ಲಿ ಇರುವವರು ಕೈಜೋಡಿಸಿದ್ದಾರೆ. ಹುಬ್ಬಳ್ಳಿ ಬೈಸಿಕಲ್ ಕ್ಲಬ್ ಸದಸ್ಯರಾಗಿರುವ ನಾವು, ಈ ಎಲ್ಲ ಸೇವೆಯನ್ನು ಸೈಕಲ್‌ನಲ್ಲಿಯೇ ತಲುಪಿಸಲಿದ್ದೇವೆ' ಎಂದು ಹೇಳಿದರು.

'ಲಾಕ್‌ಡೌನ್ ಸಡಲಿಕೆಯ ಅವಧಿಯಲ್ಲದೆ ಬೇರೆ ಅವಧಿಯಲ್ಲೂ ತುರ್ತಾಗಿ ಔಷಧಿಗಳು ಬೇಕಾಗಿವೆ ಎಂದಾಗ, ಅದನ್ನು ಕೂಡಲೇ ತಲುಪಿಸುವ ಕೆಲಸ ಮಾಡಲಿದ್ದೇವೆ' ಎಂದರು.

ನೆರವಿಗೆ ಹುಬ್ಬಳ್ಳಿಯಲ್ಲಿ ಸ್ಟೀವರ್ಟ್ ಲಗಳಿ (ಮೊ.99805 61546), ಶಿವಾನಂದ ದಂಡಾವತಿಮಠ (98454 57758), ಸುಭಾಶ ಹಂಗರ್ಕಿ (99023 50025), ಧಾರವಾಡದಲ್ಲಿ ಪ್ರಸನ್ನ ಜೋಶಿ (98862 24624), ಶೆಟ್ಟೆಪ್ಪ ಪಿರಂಗಿ (97424 24226), ಸೂರಜ ಕುಲಕರ್ಣಿ (97417 19926) ಸಂಪರ್ಕಿಸಬಹುದು

ಲಾಕ್‌ಡೌನ್ ಇರುವುದರಿಂದ ವಯಸ್ಸಾದವರು ಹೊರಗಡೆ ಬರಲು ಸಾಧ್ಯವಾಗುವುದಿಲ್ಲ. ಅವರಿಗೆ ಔಷಧ ಇತ್ಯಾದಿ ವಸ್ತು ತಲುಪಿಸುವ ಕೆಲಸ ಮಾಡುತ್ತಿದ್ದೇವೆ

ಶಿವಾನಂದ ದಂಡಾವತಿಮಠ
ತಂಡದ ಸದಸ್ಯ



ಲಾಕ್‌ಡೌನ್: ಹಸಿದವರಿಗೆ ಅನ್ನದ ಅಭಿಯಾನ

ಶಿವಮೊಗ್ಗ: ಲಾಕ್‌ಡೌನ್ ಅವಧಿಯಲ್ಲಿ ಬಸ್‌ನಿಲ್ದಾಣ, ರೈಲು ನಿಲ್ದಾಣ, ಆಸ್ಪತ್ರೆಗಳ ಬಳಿ, ಕಟ್ಟಡಗಳಲ್ಲಿ ಸಿಲುಕಿಕೊಂಡಿರುವ ಅನಾಥರು, ಭಿಕ್ಷುಕರು, ನಿರ್ಗತಿಕರಿಗೆ ದುರ್ಗಿಗುಡಿಯ ಶುಭಂ ಹೋಟೆಲ್ ನೆರವಾಗುತ್ತಿದೆ.

ಊಟ ಸಿಗದೆ ಉಪವಾಸ ಇರುವಂತಹ ಜನರಿಗೆ ಉಚಿತ ಊಟ ಪೂರೈಸುತ್ತಿದೆ. ಪ್ರತಿದಿನ ಮಧ್ಯಾಹ್ನ 12.30ರಿಂದ 2.30 ಹಾಗೂ ರಾತ್ರಿ 7ರಿಂದ 8.30ರವರೆಗೆ ಅವರಿರುವ ಸ್ಥಳಗಳಿಗೇ ತಲುಪಿಸುವ ಕಾರ್ಯ ಮಾಡುತ್ತಿದ್ದಾರೆ.

ಈ ಸೇವೆ ಶಿವಮೊಗ್ಗ ನಗರಕ್ಕೆ ಮಾತ್ರ ಸೀಮಿತವಾಗಿದ್ದು, ಇಂತಹ ಜನರು ಕಂಡರೆ 88844 11002, 08182 404404 ಕರೆ ಮಾಡಲು ಕೋರಿದ್ದಾರೆ.

ಯುವ ಕಾಂಗ್ರೆಸ್ ಕಾರ್ಯಕರ್ತರೂ ಜನರಿಗೆ ಅನ್ನ ದಾನ ಮಾಡಲು 'ಹಸಿದವರಿಗೆ ಅನ್ನ' ಅಭಿಯಾನವನ್ನೇ ಆರಂಭಿಸಿದ್ದಾರೆ. ನಗರದ ವಿವಿಧೆಡೆ ತೆರಳಿ ಹಸಿವಿನಿಂದ ಬಳಲುತ್ತಿರುವ ಬಡವರು, ಕಾರ್ಮಿಕರು, ನಿರ್ಗತಿಕರಿಗೆ ಅನ್ನ, ನೀರು ವಿತರಿಸುವ ಕೆಲಸ ನಿತ್ಯವೂ ಮಧ್ಯಾಹ್ನ ಮಾಡುತ್ತಿದ್ದಾರೆ. ಸಹಾಯದ ಅಗತ್ಯವಿರುವವರು ಗಿರೀಶ್ ಅವರ ಮೊಬೈಲ್ 9964294977 ಸಂಪರ್ಕಿಸಬಹುದು.

ಹಸಿವಿನಿಂದ ಕಂಗೆಟ್ಟು ಎಂಜಲು ಕಾಯಿ ತಿಂದ ಮಕ್ಕಳು

ಪ್ರಜಾವಾಣಿ ವಾರ್ತೆ



ಎಂಜಲು ಕಾಯಿ ತಿನ್ನುತ್ತಿರುವ ಮಕ್ಕಳು

ರಾಮನಗರ: ಕೋವಿಡ್ ಕರ್ಫ್ಯೂ ಅನೇಕ ಬಡ ಕುಟುಂಬಗಳು ತುತ್ತು ಅನ್ನಕ್ಕೂ ಪರದಾಡುವಂತೆ ಮಾಡಿದ್ದು, ಜನರು ಕುಡಿದು ಬಿಸಾಡಿದ್ದ ಎಳನೀರಿನ ಕಾಯಿಗಳನ್ನು ಆಯ್ದು ಭಿಕ್ಷಾಟನೆ ಮಾಡುವ ಮಕ್ಕಳು ತಿನ್ನುತ್ತಿರುವ ವಿಡಿಯೊ ವೈರಲ್ ಆಗಿದೆ.

ಹಸಿವಿನಿಂದ ಕಂಗೆಟ್ಟಿದ್ದ ಮಕ್ಕಳು ಜಿಲ್ಲಾ ಕ್ರೀಡಾಂಗಣದ ಬಳಿ ಸಾರ್ವಜನಿಕರು ಕುಡಿದು ಬಿಸಾಡಿದ್ದ ಎಳನೀರು ಕಾಯಿಯ ತಿರುಳನ್ನು ತಿಂದು ಹಸಿವು ನೀಗಿಸಿಕೊಂಡಿವೆ. ಮನ ಮಿಡಿಯುವ ಈ ದೃಶ್ಯವನ್ನು ಒಬ್ಬರು ಮೊಬೈಲ್‌ನಲ್ಲಿ ಸೆರೆ ಹಿಡಿದು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟಿದ್ದಾರೆ.

ಜಿಲ್ಲಾಡಳಿತ ಕಳೆದ ಬಾರಿಯಂತೆ ಈ ವರ್ಷವೂ ನಿರ್ಗತಿಕರ ಕೇಂದ್ರಗಳನ್ನು ತೆರೆದು ಕೋವಿಡ್ ಸಂದರ್ಭದಲ್ಲಿ ಇಂತಹವರಿಗೆ ಆಹಾರ, ವಸತಿ ನೀಡಲಿ ಎಂದು ಜನರು ಪ್ರತಿಕ್ರಿಯಿಸಿದ್ದಾರೆ.

ನಿಧನ ವಾರ್ತೆ

ನಿರ್ಮಾಪಕ ಎಂ. ಚಂದ್ರಶೇಖರ್




ಬೆಂಗಳೂರು: ಚಿತ್ರ ನಿರ್ಮಾಪಕ ಎಂ. ಚಂದ್ರಶೇಖರ್ (65) ಗುರುವಾರ ನಿಧನರಾದರು. ಅವರಿಗೆ ಪತ್ನಿ, ಒಬ್ಬ ಪುತ್ರಿ ಹಾಗೂ ಒಬ್ಬ ಪುತ್ರ ಇದ್ದಾರೆ.

'ನಿಮಿಷಾಂಬಾ ಪ್ರೊಡಕ್ಷನ್ಸ್'ನಲ್ಲಿ ಅಣ್ಣಯ್ಯ, ಬಿಂದಾಸ್, ರನ್ನ ಚಿತ್ರಗಳನ್ನು ನಿರ್ಮಿಸಿದ್ದರು. ಇತ್ತೀಚೆಗಷ್ಟೇ ಮಂಜು ಮಾಂಡವ್ಯ ನಿರ್ದೇಶನದಲ್ಲಿ ಉಪೇಂದ್ರ ಅವರು ನಾಯಕರಾಗಿರುವ ಹೊಸ ಚಿತ್ರ ನಿರ್ಮಾಣದ ಬಗ್ಗೆ ಘೋಷಿಸಿದ್ದರು.

ಕೋವಿಡ್‌ನಿಂದ ಬಳಲಿದ್ದ ಅವರು, ಕೆಲ ದಿನಗಳ ಹಿಂದಷ್ಟೇ ಮಣಿಪಾಲ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಮನೆಗೆ ಮರಳಿದ್ದರು.

ಲಸಿಕೆ ಪೂರೈಕೆ ಕೇಂದ್ರದ ಹೊಣೆ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಬಾಣಂತಿಯರು ಮತ್ತು ಮಕ್ಕಳನ್ನು ಹೊರತುಪಡಿಸಿ 18 ವರ್ಷ ದಾಟಿದ ಎಲ್ಲರಿಗೂ ಸರ್ಕಾರ ಉಚಿತವಾಗಿ ಕೋವಿಡ್ ಲಸಿಕೆ ನೀಡಬೇಕು. ರಾಜ್ಯಗಳಿಗೆ ಅಗತ್ಯಕ್ಕೆ ಅನುಗುಣವಾಗಿ ಲಸಿಕೆ ಪೂರೈಸುವುದು ಕೇಂದ್ರದ ಜವಾಬ್ದಾರಿ' ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಒತ್ತಾಯಿಸಿದ್ದಾರೆ.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, 'ರಾಜ್ಯದಲ್ಲಿ ಐಸಿಯು ಬೆಡ್‌ಗಳ ತೀವ್ರ ಕೊರತೆ ಇದೆ. ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ 750 ಹಾಸಿಗೆಗಳಿವೆ. ಆದರೆ, 65 ಹಾಸಿಗೆಗಳಿಗೆ ಮಾತ್ರ ಐಸಿಯು ಸೌಲಭ್ಯವಿದೆ. ಕನಿಷ್ಠ 250 ಬೆಡ್‌ಗಳಿಗಾದರೂ ಐಸಿಯು ಸೌಲಭ್ಯ ಒದಗಿಸಬೇಕು. ಆಸ್ಪತ್ರೆಗೆ 100 ಮಂದಿ ಸಿಬ್ಬಂದಿಯನ್ನು ನೇಮಿಸಿಕೊಳ್ಳಬೇಕು. ನಿವೃತ್ತ ವೈದ್ಯರು, ಅರೆ ವೈದ್ಯಕೀಯ ಸಿಬ್ಬಂದಿಯ ಸೇವೆಯನ್ನೂ ಬಳಸಿಕೊಳ್ಳುವುದು ಸೂಕ್ತ' ಎಂದರು.

ಪ್ಯಾಕೇಜ್ ಘೋಷಿಸಿ: '14 ದಿನಗಳ ಕರ್ಫ್ಯೂನಿಂದ ತೊಂದರೆಗೆ ಒಳಗಾಗುವ ಕೂಲಿ ಕಾರ್ಮಿಕರು, ದುಡಿಯುವ ವರ್ಗಕ್ಕೆ ಪ್ಯಾಕೇಜ್ ಘೋಷಿಸಬೇಕು' ಎಂದು ಆಗ್ರಹಿಸಿದರು.

'ಕೊರೊನಾ ಸಂದರ್ಭದಲ್ಲಿ ಸಿದ್ದರಾಮಯ್ಯ ಟೀಕೆ ಮಾಡುತ್ತಾರೆ ಎಂದು ಸಚಿವರು ಹೇಳಿಕೆ ಕೊಡುತ್ತಿದ್ದಾರೆ. ಸತ್ಯ ಹೇಳಿದರೆ ಟೀಕೆ ಎನ್ನುವುದೇಕೆ. ಶವಸಂಸ್ಕಾರಕ್ಕೂ ಜನ ಪರದಾಡುತ್ತಿರುವುದು ಸತ್ಯ ಅಲ್ಲವೇ' ಎಂದು ಪ್ರಶ್ನಿಸಿದರು.

'ಕತ್ತಿ ಅವರನ್ನು ವಜಾ ಮಾಡಿ'

'ಕೇಂದ್ರ ಸರ್ಕಾರ ಆಹಾರಧಾನ್ಯ ಕೊಡುವವರೆಗೆ ಉಪವಾಸ ಬಿದ್ದು ಸಾಯಬೇಕೆ ಎಂದು ಕೇಳಿದವರಿಗೆ ಸಾಯುವುದೇ ಉತ್ತಮ ಎಂದು ಸಚಿವ ಉಮೇಶ ಕತ್ತಿ ಹೇಳಿದ್ದಾರೆ. ಇದು ಉದ್ಧಟತನ ಮಾತು. ಅವರನ್ನು ಸಂಪುಟದಿಂದ ತಕ್ಷಣ ವಜಾ ಮಾಡಬೇಕು' ಎಂದು ಸಿದ್ದರಾಮಯ್ಯ ಆಗ್ರಹಿಸಿದರು.

ಸುದ್ದಿ 2 ನಿಮಿಷ

ಬೆಳಗಾವಿಯಲ್ಲಿ ರೆಮ್‌ಡಿಸಿವಿರ್ ಘಟಕ: ಮುರುಗೇಶ ನಿರಾಣಿ



ಬಾಗಲಕೋಟೆ: 'ಬೆಳಗಾವಿ ನಗರದಲ್ಲಿ ರೆಮ್‌ಡಿಸಿವಿರ್ ಚುಚ್ಚುಮದ್ದು ತಯಾರಿಕೆ ಘಟಕ ಶೀಘ್ರ ಆರಂಭವಾಗಲಿದೆ' ಎಂದು ಗಣಿ ಮತ್ತು ಭೂವಿಜ್ಞಾನ ಸಚಿವ ಮುರುಗೇಶ ನಿರಾಣಿ ತಿಳಿಸಿದರು.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, [illegible] ಅವರಿಗೆ ಬೆಳಗಾವಿಯಲ್ಲಿ ರೆಮ್‌ಡಿಸಿವಿರ್ ತಯಾರಿಸುವ ಘಟಕ ಸ್ಥಾಪನೆಗೆ ಕೇಂದ್ರ ಸರ್ಕಾರದಿಂದ ಅನುಮತಿ ದೊರೆತಿದೆ. ಮುಂದಿನ ದಿನಗಳಲ್ಲಿ ಬೆಳಗಾವಿಯಿಂದಲೇ ಜಿಲ್ಲೆಗೆ ಚುಚ್ಚುಮದ್ದು ಪೂರೈಕೆಯಾಗಲಿದೆ. ಮುಂದಿನ 20ರಿಂದ 30 ದಿನಗಳಲ್ಲಿ ಚುಚ್ಚುಮದ್ದು ತಯಾರಿಕೆ ಕಾರ್ಯ ಪ್ರಾರಂಭವಾಗಲಿದೆ. ಇದರಿಂದ ರಾಜ್ಯದಲ್ಲಿ ರೆಮ್‌ಡಿಸಿವಿರ್ ಕೊರತೆ ನೀಗಲಿದೆ ಎಂದು ಹೇಳಿದರು.

ನೆಗೆಟಿವ್ ಇದ್ದರೂ ಲಕ್ಷಣ ಆಧರಿಸಿ ಚಿಕಿತ್ಸೆ

ಬೆಂಗಳೂರು: ಕೋವಿಡ್ ಕಾಯಿಲೆ ಹೊಂದಿರುವ ಕೆಲವರಿಗೆ ಆರ್‌ಟಿ-ಪಿಸಿಆರ್ ಹಾಗೂ ರ‍್ಯಾಟ್ ಮಾದರಿ ಪರೀಕ್ಷೆಯಲ್ಲಿ ನೆಗೆಟಿವ್ ಫಲಿತಾಂಶ ಬರುತ್ತಿರುವ ಕಾರಣ ರೋಗ ಲಕ್ಷಣಗಳ ಆಧಾರದ ಮೇಲೆ ವ್ಯಕ್ತಿಯನ್ನು ಆಸ್ಪತ್ರೆಯಲ್ಲಿ ದಾಖಲಿಸಿಕೊಂಡು, ಚಿಕಿತ್ಸೆ ಒದಗಿಸಬೇಕು ಎಂದು ಆರೋಗ್ಯ ಇಲಾಖೆ ಆದೇಶ ಹೊರಡಿಸಿದೆ.

'ಹಲವು ಪ್ರಕರಣಗಳಲ್ಲಿ ಆರ್‌ಟಿ-ಪಿಸಿಆರ್ ಹಾಗೂ ವಿವಿಧ ವಿಧಾನಗಳಲ್ಲಿ ಪರೀಕ್ಷೆ ಮಾಡಿಸಿದರೂ ನೆಗೆಟಿವ್ ವರದಿ ಬರುತ್ತಿದೆ. ವ್ಯಕ್ತಿಗೆ ಕೋವಿಡ್ ರೋಗ ಲಕ್ಷಣವಿದ್ದರೂ ವರದಿಯಲ್ಲಿ ನೆಗೆಟಿವ್ ಬಂದಲ್ಲಿ ಸಮಸ್ಯೆ ಸಂಕೀರ್ಣ ಸ್ವರೂಪ ಪಡೆದುಕೊಳ್ಳಲಿದೆ. ರೋಗದ ತೀವ್ರತೆ ಹೆಚ್ಚಾದ ಸಮಯದಲ್ಲಿ ಆಸ್ಪತ್ರೆಗೆ ದಾಖಲಿಸಲು ಸಮಸ್ಯೆಯಾಗುತ್ತದೆ. ಈ ಸಮಸ್ಯೆಯನ್ನು ನಿವಾರಿಸಲು ಹಾಗೂ ರೋಗಿಗಳಿಗೆ ಸೂಕ್ತ ಚಿಕಿತ್ಸೆ ನೀಡುವ ಉದ್ದೇಶದಿಂದ ರೋಗ ಲಕ್ಷಣಗಳನ್ನು ಆಧರಿಸಿ ಚಿಕಿತ್ಸೆ ನೀಡುವ (ಸಿಂಡ್ರೋಮಿಕ್) ವಿಧಾನವನ್ನು ಅನುಸರಿಸಲು ತೀರ್ಮಾನಿಸಲಾಗಿದೆ' ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದ್ದಾರೆ.

ಅಲ್ಲಲ್ಲಿ ಆಲಿಕಲ್ಲು ಸಹಿತ ಮಳೆ

ಪ್ರಜಾವಾಣಿ ವಾರ್ತೆ



ಆಳಂದದಲ್ಲಿ ಸುರಿದ ಆಲಿಕಲ್ಲು

ಬೆಂಗಳೂರು: ರಾಜ್ಯದ ವಿವಿಧೆಡೆ ಗುರುವಾರ ಸಂಜೆ ಗುಡುಗು-ಸಿಡಿಲು ಹಾಗೂ ಆಲಿಕಲ್ಲು ಸಮೇತ ಧಾರಾಕಾರ ಮಳೆಯಾಗಿದೆ.

ಗದಗ, ಬೆಳಗಾವಿ, ವಿಜಯಪುರ, ಧಾರವಾಡ, ಬಳ್ಳಾರಿ ಜಿಲ್ಲೆಗಳ ವಿವಿಧೆಡೆ ಧಾರಾಕಾರ ಮಳೆಯಾಗಿದೆ. ಸಂಡೂರು ತಾಲ್ಲೂಕಿನ ಡಿ.ಮಲ್ಲಾಪುರ ಗ್ರಾಮದಲ್ಲಿ ಸಿಡಿಲು ಬಡಿದು ಎತ್ತು ಮೃತಪಟ್ಟಿದೆ. ಹುಬ್ಬಳ್ಳಿ, ಬಳ್ಳಾರಿ ಜಿಲ್ಲೆಯ ಸಿರಗುಪ್ಪದಲ್ಲಿ ಆಲಿಕಲ್ಲು ಸಹಿತ ಮಳೆಯಾಗಿದೆ. ಬೆಳಗಾವಿ ನಗರ ಹಾಗೂ ತಾಲ್ಲೂಕಿನ ವಿವಿಧೆಡೆ, ಹುಕ್ಕೇರಿ, ಗೋಕಾಕ, ಚಿಕ್ಕೋಡಿಯಲ್ಲಿ ಗುಡುಗು ಸಹಿತ ಮಳೆಯಾಗಿದೆ.

ಉತ್ತಮ ಮಳೆ: ದಕ್ಷಿಣ ಕನ್ನಡ, ಚಿಕ್ಕಮಗಳೂರು ಜಿಲ್ಲೆಯ ಹಲವೆಡೆ ಉತ್ತಮ ಮಳೆಯಾಗಿದೆ. ಸಂಪಾಜೆ ಭಾಗದಲ್ಲಿಯೂ ಧಾರಾಕಾರ ಮಳೆಯಾಗಿದೆ.

ಧಾರಾಕಾರ ಮಳೆ: ಕೊಡಗು ಜಿಲ್ಲೆಯ ಸುಂಟಿಕೊಪ್ಪ, ಕುಶಾಲನಗರ, 7ನೇ ಹೊಸಕೋಟೆ, ಕಕ್ಕಬ್ಬೆ ಭಾಗದಲ್ಲಿ ಧಾರಾಕಾರ ಮಳೆಯಾಗಿದೆ.

ಸೋಮವಾರಪೇಟೆ, ಶನಿವಾರ ಸಂತೆ, ಕೊಡ್ಲಿಪೇಟೆ, ಬಕ್ಕ, ಚೇರಂಬಾಣೆ ವ್ಯಾಪ್ತಿಯಲ್ಲಿ ಸಾಧಾರಣ ಮಳೆ ಸುರಿದಿದೆ.

ಕಲಬುರ್ಗಿ ಜಿಲ್ಲೆ ಆಳಂದ ತಾಲ್ಲೂಕಿನ ವಿವಿಧೆಡೆ ಮಧ್ಯಾಹ್ನ ಆಲಿಕಲ್ಲು ಸಮೇತ ಜೋರಾದ ಮಳೆ ಸುರಿಯಿತು. ತಾಲ್ಲೂಕಿನ ಹಿರೋಳಿ, ಸರಸಂಬಾ, ಭೀಮಪುರ, ಹೊನ್ನಳಿ, ಹೆಬಳಿ, ಮಟಕಿ, ಹೊಸಳ್ಳಿ, ಸಾಲೇಗಾಂವ, ಕೊಡಲ ಹಂಗರಗಾ, ಕೊರಳ್ಳಿ, ಪಡಸಾವಳಿ, ತೀರ್ಥ, ಮುನ್ನಹಳ್ಳಿ ಗ್ರಾಮದಲ್ಲೂ ಮಳೆ ಜೋರಾಗಿ ಸುರದಿದೆ. ಹಲವಡೆ ಆಲಿಕಲ್ಲು ಮಳೆಗೆ ಮಾವಿನ ಹಣ್ಣು, ಕಲ್ಲಂಗಡಿ ಹಣ್ಣಿನ ಬೆಳೆಗೆ ಹಾನಿಯಾಗಿದೆ. ಕಲಬುರ್ಗಿ ನಗರ ಹಾಗೂ ಯಾದಗಿರಿಯಲ್ಲಿ ಸಾಧಾರಣ ಮಳೆಯಾಗಿದೆ.

ಭಾರಿ ಮಳೆ: ಭದ್ರಾವತಿ, ಶಿವಮೊಗ್ಗ, ಶಿಕಾರಿಪುರ, ತೀರ್ಥಹಳ್ಳಿ, ಹೊಸನಗರದ ಹಲವೆಡೆ ಗಾಳಿ, ಗುಡುಗು ಸಹಿತ ಭಾರಿ ಮಳೆ ಸುರಿಯಿತು.

ಮಳೆಗೂ ಮೊದಲು ಬೀಸಿದ ಗಾಳಿಗೆ ಹಲವು ಮನೆಗಳ ತಗಡು, ಹೆಂಚು ಹಾರಿ ಹೋಗಿವೆ.

ದಾವಣಗೆರೆ ನಗರ, ನ್ಯಾಮತಿ, ಹೊನ್ನಾಳಿ, ಸಾಸ್ವೆಹಳ್ಳಿ, ತ್ಯಾವಣಿಗೆ, ಮಲೇಬೆನ್ನೂರು, ಸಂತೇಬೆನ್ನೂರಿನಲ್ಲಿ ಗುಡುಗು, ಸಿಡಿಲು ಸಹಿತ ಸಾಧಾರಣ ಮಳೆಯಾಗಿದೆ. ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕಿನ ಕಸಬಾ ಹೋಬಳಿಯ ಮಾವಿನಕಟ್ಟೆ ಗ್ರಾಮದಲ್ಲಿ ಆಲಿಕಲ್ಲು ಸಹಿತ ಮಳೆಯಾಗಿದೆ. ಚಿಕ್ಕಜಾಜೂರು ಸಮೀಪದ ಚಿಕ್ಕನಕಟ್ಟೆ ಗ್ರಾಮದಲ್ಲಿ ಕೊಟ್ಟಿಗೆಯ ಚಾವಣಿಗೆ ಹಾಕಿದ್ದ ತಗಡುಗಳು ಹಾರಿ ಹೋಗಿವೆ. ಗಾಳಿಗೆ ಅಡಿಕೆ ಮರಗಳು ವಿದ್ಯುತ್ ತಂತಿ ಮೇಲೆ ಉರುಳಿ ಬಿದ್ದು ವಿದ್ಯುತ್ ಸಂಪರ್ಕ ಸ್ಥಗಿತಗೊಂಡಿತ್ತು.

ಸಿಡಿಲು ಬಡಿದು ಇಬ್ಬರ ಸಾವು

ಕಲಬುರ್ಗಿ: ಸಿಡಿಲು ಬಡಿದು ಜೇವರ್ಗಿ ತಾಲ್ಲೂಕು ಮಯೂರ ಗ್ರಾಮದ ಸಿದ್ದಮ್ಮ ಭೀಮಣ್ಣ ಘತ್ತರಗಿ (35) ಹಾಗೂ ಯಾದಗಿರಿ ಜಿಲ್ಲೆ ಶಹಾಪುರ ತಾಲ್ಲೂಕಿನ ತಿಪ್ಪನಹಳ್ಳಿ ಗ್ರಾಮದ ಐತೇಶಾಮ ಇಕ್ಬಾಲ್ ಸಾಬ್ (16) ಗುರುವಾರ ಮೃತಪಟ್ಟಿದ್ದಾರೆ.

ಪಂಚಭಾಷೆಗಳಲ್ಲಿ ‘ಮಾನಾಡು’

ಸಿನಿ ಸಂಕ್ಷಿಪ್ತ

ಕಾಲಿವುಡ್ ನಟ ಸಿಲಂಬರಸನ್ ಟಿ.ಆರ್. ನಟನೆಯ ‘ಮಾನಾಡು’ ತಮಿಳು ಚಿತ್ರವು ಐದು ಭಾಷೆಗಳಲ್ಲಿ ಸಿದ್ಧಗೊಳ್ಳುತ್ತಿದೆ. ಕನ್ನಡದಲ್ಲಿ ಸುದೀಪ್, ತಮಿಳಿನಲ್ಲಿ ಎ.ಆರ್.ರೆಹಮಾನ್, ಹಿಂದಿಯಲ್ಲಿ ಅನುರಾಗ್‌ಕಶ್ಯಪ್, ತೆಲುಗಿನಲ್ಲಿ ರವಿತೇಜ ಮತ್ತು ಮಲೆಯಾಳಂದಲ್ಲಿ ಪೃಥ್ವಿರಾಜ್ ಚಿತ್ರದ ಶೀರ್ಷಿಕೆಯನ್ನು ಬಿಡುಗಡೆ ಮಾಡಿದ್ದರು.

ಸದ್ಯ ಕನ್ನಡದ ಶೀರ್ಷಿಕೆ ಬದಲಾಗಿದೆ. ಮುಂದಿನ ದಿನಗಳಲ್ಲಿ ಹೊಸ ಹೆಸರನ್ನು ತಿಳಿಸುವುದಾಗಿ ತಂಡವು ಹೇಳಿಕೊಂಡಿದೆ. ಇತ್ತೀಚೆಗೆ ನಡೆದ ದೃಶ್ಯವೊಂದರ ಚಿತ್ರೀಕರಣದಲ್ಲಿ ಆರು ನಿಮಿಷದ ಸಂಭಾಷಣೆಯನ್ನು ಒಂದೇ ಟೇಕ್‌ನಲ್ಲಿ ಮುಗಿಸಲಾಗಿತ್ತು.

‘ಮಾನಾಡು’ ರಾಜಕೀಯ ಕಥಾ ವಸ್ತುವನ್ನು ಒಳಗೊಂಡಿದೆ. ವೆಂಕಟೇಶ್ ಪ್ರಭು ಅವರ ಕಥೆ ಹಾಗೂ ನಿರ್ದೇಶನ, ಯುವನ್ ಶಂಕರ್‌ರಾಜ ಅವರ ಸಂಗೀತ ಇದೆ. ರಿಚರ್ಡ್ ಎಂ.ನಾಥನ್ ಅವರ ಛಾಯಾಗ್ರಹಣವಿದೆ. ಸುರೇಶ್ ಕಮತ್‌ಚಿ ಅವರು ‘ವಿ ಹೌಸ್ ಪ್ರೊಡಕ್ಷನ್’ ಲಾಂಛನದ ಅಡಿ ಚಿತ್ರ ನಿರ್ಮಿಸುತ್ತಿದ್ದಾರೆ. ಕಲ್ಯಾಣಪ್ರಿಯಾ ದರ್ಶನ್ ಅವರು ಚಿತ್ರದ ನಾಯಕಿ.


‘ಮಾನಾಡು’ ಚಿತ್ರದಲ್ಲಿ ಸಿಲಂಬರಸನ್, ಕಲ್ಯಾಣ ಪ್ರಿಯಾ ದರ್ಶನ್

ಒಟಿಟಿ

ರಾಬರ್ಟ್ (ಕನ್ನಡ)
ನಿರ್ದೇಶಕ: ತರುಣ್ ಸುಧೀರ್
ತಾರಾಗಣ: ದರ್ಶನ್, ಆಶಾ ಭಟ್
ಪ್ರಸಾರ: ಅಮೆಝಾನ್ ಪ್ರೈಮ್

ಕನ್ನಡ ಮತ್ತು ತೆಲುಗಿನಲ್ಲಿ ಸದ್ದು ಮಾಡಿದ ಬಿಗ್ ಬಜೆಟ್ ಚಿತ್ರ ರಾಬರ್ಟ್ ಕೆಲದಿನವಷ್ಟೇ ಚಿತ್ರಮಂದಿರದಲ್ಲಿ ಪ್ರದರ್ಶನಗೊಂಡಿತು. ಚಿತ್ರಮಂದಿರಗಳಲ್ಲಿ ನಿರ್ಬಂಧ, ಈಗ ಲಾಕ್‌ಡೌನ್ ಕಾರಣದಿಂದ ಬೇಸತ್ತ ಚಿತ್ರತಂಡ ಚಿತ್ರವನ್ನು ಒಟಿಟಿಯಲ್ಲಿ ಬಿಡುಗಡೆ ಮಾಡಿದೆ. ವಾರಣಾಸಿಯ ಕೆಟರಿಂಗ್ ಕಂಪನಿಯ ಮುಖ್ಯ ಅಡುಗೆಯವ ರಾಘವನ (ದರ್ಶನ್)ಸೌಮ್ಯ ಮತ್ತು ಕರಾಳ ಮುಖಗಳ ಕಥಾವಸ್ತು ಚಿತ್ರದ್ದು.

ಏಕ್ ಲಿಫ್ಟ್ ಸ್ಟೋರಿ (ಹಿಂದಿ)
ನಿರ್ದೇಶನ: ವಿಪ್ಲವ್ ಶಿಂಧೆ
ತಾರಾಗಣ: ಅನಿಲ್ ಚರಣ್‌ಜೀತ್, ಪತ್ರಾಲಿ ಚಟ್ಟೋಪಾಧ್ಯಾಯ
ಪ್ರಸಾರ: ಡಿಸ್ನಿ ಪ್ಲಸ್ ಹಾಟ್‌ಸ್ಟಾರ್

ಕಥಾನಾಯಕ ಸಂತೋಷ್ ಮುಂಬೈನ ಪುಟ್ಟ ಪ್ರದೇಶದಲ್ಲಿ ಉದ್ಯೋಗಕ್ಕಾಗಿ ಬರುತ್ತಾನೆ. ಕೆಲಸ, ಬದುಕಿನ ಒತ್ತಡದ ನಡುವೆ ಎಲಿವೇಟರ್(ಲಿಫ್ಟ್)ನಲ್ಲಿ ಪ್ರೀತಿಯಲ್ಲಿ ಬೀಳುವ ಕತೆ ಇದು. ಕುತೂಹಲಕಾರಿ ತಿರುವುಗಳೊಂದಿಗೆ ಕಥೆ ನಾಟಕೀಯವಾಗಿ ತೆರೆದುಕೊಳ್ಳುತ್ತಾ ಹೋಗುತ್ತದೆ.

‘ಸೂಪರ್ ಸ್ಟಾರ್’ ಜೊತೆ ಸುಂದರಂ ಮಾಸ್ಟರ್



ರಿಯಲ್ ಸ್ಟಾರ್ ಉಪೇಂದ್ರ ಅವರ ಅಣ್ಣನ ಮಗ ನಿರಂಜನ್ ಸುಧೀಂದ್ರ ನಾಯಕನಾಗಿ ನಟಿಸುತ್ತಿರುವ ‘ಸೂಪರ್ ಸ್ಟಾರ್’ ಚಿತ್ರದಲ್ಲಿ ಖ್ಯಾತ ನೃತ್ಯ ನಿರ್ದೇಶಕ ಸುಂದರಂ ಮಾಸ್ಟರ್ (ಖ್ಯಾತ ನಟ ಪ್ರಭುದೇವ ಅವರ ತಂದೆ) ಅಭಿನಯಿಸಿದ್ದಾರೆ.

86ರ ಇಳಿ ವಯಸ್ಸಿನಲ್ಲೂ ಉತ್ಸಾಹದಿಂದ ಚಿತ್ರೀಕರಣದಲ್ಲಿ ಪಾಲ್ಗೊಂಡಿರುವ ಸುಂದರಂ ಮಾಸ್ಟರ್, ಈ ಚಿತ್ರದಲ್ಲೂ ನೃತ್ಯ ನಿರ್ದೇಶಕನ ಪಾತ್ರದಲ್ಲೇ ಕಾಣಿಸಿಕೊಳ್ಳುತ್ತಿದ್ದಾರೆ. ಇತ್ತೀಚೆಗೆ ಇವರ ಅಭಿನಯದ ಭಾಗದ ಚಿತ್ರೀಕರಣ ಬೆಂಗಳೂರಿನಲ್ಲಿ ನಡೆಯಿತು.

ಈ ವಯಸ್ಸಿನಲ್ಲೂ ಇತರೆ ಯುವಕಲಾವಿದರಿಗೂ ಕಮ್ಮಿ ಇಲ್ಲದಂತೆ ನಟಿಸಿರುವ ಸುಂದರಂ ಮಾಸ್ಟರ್ ಚಿತ್ರೀಕರಣದ ವೇಳೆ ಪಾಲ್ಗೊಂಡ ಕೆಲವು ಸನ್ನಿವೇಶಗಳನ್ನು ಚಿತ್ರತಂಡ ಮೇಕಿಂಗ್ ಟೀಸರ್ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಬಿಡುಗಡೆ ಮಾಡಿದೆ. ರಮೇಶ್ ವೆಂಕಟೇಶ್ ಬಾಬು ನಿರ್ದೇಶನದ ಈ ಚಿತ್ರದ ಎರಡು ಹಂತಗಳ ಚಿತ್ರೀಕರಣ ಮುಕ್ತಾಯವಾಗಿದೆ. ಮೂರನೇ ಹಂತದ ಚಿತ್ರೀಕರಣ ಶೀಘ್ರದಲ್ಲೇ ಆರಂಭವಾಗಲಿದೆ.

ಜಾರ ಎಸ್ಮಿನ್ ಈ ಚಿತ್ರದ ನಾಯಕಿ. ಅಚ್ಯುತ ಕುಮಾರ್, ರಂಗಾಯಣ ರಘು, ದೇವಿಯಾನಿ, ಸುಧಾ ಬೆಳವಾಡಿ, ಅವಿನಾಶ್, ಸೂರಜ್ (ಕಾಮಿಡಿ ಕಿಲಾಡಿಗಳು) ಹೀಗೆ ದೊಡ್ಡ ತಾರಾಬಳಗವೇ ಈ ಚಿತ್ರದಲ್ಲಿದೆ. ಆರ್‌ವಿಬಿ ಸಿನಿಮಾಸ್ ಲಾಂಛನದಲ್ಲಿ ಮೈಲಾರಿ ಎಂ ನಿರ್ಮಿಸುತ್ತಿರುವ ಈ ಚಿತ್ರಕ್ಕೆ ರಾಘವೇಂದ್ರ ವಿ ಸಂಗೀತ ನೀಡುತ್ತಿದ್ದಾರೆ. ಚೇತನ್ ಕುಮಾರ್ ಸಾಹಿತ್ಯವಿದೆ. ಯೋಗಿ ಛಾಯಾಗ್ರಹಣ, ವಿಜಯ್ ಕುಮಾರ್ ಸಂಕಲನ ಹಾಗೂ ಮೋಹನ್ ಬಿ ಕೆರೆ ಅವರ ಕಲಾ ನಿರ್ದೇಶನ ಈ ಚಿತ್ರಕ್ಕಿದೆ.


ಇನ್ನೆಷ್ಟು ದಿನ ಹೀಗೆ?.... (ಸಪ್ತ ಸಾಗರದಾಚೆ ಎಲ್ಲೋ ಚಿತ್ರದಲ್ಲಿ ರಕ್ಷಿತ್ ಹಾಗೂ ರುಕ್ಮಿಣಿ ವಸಂತ್)

ಚಿತ್ರೀಕರಣ ಮತ್ತೆ ಸ್ತಬ್ಧ!

ಮೊದಲ ಲಾಕ್‌ಡೌನ್‌ನಿಂದ ನಿಧಾನವಾಗಿ ಚೇತರಿಸಿಕೊಳ್ಳಲು ಪ್ರಯತ್ನಿಸುತ್ತಿದ್ದ ಚಿತ್ರರಂಗ ಈಗ ಮತ್ತೆ ತತ್ತರಿಸಿದೆ. ನಿರ್ಮಾಪಕರು, ಕಲಾವಿದರನ್ನು ಕಳೆದುಕೊಂಡಿದೆ. ಕೆಲವರು ತೀವ್ರ ಆರೋಗ್ಯ ಮತ್ತು ಆರ್ಥಿಕ ಸಂಕಷ್ಟವನ್ನು ಎದುರಿಸುತ್ತಿದ್ದಾರೆ. ಲೈಟ್ಸ್, ಕ್ಯಾಮೆರಾ, ಆ್ಯಕ್ಷನ್... ರಿಲೀಸ್ ಇತ್ಯಾದಿ ಕೇಳಲು ಇನ್ನೆಷ್ಟು ದಿನ ಬೇಕಾಗಬಹುದೋ?

ಅಭಿಲಾಷ್ ಪಿ.ಎಸ್.

ಕಳೆದ ವರ್ಷದ ಲಾಕ್‌ಡೌನ್ ಸುಳಿಯಲ್ಲಿ ಸಿಲುಕಿ ಸಂಕಷ್ಟ ಅನುಭವಿಸಿದ್ದ ಕನ್ನಡ ಚಿತ್ರರಂಗ ಫೆಬ್ರುವರಿಯಲ್ಲಿ ಮೈಕೊಡವಿ ಮತ್ತೆ ಎದ್ದುನಿಂತಿತ್ತು. ‘ಇನ್‌ಸ್ಪೆಕ್ಟರ್ ವಿಕ್ರಂ’, ‘ಪೊಗರು’, ಹೀರೋ’, ‘ರಾಬರ್ಟ್’, ‘ಯುವರತ್ನ’ ಹೀಗೆ ಸಾಲು ಸಾಲು ಚಿತ್ರಗಳು ತೆರೆ ಮೇಲೆ ರಾರಾಜಿಸಿ ಪ್ರೇಕ್ಷಕರನ್ನು ಮತ್ತೆ ಚಿತ್ರಮಂದಿರದತ್ತ ಸೆಳೆದಿದ್ದವು. ಇದೇ ಸಂಭ್ರಮದಲ್ಲಿದ್ದ ಚಿತ್ರರಂಗ ಚೇತರಿಕೆಯ ಹಾದಿಯಲ್ಲಿದ್ದಾಗಲೇ ಇದೀಗ ಮತ್ತೆ ‘ಪ್ಯಾಕಪ್’ ಎಂದಿದೆ. ಚಿತ್ರಮಂದಿರಗಳಲ್ಲಿ ಪ್ರೇಕ್ಷಕರ ಸಂಖ್ಯೆ ಶೇ 50 ನಿರ್ಬಂಧದ ಬೆನ್ನಲ್ಲೇ 14 ದಿನಗಳ ಕೊರೊನಾ ಕರ್ಫ್ಯೂ ಆದೇಶ, ಇಡೀ ಚಿತ್ರರಂಗ ಹಾಗೂ ಕಿರುತೆರೆ ಮತ್ತೆ ಸ್ತಬ್ಧವಾಗುವಂತೆ ಮಾಡಿದೆ.

ನಟ ಪುನೀತ್ ರಾಜ್‌ಕುಮಾರ್ ಅಭಿನಯದ ‘ಯುವರತ್ನ’ ಬಿಡುಗಡೆಯಾದ ಮೂರೇ ದಿನಕ್ಕೆ ಚಿತ್ರಮಂದಿರಗಳಲ್ಲಿ ಪ್ರೇಕ್ಷಕರ ಸಂಖ್ಯೆ ನಿರ್ಬಂಧದ ಆದೇಶವನ್ನು ಸರ್ಕಾರ ಹೊರಡಿಸಿತ್ತು. ಇದರ ಪರಿಣಾಮ, ನಷ್ಟ ತಪ್ಪಿಸಿಕೊಳ್ಳಲು ಬಿಡುಗಡೆಯಾದ ಒಂದು ವಾರದೊಳಗೆ ಚಿತ್ರವನ್ನು ಒಟಿಟಿಗೆ ನಿರ್ಮಾಪಕರು ಮಾರಾಟ ಮಾಡಿದರು. ಈ ಕಠಿಣ ಸ್ಥಿತಿಯಲ್ಲೂ ನಟ ಅಜೇಯ್ ರಾವ್ ನಟನೆಯ ‘ಕೃಷ್ಣ ಟಾಕೀಸ್’ ಚಿತ್ರವು ಚಿತ್ರಮಂದಿರಕ್ಕೆ ಹೆಜ್ಜೆ ಇಟ್ಟಿತ್ತು. ಕೋವಿಡ್ ಪ್ರಕರಣಗಳ ಸಂಖ್ಯೆ ಏರಿಕೆ ಹಾಗೂ ಸರ್ಕಾರವು ಲಾಕ್‌ಡೌನ್ ಮಾಡುವ ಸೂಚನೆ ದೊರೆತ ಬೆನ್ನಲ್ಲೇ ಚಿತ್ರತಂಡವು ಪ್ರದರ್ಶನವನ್ನು ಸ್ಥಗಿತಗೊಳಿಸಿ, ಚಿತ್ರಮಂದಿರಗಳು ತೆರೆದ ಬಳಿಕ ಮತ್ತೆ ಬಿಡುಗಡೆ ಮಾಡುವುದಾಗಿ ಘೋಷಿಸಿದೆ.

ಹೈದರಾಬಾದ್‌ಗೆ ‘ಲಗಾಮ್’?

ಕಳೆದ ವಾರವಷ್ಟೇ ಮುಹೂರ್ತ ನಡೆದಿದ್ದ ಸೂಪರ್‌ಸ್ಟಾರ್ ಉಪೇಂದ್ರ ನಟನೆಯ ‘ಲಗಾಮ್’ ಚಿತ್ರದ ಚಿತ್ರೀಕರಣ ಏ.26ರಿಂದ ಮೈಸೂರಿನಲ್ಲಿ ಆರಂಭವಾಗಬೇಕಿತ್ತು. ಆದರೆ ಲಾಕ್‌ಡೌನ್ ನಿರ್ಬಂಧದ ಕಾರಣ ಇದನ್ನು ಮುಂದೂಡಲಾಗಿದೆ. ‘ಮೇ 2ರಂದು ಚುನಾವಣಾ ಫಲಿತಾಂಶದ ಬಳಿಕ ಕೇಂದ್ರ ಸರ್ಕಾರ ಯಾವ ನಿರ್ಧಾರ ಕೈಗೊಳ್ಳುತ್ತದೆ ಎಂದು ನೋಡಬೇಕು. ರಾಷ್ಟ್ರವ್ಯಾಪಿ ಲಾಕ್‌ಡೌನ್ ಆಗದೇ ಇದ್ದರೆ ಹೈದರಾಬಾದ್‌ಗೆ ಪ್ರಯಾಣಿಸಲು ನಾವು ನಿರ್ಧರಿಸಿದ್ದೇವೆ. ರಾಮೋಜಿರಾವ್ ಫಿಲ್ಮ್‌ಸಿಟಿಯಲ್ಲಿ ಹತ್ತು ದಿನ ಚಿತ್ರೀಕರಣ ನಡೆಸಲು ಯೋಜನೆ ರೂಪಿಸಿದ್ದೇವೆ. ಬಳಿಕ ಮೈಸೂರಿಗೆ ಮರಳಲಿದ್ದೇವೆ. ಮೇ 10ರ ಬಳಿಕ ರಾಜ್ಯ ಸರ್ಕಾರ ಚಿತ್ರೀಕರಣಕ್ಕೆ ಅನುಮತಿ ನೀಡಬೇಕು. ಇಲ್ಲವಾದಲ್ಲಿ ಕಳೆದ ವರ್ಷ ಅನುಭವಿಸಿದ ಸಂಕಷ್ಟವನ್ನೇ ಮತ್ತೆ ಚಿತ್ರರಂಗ ಅನುಭವಿಸಲಿದೆ’ ಎಂದು ಲಗಾಮ್ ಚಿತ್ರದ ಪ್ರೊಡಕ್ಷನ್ ಕಂಟ್ರೋಲರ್ ಕೇಶವ್ ಅವರು ತಿಳಿಸಿದರು.

ವಿಸ್ತರಣೆಯಾದರೆ ಕಷ್ಟ!

‘ಕಳೆದ ಬಾರಿ ಏಕಾಏಕಿ ಲಾಕ್‌ಡೌನ್ ಘೋಷಣೆಯಾದ ಕಾರಣ ಧಾರಾವಾಹಿಗಳ ಪ್ರಸಾರಕ್ಕೆ ಸಮಸ್ಯೆಯಾಗಿತ್ತು. ಸಂಚಿಕೆಗಳ ಸಂಗ್ರಹ ಇರಲಿಲ್ಲ. ಈ ಬಾರಿಯೂ ಇದೇ ಸಮಸ್ಯೆ ಎದುರಾಗುವ ಸಾಧ್ಯತೆ ಇದೆ. ಈ ಬಾರಿಯ ಲಾಕ್‌ಡೌನ್ ಸ್ವಲ್ಪ ವಿಸ್ತರಣೆಯಾದರೆ, ಸಂಚಿಕೆಗಳು ನಿಧಾನ ಹೋಗಲಿವೆ. ಕಳೆದ ಬಾರಿಯಂತೆ ತಿಂಗಳುಗಟ್ಟಲೆ ಲಾಕ್‌ಡೌನ್ ವಿಸ್ತರಣೆಯಾದರೆ ಸಮಸ್ಯೆ ಮತ್ತಷ್ಟು ಬಿಗಡಾಯಿಸಲಿದೆ. ಬಿಗ್‌ಬಾಸ್ ಈಗಾಗಲೇ ನಡೆಯುತ್ತಿರುವ ಕಾರ್ಯಕ್ರಮವಾದ ಕಾರಣ, ಅದು ಸ್ಥಗಿತಗೊಳ್ಳುವುದಿಲ್ಲ. ಸ್ಪರ್ಧಿಗಳೆಲ್ಲರೂ ಒಂದು ಮನೆಯೊಳಗೆ ಇದ್ದಾರೆ. ಬಯೋಬಲ್‌ನಲ್ಲಿ ಇದು ನಡೆಯುತ್ತಿದೆ. ವಾರಾಂತ್ಯದ ಸಂಚಿಕೆಗಳ ಚಿತ್ರೀಕರಣವೇ ನಮಗೆ ಸವಾಲಾಗಿದೆ. ಈ ಬಗ್ಗೆ ಇನ್ನಷ್ಟೇ ನಿರ್ಧಾರ ಕೈಗೊಳ್ಳಬೇಕಿದೆ. ಈ ಬಾರಿಯ ಆವೃತ್ತಿಯಲ್ಲಿ ವಾರಾಂತ್ಯದ ಸಂಚಿಕೆಗಳಿಗೆ ಯಾವುದೇ ಅತಿಥಿಗಳಿಲ್ಲ’ ಎಂದು ಕಲರ್ಸ್ ಕನ್ನಡ ಕ್ಲಸ್ಟರ್ ಹೆಡ್ ಹಾಗೂ ಬಿಗ್ ಬಾಸ್ ಶೋನ ನಿರ್ದೇಶಕ ಪರಮೇಶ್ವರ ಗುಂಡ್ಕಲ್ ತಿಳಿಸಿದರು.

ಇನ್ನೂ ಕೆಲ ಧಾರಾವಾಹಿ ತಂಡಗಳು ರೆಸಾರ್ಟ್‌ನತ್ತ ಮುಖ ಮಾಡಿದ್ದು, ಅಲ್ಲಿಯೇ ಬಯೋಬಬಲ್‌ನಲ್ಲಿ ಇದ್ದುಕೊಂಡು ಚಿತ್ರೀಕರಣ ನಡೆಸಲು ಚಿಂತನೆ ನಡೆಸಿವೆ. ಒಟ್ಟಾರೆ ಕಲಾರಂಗ ಸ್ತಬ್ಧವಾಗಿರುವುದರಿಂದ ನಿರ್ಮಾಪಕರಿಂದ ಹಿಡಿದು ಲೈಟ್‌ಬಾಯ್‌ವರೆಗೂ, ಚಿತ್ರಮಂದಿರದ ಮಾಲೀಕರಿಂದ ಹಿಡಿದು ಅಲ್ಲಿ ಪಾಪ್‌ಕಾರ್ನ್ ಮಾರುವವನವರೆಗೂ ಮತ್ತೆ ಸಂಕಷ್ಟ ಎದುರಾಗಿದೆ.


ಪರಮೇಶ್ವರ್ ಗುಂಡ್ಕಲ್


ಹೇಮಂತ್


ಪವನ್ ಒಡೆಯರ್

ಲಸಿಕೆ ಬಳಿಕವೇ ಶೂಟಿಂಗ್

‘ಲಾಕ್‌ಡೌನ್ ಮುಗಿಯಲು ಕಾಯುತ್ತಿದ್ದೇವೆ. ಈ ಸಂದರ್ಭದಲ್ಲಿ ಲಾಕ್‌ಡೌನ್ ಅವಶ್ಯಕತೆ ಇತ್ತು. ಚಿತ್ರತಂಡದ ಸದಸ್ಯರು ಹಾಗೂ ಕಲಾವಿದರ ಆರೋಗ್ಯ ನಮಗೆಲ್ಲರಿಗೂ ಮುಖ್ಯ. ಮೇ 1ರಿಂದ 18 ವರ್ಷ ಮೇಲ್ಪಟ್ಟ ಎಲ್ಲರಿಗೂ ಲಸಿಕೆ ಲಭ್ಯವಾಗುವುದರಿಂದ, ಇಡೀ ತಂಡದ ಸದಸ್ಯರು ಲಸಿಕೆ ಹಾಕಿಕೊಂಡ ಬಳಿಕವೇ ಚಿತ್ರೀಕರಣ ನಡೆಸಲು ನಿರ್ಧರಿಸಿದ್ದೇವೆ. ಇದರಿಂದ ಎಲ್ಲರೂ ಸುರಕ್ಷಿತವಾಗಿರಲಿದ್ದಾರೆ. ಲಸಿಕೆ ಪಡೆದರೆ ಒಂದು ಹಂತದ ಸುರಕ್ಷತೆಯಾದರೂ ಇರುತ್ತದೆ ಅಲ್ಲವೇ. ಲಾಕ್‌ಡೌನ್ ಮುಗಿದ ಬಳಿಕವೂ ಕೋವಿಡ್ ಪ್ರಕರಣಗಳ ಸಂಖ್ಯೆ ಇಳಿಕೆಯಾಗದೇ ಇದ್ದಲ್ಲಿ, ಯಾವಾಗ ಸುರಕ್ಷಿತವಾದ ವಾತಾವರಣ ಇರುತ್ತದೆಯೋ ಆ ಸಂದರ್ಭದಲ್ಲೇ ಮತ್ತೆ ಚಿತ್ರೀಕರಣ ಆರಂಭಿಸುತ್ತೇವೆ’ ಎಂದು ‘ಸಪ್ತ ಸಾಗರದಾಚೆ ಎಲ್ಲೋ’ ಚಿತ್ರದ ನಿರ್ದೇಶಕ ಹೇಮಂತ್ ಎಂ.ರಾವ್ ಹೇಳಿದರು.

ಕೊರೊನಾ ಕರ್ಫ್ಯೂ ಘೋಷಣೆಯಾಗುವ ಮುನ್ನವೇ ‘ರೆಮೊ’ ಚಿತ್ರತಂಡ ಕಾಶ್ಮೀರಕ್ಕೆ ಪ್ರಯಾಣ ಬೆಳೆಸಿತ್ತು. ‘ಕರ್ನಾಟಕದಲ್ಲಿ ಏಕಾಏಕಿ ಲಾಕ್‌ಡೌನ್ ಜಾರಿಯಾದ ಕಾರಣ, ವಿಮಾನ ಸಂಚಾರ ರದ್ದಾಗಿ ಸಮಸ್ಯೆಯಾಗಿತ್ತು. ಹೀಗಾಗಿ ಅಮೃತಸರಕ್ಕೆ ಪ್ರಯಾಣಿಸಿ ಅಲ್ಲಿಂದ ಬೆಂಗಳೂರಿಗೆ ಬಂದೆವು. ಚಿತ್ರದ ಚಿತ್ರೀಕರಣ ಪೂರ್ಣಗೊಂಡಿದ್ದು, ಪೋಸ್ಟ್ ಪ್ರೊಡಕ್ಷನ್ ಸಿದ್ಧತೆ ನಡೆದಿದೆ’ ಎಂದರು ನಿರ್ದೇಶಕ ಪವನ್ ಒಡೆಯರ್.


ಕಿರುತೆರೆ

ದಿಲೀಪ್ ಶೆಟ್ಟಿ

ದಿಲೀಪ್ ಶೆಟ್ಟಿ ನಟನೆಯ ಹಾದಿ

ರೇಷ್ಮಾ

ದೂರದ ದುಬೈನಲ್ಲಿ ಉದ್ಯೋಗದಲ್ಲಿದ್ದ ಮೂಡಬಿದಿರೆಯ ಆ ಹುಡುಗ ಅಲ್ಲಿನ ಕಾರ್ಯಕ್ರಮವೊಂದರಲ್ಲಿ ಮಿಸ್ಟರ್ ದುಬೈ ಪಟ್ಟಕ್ಕೇರುತ್ತಾರೆ. ಇವರ ಫೋಟೊ ಹಾಗೂ ವಿಡಿಯೊಗಳನ್ನು ನೋಡಿದ್ದ ಜೀ ಕನ್ನಡದ ವಾಹಿನಿಯು ಇವರಿಗೆ ‘ವಿದ್ಯಾ ವಿನಾಯಕ’ ಧಾರಾವಾಹಿಯಲ್ಲಿ ನಟಿಸಲು ಅವಕಾಶ ನೀಡುತ್ತದೆ. ಹೀಗೆ ನಟನೆ ಆರಂಭಿಸಿದವರು ದಿಲೀಪ್ ಆರ್. ಶೆಟ್ಟಿ. ಸದ್ಯ ಉದಯ ವಾಹಿನಿಯ ‘ಕಸ್ತೂರಿ ನಿವಾಸ’ ಧಾರಾವಾಹಿಯಲ್ಲಿ ನಾಯಕನಾಗಿ ನಟಿಸುತ್ತಿರುವ ಇವರು ರಾಬರ್ಟ್ ಸಿನಿಮಾದಲ್ಲೂ ನಟಿಸಿದ್ದಾರೆ. ‘ಸಿನಿಮಾ ಪುರವಣಿ’ಗೆ ದಿಲೀಪ್ ತಮ್ಮ ಪರಿಚಯ ಮಾಡಿಕೊಂಡಿದ್ದು ಹೀಗೆ..

ಆರಂಭದ ದಿನಗಳು

ಬ್ಯಾಂಕ್ ಮ್ಯಾನೇಜರ್ ಅಥವಾ ಅಕೌಂಟೆಂಟ್ ಆಗಬೇಕು ಎಂಬ ಕನಸು ಇರಿಸಿಕೊಂಡಿದ್ದ ದಿಲೀಪ್, ವಿದ್ಯಾ ವಿನಾಯಕ ಧಾರಾವಾಹಿ ಮೂಲಕ ನಟನಾಗುತ್ತಾರೆ. ಆರಂಭದ ದಿನಗಳಲ್ಲಿ ಕ್ಯಾಮೆರಾ ಎದುರಿಸುವುದು, ನಟಿಸುವುದು ಸುಲಭವಿರಲಿಲ್ಲ. ತನ್ನದಲ್ಲದ ದಾರಿಯಲ್ಲಿ ಸಾಗುವುದು ಕಷ್ಟವೇ ಆಗಿತ್ತು ಎನ್ನುವ ಇವರು ಸದ್ಯ ಧಾರಾವಾಹಿ ಹಾಗೂ ಸಿನಿಮಾ ಎರಡೂ ಕ್ಷೇತ್ರದಲ್ಲಿ ಮಿಂಚುತ್ತಿದ್ದಾರೆ.

ತೆಲುಗಿನಲ್ಲೂ ನಟನೆ

ಕನ್ನಡ ಕಿರುತೆರೆಯ ಒಂದೇ ಧಾರಾವಾಹಿಯಲ್ಲಿನ ಇವರ ನಟನೆ ತೆಲುಗು ಕಿರುತೆರೆಗೂ ಪರಿಚಯವಾಗುವಂತೆ ಮಾಡಿತ್ತು. ತೆಲುಗಿನ ‘ಸ್ವರ್ಣಖಡ್ಗಂ’ ಧಾರಾವಾಹಿಯಲ್ಲಿ ನಟಿಸಿದ್ದ ಇವರು ಸದ್ಯ ಜೀ ತೆಲುಗು ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ ‘ಕೃಷ್ಣ ತುಳಸಿ’ ಧಾರಾವಾಹಿಯಲ್ಲೂ ನಟಿಸುತ್ತಿದ್ದಾರೆ.

ಖ್ಯಾತಿ ತಂದ ಕಸ್ತೂರಿ ನಿವಾಸ


‘ಕಸ್ತೂರಿ ನಿವಾಸ ಕೌಟುಂಬಿಕ ಹಿನ್ನೆಲೆ ಇರುವ ಧಾರಾವಾಹಿ. ತುಂಬು ಕುಟುಂಬದಲ್ಲಿನ ಒಗ್ಗಟ್ಟು, ಭಿನ್ನಾಭಿಪ್ರಾಯ ಎಲ್ಲವೂ ಇದರಲ್ಲಿದೆ. ನಮ್ಮ ನಿಜ ಜೀವನದಲ್ಲಿ ನಡೆಯುವ ಘಟನೆಗಳೇ ಈ ಧಾರಾವಾಹಿಯಲ್ಲಿ ಪ್ರತಿಫಲಿತವಾಗುತ್ತವೆ. ನನ್ನದು ಧಾರಾವಾಹಿಯಲ್ಲಿ ನಾಯಕನ ಪಾತ್ರ. ಆ ಪಾತ್ರ ನನಗೆ ತುಂಬಾನೇ ಹೆಸರು ತಂದುಕೊಟ್ಟಿದೆ. ಹೊರಗಡೆ ಜನ ನನ್ನನ್ನು ರಾಘವ ಎಂದೇ ಗುರುತಿಸುತ್ತಾರೆ. ಧಾರಾವಾಹಿಯಲ್ಲಿ ನನಗೆ ನನ್ನ ಗುರು ಮುಸ್ಸಂಜೆ ಮಹೇಶ್ ಸಿಕ್ಕಿದ್ದರು. ಅವರು ನನಗೆ ನಟನೆಯ ಹಾಗೂ ಈ ಕ್ಷೇತ್ರದ ಆಳ-ಅಗಲದ ಪರಿಚಯ ಮಾಡಿಸಿದವರು. ಅದರೊಂದಿಗೆ ಧಾರಾವಾಹಿ ಇಡೀ ತಂಡ ನನಗೆ ಕಲಿಸಿದೆ. ಒಟ್ಟಾರೆ ಕಸ್ತೂರಿ ನಿವಾಸ ನನಗೆ ಹೆಸರು, ಖ್ಯಾತಿ ಎರಡನ್ನೂ ತಂದುಕೊಟ್ಟಿದೆ’ ಎಂದು ಹೇಳುತ್ತಾರೆ.

ರಾಬರ್ಟ್‌ನಲ್ಲೂ ಪಾತ್ರ

ಚಾಲೆಂಜಿಂಗ್ ಸ್ಟಾರ್ ದರ್ಶನ್ ನಟನೆಯ ‘ರಾಬರ್ಟ್’ ಸಿನಿಮಾದಲ್ಲೂ ನಟಿಸಿರುವ ದಿಲೀಪ್‌ಗೆ ಇದು ಮೊದಲ ಸಿನಿಮಾ. ‘ತಕಧಿಮಿತ’ ರಿಯಾಲಿಟಿ ಷೋದಲ್ಲಿ ನನ್ನನ್ನು ನೋಡಿದ ತರುಣಣ್ಣ ಸಿನಿಮಾಕ್ಕೆ ಆಯ್ಕೆ ಮಾಡಿದ್ದರು. ಸಿನಿಮಾದಲ್ಲಿ ನನ್ನದು ನೆಗೆಟಿವ್ ಪಾತ್ರ. ಆದರೂ ನನಗೆ ಬೇಸರವಿಲ್ಲ. ಈ ಸಿನಿಮಾದಲ್ಲಿ ದರ್ಶನ್‌ರಂತಹ ಸ್ಟಾರ್, ನಿರ್ದೇಶಕರು ಸೇರಿದಂತೆ ಹಲವು ಲೆಜೆಂಡ್‌ಗಳ ಜೊತೆ ಕೆಲಸ ಮಾಡಿದ್ದೇನೆ. ಅವರೆಲ್ಲರ ಜೊತೆ ಕೆಲಸ ಮಾಡಲು ಅವಕಾಶ ಸಿಕ್ಕಿರುವುದೇ ದೊಡ್ಡ ಸಂಗತಿ. ಆ ವಿಷಯದಲ್ಲಿ ನಾನು ತುಂಬಾನೇ ಅದೃಷ್ಟವಂತ’ ಎನ್ನುತ್ತಾರೆ.

ರಾಬರ್ಟ್ ನಂತರ ವೆಬ್‌ಸಿರೀಸ್ ಹಾಗೂ ಕೆಲವು ಸಿನಿಮಾಗಳಿಂದ ಇವರಿಗೆ ಅವಕಾಶ ಬಂದಿತ್ತು. ಆದರೆ ಸದ್ಯ ಕೊರೊನಾ ಇರುವ ಕಾರಣ ಶೂಟಿಂಗ್ ಮುಂದಕ್ಕೆ ಹೋಗಿದೆ. ಪರಿಸ್ಥಿತಿ ಸುಧಾರಿಸಿದ ಮೇಲೆ ಮತ್ತಷ್ಟು ಸಿನಿಮಾ ಧಾರಾವಾಹಿ, ವೆಬ್‌ಸಿರೀಸ್‌ಗಳಲ್ಲಿ ನಟಿಸುವ ಭರವಸೆ ಇವರದ್ದು. ‘ಒಂದೇ ರೀತಿಯ ಪಾತ್ರಗಳಲ್ಲಿ ನಟಿಸುವುದಕ್ಕಿಂತ ಭಿನ್ನ ಪಾತ್ರಗಳಿಗೆ ಜೀವ ತುಂಬುವುದು ನನಗೆ ಇಷ್ಟ. ಚಾಲೆಂಜಿಂಗ್ ಅಥವಾ ಔಟ್ ಆಫ್ ದಿ ಸ್ಕೇಲ್ ಪಾತ್ರಗಳಲ್ಲಿ ನಟಿಸುವುದು ಇಷ್ಟವಾಗುತ್ತದೆ’ ಎನ್ನುತ್ತಾರೆ ದಿಲೀಪ್.

ಶಿವರಾಜ್‌ಕುಮಾರ್ ಹೊಸ ಚಿತ್ರದ ಚಿತ್ರೀಕರಣ ಜೂನ್‌ನಲ್ಲಿ ಆರಂಭ


ಶಿವರಾಜ್‌ಕುಮಾರ್

ನಟ ಶಿವರಾಜ್‌ಕುಮಾರ್ ಅಭಿನಯಿಸುತ್ತಿರುವ 124ನೇ ಚಿತ್ರ ಜೂನ್‌ನಲ್ಲಿ ಸೆಟ್ಟೇರಲಿದೆ. ವಿಭಿನ್ನ ಕಥಾಹಂದರ ಹೊಂದಿರುವ ಈ ಚಿತ್ರವನ್ನು ರಾಮ್ ಧುಲಿಪುಡಿ ನಿರ್ದೇಶಿಸಲಿದ್ದಾರೆ.

ಚಿತ್ರದ ಹೆಸರು ಇನ್ನೂ ಅಂತಿಮಗೊಂಡಿಲ್ಲ. ಬಾಲಶ್ರೀರಾಮ್ ಸ್ಟುಡಿಯೋಸ್ ಲಾಂಛನದಲ್ಲಿ ಸ್ವಾತಿ ವನಪಲ್ಲಿ, ಶ್ರೀಕಾಂತ್ ಧುಲಿಪುಡಿ ಹಾಗೂ ನಾರಾಲ ಶ್ರೀನಿವಾಸ ರೆಡ್ಡಿ ಈ ಚಿತ್ರವನ್ನು ನಿರ್ಮಿಸುತ್ತಿದ್ದು, ಜೂನ್ ಮೊದಲ ವಾರದಲ್ಲಿ ಚಿತ್ರೀಕರಣ ಆರಂಭವಾಗಲಿದೆ. 70 ದಿನಗಳ ಕಾಲ ಚಿಕ್ಕಮಗಳೂರು, ಬೆಂಗಳೂರು, ಜಮ್ಮು ಹಾಗೂ ಕಾಶ್ಮೀರ ಮುಂತಾದ ಕಡೆ ಚಿತ್ರೀಕರಣ ನಡೆಯಲಿದೆ.

ಖ್ಯಾತ ನಟರಾದ ನಾಜರ್, ಸಂಪತ್ ಹಾಗೂ ಸಾಧುಕೋಕಿಲ ಸಹ ಈ ಚಿತ್ರದ ಮುಖ್ಯ ಪಾತ್ರದಲ್ಲಿ ಅಭಿನಯಿಸುತ್ತಿದ್ದಾರೆ. ತೆಲುಗು ಭಾಷೆಗೆ ಡಬ್ ಆದ ರಾಬರ್ಟ್ ಚಿತ್ರದಲ್ಲಿದ್ದ ಹಾಡಿನ ಮೂಲಕ ಖ್ಯಾತಿ ಪಡೆದ ಗಾಯಕಿ ಮಂಗ್ಲಿ ಅವರೂ ಈ ಚಿತ್ರದಲ್ಲಿ ನಟಿಸುತ್ತಿದ್ದಾರೆ. ಕುಡಿಪುಡಿ ವಿಜಯಕುಮಾರ್ ಕಾರ್ಯಕಾರಿ ನಿರ್ಮಾಪಕರಾಗಿ ಕಾರ್ಯ ನಿರ್ವಹಿಸುತ್ತಿರುವ ಈ ಚಿತ್ರಕ್ಕೆ ರವಿಕುಮಾರ್ ಸನಾ ಅವರ ಛಾಯಾಗ್ರಹಣವಿದೆ. ‘ಟಗರು’ ಖ್ಯಾತಿಯ ಚರಣ್ ರಾಜ್ ಸಂಗೀತ ನಿರ್ದೇಶನ, ದೀಪು ಎಸ್ ಕುಮಾರ್ ಸಂಕಲನ, ರವಿವರ್ಮ ಸಾಹಸ ನಿರ್ದೇಶನ ಹಾಗೂ ರವಿ ಸಂತೆಹಕ್ಲು ಕಲಾ ನಿರ್ದೇಶನ ಈ ಹೊಸ ಚಿತ್ರಕ್ಕಿದೆ.

ಈ ಚಿತ್ರದ ಬಳಿಕ ಶಿವರಾಜ್‌ಕುಮಾರ್ ಅಭಿನಯಿಸಲಿರುವ 125ನೇ ಚಿತ್ರ ‘ವೇದ’ ಸೆಟ್ಟೇರಲಿದೆ. ಈ ಚಿತ್ರಕ್ಕೆ ಎ.ಹರ್ಷ ನಿರ್ದೇಶನವಿದ್ದು, ಗೀತಾ ಶಿವರಾಜ್‌ಕುಮಾರ್ ನಿರ್ಮಾಪಕರಾಗಿರಲಿದ್ದಾರೆ. ಇದರ ಫಸ್ಟ್‌ಲುಕ್ ಈಗಾಗಲೇ ಬಿಡುಗಡೆಯಾಗಿದೆ.

ಕಥೆಯೊಂದು ಮೂರು ನಿರ್ದೇಶಕರು!

ಒಂದೇ ಸಿನಿಮಾದಲ್ಲಿ ಹಲವು ಕಥೆಗಳಿದ್ದ ‘ಕಥಾಸಂಗಮ’ ಚಂದನವನದಲ್ಲಿ ಕೆಲ ವರ್ಷದ ಹಿಂದೆ ಸದ್ದು ಮಾಡಿತ್ತು. ಇದೇ ಮಾದರಿಯ ಸಿನಿಮಾವೊಂದು ಇದೀಗ ಗಾಂಧಿನಗರದಲ್ಲಿ ಸದ್ದಿಲ್ಲದೇ ಸೆಟ್ಟೇರಿದೆ.

ಒಂದೇ ಕಥೆಯಲ್ಲಿ ಮೂರು ಸಂದೇಶ ಇರುವ ಕಥೆಗಳನ್ನು ಒಗ್ಗೂಡಿಸಿ ‘ಶಾಂತಿಯನ್ನು ಕಳೆದುಕೊಳ್ಳಬೇಡಿ’ ಎಂಬ ಹೊಸ ಸಿನಿಮಾವನ್ನು ತೆರೆ ಮೇಲೆ ತರಲು ಹೊಸಬರ ತಂಡವೊಂದು ಪ್ರಯತ್ನಿಸಿದೆ. ‘ಚುಕ್ಕಿ, ಮೀರಾ ಮಾಧವ, ಮೇಘ ಮೈಯೂರಿ, ಅಂಬಾರಿ’ಯಂತಹ ಧಾರಾವಾಹಿ ಹಾಗೂ ಕನ್ನಡ ಹಾಗೂ ತುಳು ಸಿನಿಮಾದಲ್ಲಿ ಸಹ-ನಿರ್ದೇಶಕರಾಗಿ ಅನುಭವ ಇರುವ ವಿಘ್ನೇಶ್ ಶೇರೆಗಾರ್ ಅವರು ಮೊದಲ ಬಾರಿಗೆ ಚಂದನವನದಲ್ಲಿ ಆ್ಯಕ್ಷನ್ ಕಟ್ ಹೇಳಲಿದ್ದಾರೆ.

ಗಿರೀಶ್ ಕಾಸರವಳ್ಳಿ ಅವರ ಸಿನಿಮಾದಲ್ಲಿ ನಿರ್ದೇಶನದ ಅನುಭವ ಇರುವ ಬಾಸುಮ ಕೊಡಗು, ಹಾಗೂ ಕಿರು ಚಿತ್ರಗಳನ್ನು ನಿರ್ದೇಶಿಸುತ್ತಿದ್ದ ಶಿವ ಅವರ ಜೊತೆಗೂಡಿ ವಿಘ್ನೇಶ್ ಇದನ್ನು ರಚಿಸಿದ್ದಾರೆ. ವಿಘ್ನೇಶ್ ಅವರ ನಿರ್ದೇಶನದ ಮೊದಲ ಭಾಗದ ಕಥೆ ಮಾನವನ ಅಸ್ತಿತ್ವದ ಬಗ್ಗೆ ಹೇಳುತ್ತದೆ. ಮನುಷ್ಯ ಸತ್ತ ಮೇಲೂ ಜೀವಂತವಾಗಿರುವ ಬಗ್ಗೆ ಅವರು ಕಥೆ ಹೇಳುತ್ತಾರೆ. ಎರಡನೇ ಭಾಗದ ಕಥೆಯನ್ನು ಬಾಸುಮ ಕೊಡಗು ಅವರು ನಿರ್ದೇಶಿಸುತ್ತಿದ್ದು, ಇದರಲ್ಲಿ ತಾಯಿ ಮಗುವಿನ ಸಂಬಂಧದ ಬಗ್ಗೆ ಹೇಳಿದ್ದಾರೆ. ಮೂರನೇ ಕಥೆ, ಕೆಲಸ ಹುಡುಕಿಕೊಂಡು ಬೆಂಗಳೂರಿಗೆ ಬರುವ ಹುಡುಗನೊಬ್ಬ ಹ್ಯಾಕರ್ ಆಗಿ ಬದಲಾಗುವ ಕುರಿತಾಗಿದೆ. ಇದನ್ನು ಶಿವ ಅವರು ನಿರ್ದೇಶಿಸುತ್ತಿದ್ದಾರೆ.


ಕಾರ್ತಿಕ್

ನಾಯಕ ನಟನಾಗಿ ಕಾರ್ತಿಕ್ ಹಾಗೂ ನಾಯಕಿಯಾಗಿ ಹರ್ಷಿತಾ ಅಭಿನಯಿಸಿದ್ದು, ಹಿರಿಯ ನಟರಾದ ಜಿ.ಕೆ. ಶಂಕರ್, ರಾಜಣ್ಣ ತಾರಾಬಳಗದಲ್ಲಿದ್ದಾರೆ. ಕಾರ್ತಿಕ್, ಇಂದ್ರಜಿತ್, ಹರ್ಷಿತಾ, ಸಂಗೀತ, ಚಂದ್ರಕಲಾ ಭಟ್,ರಾಕೇಶ್, ಸಂಪತ್ ಶಾಸ್ತ್ರೀ ,ಕಾವ್ಯ ಕೊಡಗು ಹೀಗೆ ಹೊಸಮುಖಗಳಿವೆ. ಪದ್ಮಾವತಿ ಸ್ಟುಡಿಯೋಸ್ ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದು, ಕಲ್ಕಿಅಭಿಷೇಕ್ ಹಾಗೂ ಜಾನ್ ಮೊಜಾರ್ಟ್ ಅವರ ಸಂಗೀತ ನಿರ್ದೇಶನವಿದೆ.


ಹರ್ಷಿತಾ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



❦ ಸುಭಾಷಿತ ❦

ನೀವು ಎಸಗಿದ ತಪ್ಪಿಗೆ ಮೌಲ್ಯ ಬರುವುದು ಈ ನಾಲ್ಕು ಸಂಗತಿಗಳನ್ನು ನೀವು ಅನುಸರಿಸಿದಾಗ ಮಾತ್ರ. ಆ ತಪ್ಪನ್ನು ಗುರುತಿಸಿ, ಒಪ್ಪಿಕೊಳ್ಳಿ, ಅದರಿಂದ ಪಾಠ ಕಲಿಯಿರಿ, ಅದನ್ನು ಮರೆತುಬಿಡಿ.

-ಜಾನ್ ವುಡನ್

ಮಾತಿನ ಸಾಂತ್ವನವೂ ದುಬಾರಿ ಧಿಮಾಕಿಗೆ ಬೇಕು ಕಡಿವಾಣ

ಕೊರೊನಾ ಸೋಂಕಿನ ಬೇಗೆಯಿಂದ ದೇಶವೇ ಕಂಗೆಟ್ಟಿದ್ದರೂ ಕೆಲವು ರಾಜಕಾರಣಿಗಳ ಅಧಿಕಾರ ಮದ ಮಾತ್ರ ಕಡಿಮೆಯಾಗಿಲ್ಲ ಎನ್ನುವುದಕ್ಕೆ ಆಹಾರ ಸಚಿವ ಉಮೇಶ ಕತ್ತಿ ಅವರು ರೈತರೊಬ್ಬರ ಪ್ರಶ್ನೆಗೆ ಬೇಜವಾಬ್ದಾರಿಯಿಂದ ಉತ್ತರಿಸಿರುವುದು ಉದಾಹರಣೆಯಂತಿದೆ. ಪಡಿತರ ಅಕ್ಕಿ ಕಡಿತಗೊಳಿಸಿರುವ ಸರ್ಕಾರದ ನಿರ್ಧಾರದಿಂದ ಆತಂಕಗೊಂಡು ಫೋನ್ ಮಾಡಿರುವ ರೈತರೊಬ್ಬರು, ‘ಹೀಗಾದರೆ ನಾವು ಉಪವಾಸ ಇರೋದಾ ಅಥವಾ ಸತ್ತುಹೋಗೋದಾ’ ಎಂದು ಕೇಳಿದಾಗ, ‘ಸತ್ತುಹೋದರೆ ಒಳ್ಳೆಯದು’ ಎಂದು ಸಚಿವರು ಅಪ್ಪಣೆ ಕೊಡಿಸಿದ್ದಾರೆ. ‘ಸತ್ತು ಹೋಗೋದಾ ಎಂದು ಕೇಳಿದವರಿಗೆ ಏನನ್ನುವುದು? ಬದುಕು ಎಂದು ಹೇಳುವಷ್ಟು ದೊಡ್ಡ ಮನಸ್ಸು ನನಗಿಲ್ಲ’ ಎನ್ನುವ ಸಚಿವರ ಮಾತನ್ನು ಗಮನಿಸಿದರೆ, ಉಮೇದಿನಲ್ಲಿ ಅವರು ಬಾಯಿ ತಪ್ಪಿ ಮಾತನಾಡಿಲ್ಲ ಎನ್ನುವುದು ಸ್ಪಷ್ಟವಾಗುತ್ತದೆ. ಜನಸಾಮಾನ್ಯರ ಹಿತದ ಬಗ್ಗೆ ಕಿಂಚಿತ್ತೂ ಕಾಳಜಿಯಿಲ್ಲದ ವ್ಯಕ್ತಿಯೊಬ್ಬ ಹೀಗೆ ಧಿಮಾಕಿನಿಂದ ಉತ್ತರಿಸಲಿಕ್ಕೆ ಸಾಧ್ಯ. ರಾಜ್ಯದ ಪ್ರತಿಯೊಬ್ಬರೂ ಇದೇ ರೀತಿ ಕೇಳಿದರೆ ಎಷ್ಟು ಮಂದಿಗೆ ಉತ್ತರ ಕೊಡುವುದು ಎಂದು ಸಚಿವರು ತಮ್ಮ ಮಾತನ್ನು ಸಮರ್ಥಿಸಿಕೊಂಡಿದ್ದಾರೆ.



ಅಧಿಕಾರವು ಜನರ ಸೇವೆಗೆ ಬಳಕೆಯಾಗಬೇಕೇ ಹೊರತು ಅವರ ಮೇಲೆ ದಬ್ಬಾಳಿಕೆ ನಡೆಸಲು ಅಲ್ಲ ಎನ್ನುವುದನ್ನು ಸರ್ಕಾರದ ಪ್ರತಿನಿಧಿಗಳು ಅರ್ಥ ಮಾಡಿಕೊಳ್ಳಬೇಕು

ನಾಗರಿಕರ ಪ್ರಶ್ನೆಗಳಿಗೆ ಉತ್ತರಿಸುವುದು ಕಷ್ಟ ಎನ್ನುವುದಾದರೆ, ಸಚಿವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ ಮನೆಯಲ್ಲಿ ಆರಾಮಾಗಿ ಇರುವುದಕ್ಕೆ ಅವಕಾಶವಿದೆ. ಸಾರ್ವಜನಿಕ ಜೀವನದಲ್ಲಿ ಇರುವವರಿಗೆ ಇರಬೇಕಾದ ಮೊದಲ ಅರ್ಹತೆ, ಜನರ ಅಹವಾಲನ್ನು ಸಾವಧಾನದಿಂದ ಕೇಳಿಸಿಕೊಳ್ಳುವುದು. ದಿನದ ಯಾವುದೇ ವೇಳೆಯಲ್ಲಿ ಹಾಗೂ ಎಂತಹುದೇ ಸಂದರ್ಭದಲ್ಲಿ ಜನರ ಸಮಸ್ಯೆಗಳಿಗೆ ಪ್ರಜಾಪ್ರತಿನಿಧಿ ಓಗೊಡುವಂತಿರಬೇಕು. ಆಡಳಿತಾತ್ಮಕ ನಿರ್ಧಾರಗಳನ್ನು ಕೈಗೊಳ್ಳುವ ಸಚಿವ ಸ್ಥಾನದಲ್ಲಿ ಇರುವವರಂತೂ ಮತ್ತಷ್ಟು ಸಂವೇದನಾಶೀಲರೂ ಜನಪರ ಕಾಳಜಿಯುಳ್ಳವರೂ ಆಗಿರಬೇಕು. ಅಂಥ ತಾಳ್ಮೆ ಇಲ್ಲದವರು ಸಚಿವ ಸ್ಥಾನದಂತಹ ಜವಾಬ್ದಾರಿಗಳನ್ನು ವಹಿಸಿಕೊಳ್ಳಬಾರದು.

ಕೊರೊನಾ ಬಿಕ್ಕಟ್ಟಿನ ಸಂದರ್ಭದಲ್ಲಿ ಓರ್ವ ಜನಪ್ರತಿನಿಧಿಯ ಕಾರ್ಯನಿರ್ವಹಣೆ ಹೇಗಿರಬಾರದು ಎನ್ನುವುದಕ್ಕೆ ಉಮೇಶ ಕತ್ತಿ ಉದಾಹರಣೆಯಾಗಿದ್ದರೆ, ಹೇಗಿರಬೇಕು ಎನ್ನುವುದಕ್ಕೆ ಕಲಬುರ್ಗಿ ಸಂಸದ ಡಾ. ಉಮೇಶ ಜಾಧವ ಮಾದರಿಯಾಗಿದ್ದಾರೆ. ಜಿಲ್ಲೆಯಲ್ಲಿ ಕೋವಿಡ್ ರೋಗಿಗಳಿಗೆ ರೆಮ್‌ಡಿಸಿವಿರ್ ಚುಚ್ಚುಮದ್ದಿನ ತೀವ್ರ ಕೊರತೆಯಿರುವುದು ಗಮನಕ್ಕೆ ಬಂದಾಗ, ಔಷಧಿ ಪೂರೈಕೆಗೆ ಅವರು ವಹಿಸಿರುವ ಶ್ರಮ ಶ್ಲಾಘನೀಯ. ತಮ್ಮಲ್ಲಿಗೆ ಬಂದ ಅಹವಾಲನ್ನು ಮತ್ತೊಬ್ಬ ಅಧಿಕಾರಿಗೆ ಹೊತ್ತುಹಾಕುವ ಕೆಲಸವನ್ನು ಜಾಧವ ಅವರು ಮಾಡಬಹುದಿತ್ತು. ಅದರ ಬದಲಿಗೆ, ಖುದ್ದಾಗಿ ಬೆಂಗಳೂರಿನ ಔಷಧ ನಿಯಂತ್ರಕರ ಕೊಠಡಿಗೆ ನಸುಕಿನ 1 ಗಂಟೆಯಲ್ಲಿ ತಲುಪಿ, ಅಗತ್ಯವಿದ್ದ ಚುಚ್ಚುಮದ್ದುಗಳನ್ನು ಅಧಿಕಾರಿಗಳಿಂದ ಪಡೆದದ್ದು ಮಾತ್ರವಲ್ಲದೆ, ಆ ಔಷಧಿಯನ್ನು ವಿಮಾನದ ಮೂಲಕ ಕಲಬುರ್ಗಿಗೆ ಕೊಂಡೊಯ್ದಿದ್ದಾರೆ. ಸಂಸದರ ಈ ನಡವಳಿಕೆ ಎಲ್ಲ ಜನಪ್ರತಿನಿಧಿಗಳಿಗೂ ಅನುಕರಣೀಯ. ಅಧಿಕಾರಿಗಳಿಗೆ ಹೇಳಿ ಕೆಲಸ ಮಾಡಿಸುವುದರ ಜೊತೆಗೆ, ಸ್ವಯಂ ಜನಪ್ರತಿನಿಧಿಗಳೂ ಜನರ ಸಮಸ್ಯೆಗಳಿಗೆ ಖುದ್ದು ಸ್ಪಂದಿಸಿದಾಗ ಆಡಳಿತ ಯಂತ್ರ ಚುರುಕಾಗುತ್ತದೆ ಹಾಗೂ ಜನರಿಗೂ ತಾವು ಆರಿಸಿದ ಪ್ರತಿನಿಧಿಗಳು ಕಷ್ಟ ಕಾಲದಲ್ಲಿ ತಮ್ಮೊಂದಿಗಿರುತ್ತಾರೆ ಎನ್ನುವ ಭಾವನೆ ಉಂಟಾಗುತ್ತದೆ. ಕೊರೊನಾ ಸೋಂಕು ಜನಸಾಮಾನ್ಯರ ನೆಮ್ಮದಿಯನ್ನು ಕಸಿದುಕೊಂಡಿರುವ ಸಂದರ್ಭದಲ್ಲಿ, ಸರ್ಕಾರವನ್ನು ಪ್ರತಿನಿಧಿಸುವವರು ಜನರಿಗೆ ಧೈರ್ಯ ತುಂಬುವ ಮಾತುಗಳನ್ನಾಡುವುದು ಅಗತ್ಯ. ಬಿಕ್ಕಟ್ಟಿನ ಸಂದರ್ಭದಲ್ಲಿ ಸಣ್ಣದೊಂದು ಸಾಂತ್ವನದ ಮಾತು ಜನಸಾಮಾನ್ಯರಲ್ಲಿ ಆತ್ಮವಿಶ್ವಾಸ ತುಂಬುತ್ತದೆ. ದುರದೃಷ್ಟವಶಾತ್, ಇಂಥ ಮಾನವೀಯ ನಡವಳಿಕೆ ನಮ್ಮ ಶಾಸಕರು ಮತ್ತು ಸಚಿವರಲ್ಲಿ ಕಡಿಮೆಯಾಗುತ್ತಿದೆ. ಅಧಿಕಾರವು ಜನರ ಸೇವೆಗೆ ಬಳಕೆಯಾಗಬೇಕೇ ಹೊರತು ಅವರ ಮೇಲೆ ದಬ್ಬಾಳಿಕೆ ನಡೆಸಲು ಅಲ್ಲ ಎನ್ನುವುದನ್ನು ಸರ್ಕಾರದ ಪ್ರತಿನಿಧಿಗಳು ಅರ್ಥ ಮಾಡಿಕೊಳ್ಳಬೇಕು. ಈ ಸೂಕ್ಷ್ಮವನ್ನು ಅರ್ಥ ಮಾಡಿಕೊಳ್ಳದೆ ಯಾರಾದರೂ ಉದ್ಧಟತನದಿಂದ ವರ್ತಿಸಿದರೆ, ಅವರ ಕಿವಿ ಹಿಂಡುವ ಕೆಲಸವನ್ನು ಮುಖ್ಯಮಂತ್ರಿ ಮಾಡಬೇಕು. ಹೊಣೆಗೇಡಿತನದಿಂದ ಮಾತನಾಡುವುದು, ಪ್ರತಿಭಟನೆ ವ್ಯಕ್ತವಾದ ನಂತರ ಕ್ಷಮೆ, ವಿಷಾದ ವ್ಯಕ್ತಪಡಿಸುವುದು ಸಾಮಾನ್ಯ ಎನ್ನುವಂತಾಗುವುದು ಜನಪರ ಆಡಳಿತದ ಲಕ್ಷಣವಲ್ಲ.

ನ್ಯಾಯಾಲಯದ ಆದೇಶಗಳನ್ನು ಮೌಲ್ಯಮಾಪನಕ್ಕೆ ಒಳಪಡಿಸುವ ಸಾರ್ವಜನಿಕ ವ್ಯವಸ್ಥೆ ಬೇಕು

ನ್ಯಾಯಾಂಗ ಸುಧಾರಣೆ: ಕೆಲವು ಟಿಪ್ಪಣಿ



ವಿಶ್ಲೇಷಣೆ

ಕೆ.ವಿ.ಧನಂಜಯ

ಈಚೆಗೆ ಅಪರೂಪದ ಸಂದರ್ಭವೊಂದರಲ್ಲಿ ಕರ್ನಾಟಕ ವಿಧಾನಸಭೆಯ ಸದಸ್ಯರು ಉನ್ನತ ನ್ಯಾಯಾಂಗದ ಕೆಲವರ ವಿರುದ್ಧ, ಭ್ರಷ್ಟಾಚಾರ ಸೇರಿದಂತೆ ಹಲವು ವಿಚಾರಗಳನ್ನು ಇಟ್ಟುಕೊಂಡು ಟೀಕೆ ಮಾಡಿದರು. ನ್ಯಾಯಾಂಗದಲ್ಲಿನ ಭ್ರಷ್ಟಾಚಾರಕ್ಕೆ ಸಂಬಂಧಿಸಿದ ಚರ್ಚೆ, ಸಂವಾದ ಮಾತ್ರದಿಂದ ಸಾರ್ವಜನಿಕರಿಗೆ ಯಾವ ಲಾಭವೂ ಇಲ್ಲ. ನ್ಯಾಯಾಂಗದಲ್ಲಿ ಸುಧಾರಣೆ ತರಲು, ಭ್ರಷ್ಟಾಚಾರ ಹತ್ತಿಕ್ಕಲು ಇನ್ನೂ ಹೆಚ್ಚಿನ ಕ್ರಮಗಳು ಬೇಕು. ಸಂಸತ್ತು, ಕರ್ನಾಟಕದ ವಿಧಾನಸಭೆ ಅಂತಹ ಕಾನೂನು ರೂಪಿಸಬೇಕು.

‘ಭ್ರಷ್ಟಾಚಾರ ತಡೆ ಕಾಯ್ದೆ- 1988’ರ ವ್ಯಾಖ್ಯಾನದ ಪ್ರಕಾರ, ನ್ಯಾಯಾಧೀಶರು ‘ಸಾರ್ವಜನಿಕ ಸೇವಕರು’. ಇನ್ನಿತರ ಸಾರ್ವಜನಿಕ ಸೇವಕರಂತೆ ನ್ಯಾಯಾಧೀಶರು ಅಧಿಕಾರಾವಧಿಯಲ್ಲಿ ತೃಪ್ತಿಕರವಾಗಿ ಲೆಕ್ಕ ನೀಡಲಾಗದಷ್ಟು ಆಸ್ತಿ ಸಂಪಾದಿಸಿದಾಗ, ಅದು ‘ಭ್ರಷ್ಟಾಚಾರ’ ಎಂದು ಪರಿಗಣಿತವಾಗುತ್ತದೆ. ಅವರಿಗೆ ಗರಿಷ್ಠ ಏಳು ವರ್ಷಗಳ ಅವಧಿಗೆ ಜೈಲು ಶಿಕ್ಷೆ ವಿಧಿಸಬಹುದು. ಉನ್ನತ ನ್ಯಾಯಾಂಗದ ನ್ಯಾಯಮೂರ್ತಿಯೊಬ್ಬರು ಈ ದೇಶದಲ್ಲಿ ಭ್ರಷ್ಟಾಚಾರದ ಆರೋಪಕ್ಕೆ ಗುರಿಯಾಗಿದ್ದು, ತನಿಖೆ ಎದುರಿಸಿದ್ದು ಯಾವಾಗ ನಡೆದಿದೆ?! ಅಂತಹ ಪ್ರಕರಣಗಳು ನಮ್ಮ ದೇಶದಲ್ಲಿ ಆಗುವುದು ತೀರಾ ಅಪರೂಪ.

ಸಾರ್ವಜನಿಕ ಸೇವಕನನ್ನು ಲಂಚ ತೆಗೆದುಕೊಳ್ಳುವ ಹೊತ್ತಿನಲ್ಲಿಯೇ ಹಿಡಿಯುವುದು ಬಹಳ ಕಷ್ಟವೆಂದು ಜಗತ್ತಿನ ಹಲವು ದೇಶಗಳ ಕಾನೂನುಗಳು ಗುರುತಿಸಿವೆ. ಅದೇ ಮಾತನ್ನು, ಭಾರತದ ಭ್ರಷ್ಟಾಚಾರ ವಿರೋಧಿ ಕಾನೂನು ಕೂಡ ಗುರುತಿಸಿದೆ. ಹಾಗಾಗಿಯೇ, ವ್ಯಕ್ತಿಯೊಬ್ಬ ಭ್ರಷ್ಟನೆಂದು ಆತನ ಅಥವಾ ಆತನ ಕುಟುಂಬದ ಸದಸ್ಯರ ಸಂಪತ್ತಿನಲ್ಲಿ ವಿವರಣೆಗೆ ಸಿಲುಕದಷ್ಟು ಹೆಚ್ಚಳವಾಗಿದ್ದನ್ನು ಗುರುತಿಸುವ ಮೂಲಕ ಹೇಳಬಹುದು ಎಂದು ಕಾನೂನು ಭಾವಿಸುತ್ತದೆ. ಆದರೆ, ನ್ಯಾಯಾಧೀಶರು ಸೇರಿದಂತೆ ಸಾರ್ವಜನಿಕ ಸೇವಕರು ತಮ್ಮ ಆಸ್ತಿಯನ್ನು ಕಾಲಕಾಲಕ್ಕೆ ಘೋಷಣೆ ಮಾಡಿಕೊಳ್ಳದೆ ಇದ್ದರೆ ಈ ಕಾನೂನು ಕೆಲಸಕ್ಕೆ ಬರುವುದಿಲ್ಲ.

ಕೆಲವು ವರ್ಷಗಳ ಹಿಂದೆ ಸಾರ್ವಜನಿಕರ ಒತ್ತಡದ ಪರಿಣಾಮವಾಗಿ ಸುಪ್ರೀಂ ಕೋರ್ಟ್ ಹಾಗೂ ಹೈಕೋರ್ಟ್‌ಗಳ ಹಲವು ನ್ಯಾಯಮೂರ್ತಿಗಳು ತಮ್ಮ ಆಸ್ತಿ ವಿವರವನ್ನು ಕೋರ್ಟ್ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದರು. ಆದರೆ, ಇಂದಿಗೂ ಕೆಲವು ನ್ಯಾಯಮೂರ್ತಿಗಳು ಆಸ್ತಿ ವಿವರ ಘೋಷಿಸುತ್ತಿಲ್ಲ. ನ್ಯಾಯಮೂರ್ತಿಗಳು ಹಾಗೂ ಅವರ ಕುಟುಂಬದ ಸದಸ್ಯರು ತಮ್ಮ ಆಸ್ತಿ ವಿವರವನ್ನು ಕಾಲಕಾಲಕ್ಕೆ ಘೋಷಿಸಬೇಕು ಎಂದು ಹೇಳುವ ಕಾನೂನೊಂದು ಬೇಕು.

ಸಾರ್ವಜನಿಕರ ಗಮನವನ್ನು ಹೆಚ್ಚಾಗಿ ಸೆಳೆಯದ ಇನ್ನೊಂದು ಅಂಶ ಇಲ್ಲಿದೆ. ಅದು, ನ್ಯಾಯಾಧೀಶರಿಗೆ ನೀಡುತ್ತಿರುವ ಕಡಿಮೆ ವೇತನ. ನಮ್ಮ ನ್ಯಾಯಾಂಗ ವ್ಯವಸ್ಥೆಯನ್ನು ಕಟ್ಟಿದ್ದು ಬ್ರಿಟಿಷರು. ಉನ್ನತ ನ್ಯಾಯಾಂಗದಲ್ಲಿನ ವೇತನ ಶ್ರೇಣಿಯು ಅತ್ಯಂತ ಪ್ರತಿಭಾನ್ವಿತರನ್ನು ಸೆಳೆಯುವ ಶಕ್ತಿ ಹೊಂದಿದೆ ಎಂಬ ನಂಬಿಕೆ ಇದೆ. 1950ರ ಜನವರಿ 26ರಂದು ದೇಶದ ಸಂವಿಧಾನ ಜಾರಿಗೆ ಬಂದಾಗ ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳ ಮಾಸಿಕ ವೇತನ ₹ 4,000 ಎಂದು, ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಯ (ಸಿಜೆಐ) ವೇತನ ₹ 5,000 ಎಂದು ನಿಗದಿಯಾಯಿತು. ಹೈಕೋರ್ಟ್ ನ್ಯಾಯಮೂರ್ತಿಗಳ ವೇತನ ₹ 3,500 (ಮುಖ್ಯ ನ್ಯಾಯಮೂರ್ತಿಗಳದ್ದು ₹ 4,000) ಎಂದೂ ನಿಗದಿಯಾಯಿತು. 2015ರಲ್ಲಿ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಿಗೆ ₹ 90 ಸಾವಿರ (ಸಿಜೆಐಗೆ ₹ 1 ಲಕ್ಷ), ಹೈಕೋರ್ಟ್ ನ್ಯಾಯಮೂರ್ತಿಗಳಿಗೆ ₹ 80 ಸಾವಿರ (ಸಿಜೆಗೆ ₹ 90 ಸಾವಿರ) ವೇತನ ಇತ್ತು. 2016ರ ನಂತರ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಿಗೆ 2.5 ಲಕ್ಷ (ಸಿಜೆಐಗೆ ₹ 2.8 ಲಕ್ಷ), ಹೈಕೋರ್ಟ್ ನ್ಯಾಯಮೂರ್ತಿಗಳಿಗೆ ₹ 2.25 ಲಕ್ಷ (ಸಿಜೆಗೆ ₹ 2.5 ಲಕ್ಷ) ವೇತನ ಇದೆ.

ನಾವು ನಮ್ಮ ನ್ಯಾಯಾಂಗ ಅಧಿಕಾರಿಗಳ ವೇತನವನ್ನು ಭಾರಿ ಪ್ರಮಾಣದಲ್ಲಿ ಹೆಚ್ಚಿಸಬೇಕು. ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಿಗೆ ಮಾಸಿಕ ₹ 15 ಲಕ್ಷ, ಹೈಕೋರ್ಟ್ ನ್ಯಾಯಮೂರ್ತಿಗಳಿಗೆ ₹ 10 ಲಕ್ಷ, ಇತರ ಎಲ್ಲ ನ್ಯಾಯಾಧೀಶರಿಗೆ, ನ್ಯಾಯಮಂಡಳಿಗಳ ಸದಸ್ಯರಿಗೆ ₹ 5 ಲಕ್ಷ ವೇತನ ನಿಗದಿ ಮಾಡಬಹುದು ಎಂಬುದು ನನ್ನ ವೈಯಕ್ತಿಕ ಅಭಿಪ್ರಾಯ.

ಜಿಲ್ಲಾ ನ್ಯಾಯಾಲಯಗಳು ಹಾಗೂ ರಾಜ್ಯ ಮಟ್ಟದ ನ್ಯಾಯಮಂಡಳಿಗಳ ನ್ಯಾಯಾಧೀಶರಿಗೆ ರಾಜ್ಯಗಳ ಶಾಸನಸಭೆಗಳು ವೇತನ ನಿಗದಿ ಮಾಡಬಹುದು. ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳಿಗೆ, ಕೇಂದ್ರ ನ್ಯಾಯಮಂಡಳಿಗಳ ಸದಸ್ಯರಿಗೆ ಸಂಸತ್ತು ವೇತನ ನಿಗದಿ ಮಾಡಬಹುದು. ಕರ್ನಾಟಕ ಸರ್ಕಾರವು ಜಾತಿ ಮಠಗಳಿಗೆ ಪ್ರತೀ ವರ್ಷವೂ ಕೋಟ್ಯಂತರ ರೂಪಾಯಿ ನೀಡುತ್ತಿದೆ. ನ್ಯಾಯಾಂಗ ಅಧಿಕಾರಿಗಳ ವೇತನವನ್ನು ಹಲವು ಪಟ್ಟು ಹೆಚ್ಚಿಸುವುದರಿಂದ ರಾಜ್ಯ ಅಥವಾ ಕೇಂದ್ರದ ಹಣಕಾಸಿನ ಸ್ಥಿತಿ ಮೇಲೆ ನಕಾರಾತ್ಮಕ ಪರಿಣಾಮ ಉಂಟಾಗುತ್ತದೆ ಎಂದು ಯಾರೂ ಹೇಳಲಿಕ್ಕಿಲ್ಲ.

ನ್ಯಾಯಾಲಯ ನೀಡುವ ಆದೇಶವು ಸರಿ ಆಗಬಹುದು, ಸರಿ ಆಗದೆಯೂ ಇರಬಹುದು.



ಆದರೆ ಆ ಆದೇಶವನ್ನು ಪಾಲಿಸಬೇಕಾಗುತ್ತದೆ. ನಮ್ಮ ಉನ್ನತ ನ್ಯಾಯಾಲಯಗಳು ನೀಡುವ ಆದೇಶಗಳನ್ನು ಕಾಲಕಾಲಕ್ಕೆ ಮೌಲ್ಯಮಾಪನಕ್ಕೆ ಒಳಪಡಿಸುವ ಬಲಿಷ್ಠ ಸಾರ್ವಜನಿಕ ವ್ಯವಸ್ಥೆಯೊಂದರ ಅಗತ್ಯ ನಮಗೆ ಇದೆ. ಅಕಾಡೆಮಿಕ್ ಪತ್ರಿಕೆಗಳು ಈ ಕೆಲಸವನ್ನು ಮಾಡಬಹುದು ಎಂಬ ನಿರೀಕ್ಷೆ ಹೊಂದಲು ಅಡ್ಡಿಯಿಲ್ಲ. ಆದರೆ, ಆ ಪತ್ರಿಕೆಗಳು ನ್ಯಾಯಶಾಸ್ತ್ರ ಪರಿಣತರಿಗೆ, ನಿವೃತ್ತ ನ್ಯಾಯಮೂರ್ತಿಗಳಿಗೆ ಗೌರವ ಸಂಭಾವನೆ ನೀಡಬೇಕು ಎಂದಾದರೆ ಸರ್ಕಾರದಿಂದ ಗಣನೀಯ ಪ್ರಮಾಣದ ನೆರವು ಬೇಕಾಗುತ್ತದೆ. ಆಗ ಈ ಹಿರಿಯರು ತಮ್ಮ ಸಮಯವನ್ನು ವ್ಯಯಿಸಿ, ಉನ್ನತ ನ್ಯಾಯಾಲಯಗಳು ನೀಡುವ ಆದೇಶಗಳು ಎಷ್ಟರಮಟ್ಟಿಗೆ ಸರಿ ಅಥವಾ ತಪ್ಪು ಎಂಬುದನ್ನು ಪರಿಶೀಲಿಸಬಹುದು.

ಹೈಕೋರ್ಟ್‌ಗಳ ಮೇಲ್ಮನವಿ ವಿಭಾಗಗಳು ಹಾಗೂ ಸುಪ್ರೀಂ ಕೋರ್ಟ್ ತಮ್ಮ ಆದೇಶ ನೀಡುವ ಮೊದಲು, ಆದೇಶ ಬರೆಯುವ ನ್ಯಾಯಮೂರ್ತಿಯು ಆದೇಶದ ಕರಡು ಪ್ರತಿಯನ್ನು ಇತರ ಎಲ್ಲ ನ್ಯಾಯಮೂರ್ತಿಗಳ ಪರಿಶೀಲನೆಗೆ ನೀಡಿ, ಅವರ ಅನಿಸಿಕೆಗಳನ್ನು ಪಡೆದುಕೊಳ್ಳಬೇಕು ಎಂಬ ಕಾನೂನು ನಮ್ಮಲ್ಲಿ ರೂಪುಗೊಳ್ಳಬೇಕು. ಕೆಲವು ದೇಶಗಳಲ್ಲಿ ಇಂತಹ ಆಚರಣೆ ಇದೆ. ನ್ಯಾಯಮೂರ್ತಿಗಳು ತಮ್ಮ ಜ್ಞಾನ ಹಾಗೂ ಅನುಭವವನ್ನು ಹಂಚಿಕೊಳ್ಳಲು ಇದು ನೆರವಾಗುತ್ತದೆ. ಬೇರೆ ಬೇರೆ ಆದೇಶಗಳ ನಡುವೆ ಭಿನ್ನ ಅಭಿಪ್ರಾಯಗಳು ವ್ಯಕ್ತವಾಗುವುದು ಕಡಿಮೆ ಆಗುತ್ತದೆ. ಸುಪ್ರೀಂ ಕೋರ್ಟ್ ಈ ದಿಸೆಯಲ್ಲಿ ಕ್ರಮ ಜರುಗಿಸಿದರೆ, ಸಾರ್ವಜನಿಕ ಮಹತ್ವದ ಕಾನೂನುಗಳ ವಿಚಾರದಲ್ಲಿ ಸುಪ್ರೀಂ ಕೋರ್ಟ್‌ನ ಬೇರೆ ಬೇರೆ ಪೀಠಗಳು ಮತ್ತೆ ಮತ್ತೆ ಭಿನ್ನ ಅಭಿಪ್ರಾಯ ನೀಡುವುದು ಬಹಳ ಕಡಿಮೆ ಆಗುತ್ತದೆ.

ನ್ಯಾಯಾಲಯದ ಕಲಾಪಗಳ ವಿಡಿಯೊ ಚಿತ್ರೀಕರಣ ಆಗಬೇಕು, ಅವುಗಳನ್ನು ಪ್ರಸಾರ ಮಾಡುವ ವ್ಯವಸ್ಥೆಯೂ ಇರಬೇಕು ಎಂದು ನಾನು ದಶಕದಿಂದ ಆಗ್ರಹಿಸುತ್ತ ಬಂದಿದ್ದೇನೆ. ಆದರೆ ಅನುಭವಕ್ಕೆ ದಕ್ಕುವ ಯಾವ ಪ್ರತಿಫಲವೂ ದೊರೆತಿಲ್ಲ. ಈ ರೀತಿಯ ವ್ಯವಸ್ಥೆ ಜಾರಿಗೆ ಬಂದರೆ ಹೆಚ್ಚಿನ ಪಾರದರ್ಶಕತೆ ಹಾಗೂ ಸಾರ್ವಜನಿಕ ಉತ್ತರದಾಯಿತ್ವ ಇರುತ್ತದೆ. ನಮ್ಮ ಉನ್ನತ ನ್ಯಾಯಾಲಯಗಳು ತಮ್ಮ ಕಲಾಪಗಳನ್ನು ಏಕೆ ಸಾರ್ವಜನಿಕವಾಗಿ ಪ್ರಸಾರ ಮಾಡುತ್ತಿಲ್ಲ? ಈ ಪ್ರಶ್ನೆಗೆ ಅರ್ಥಪೂರ್ಣ ಉತ್ತರ ಯಾರಲ್ಲಿಯೂ ಇರುವಂತೆ ಕಾಣುತ್ತಿಲ್ಲ.

ಮುಂಬರುವ ಇಪ್ಪತ್ತರಿಂದ ಮೂವತ್ತು ವರ್ಷಗಳಲ್ಲಿ ಕೃತಕ ಬುದ್ಧಿಮತ್ತೆಯು ನ್ಯಾಯಾಂಗ ಸೇವೆಗಳಲ್ಲಿ ಪರಿವರ್ತನೆ ತರಲಿದೆ. ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ಓದಲು, ಸಂಬಂಧಿಸಿದ ಕಾನೂನುಗಳ ಅಧ್ಯಯನಕ್ಕೆ, ನ್ಯಾಯಾಲಯದಲ್ಲಿ ನಡೆದ ವಾದ-ಪ್ರತಿವಾದಗಳನ್ನು ದಾಖಲಿಸಿಕೊಳ್ಳಲು, ಕರಡು ಆದೇಶ ಸಿದ್ಧಪಡಿಸಲು ಕಂಪ್ಯೂಟರ್‌ಗಳು ನ್ಯಾಯಮೂರ್ತಿಗಳಿಗೆ ನೆರವಾಗಲಿವೆ. ಈಗಾಗಲೇ ಇರುವ ತಂತ್ರಜ್ಞಾನ ಕೂಡ ಆಶ್ಚರ್ಯ ಮೂಡಿಸುವಂತೆ ಇದೆ.

ಈಗ ವೃತ್ತಿಯಲ್ಲಿರುವ ಬಹುತೇಕ ವಕೀಲರಿಗೆ, ಇಪ್ಪತ್ತು ಅಥವಾ ಮೂವತ್ತು ವರ್ಷಗಳ ನಂತರವೂ ವೃತ್ತಿಯಲ್ಲಿ ಇರುತ್ತೇನೆ ಎನ್ನುವವರಿಗೆ, ಕಾನೂನಿಗೆ ಸಂಬಂಧಿಸಿದಂತೆ ಮಾಡಬೇಕಾದ ಯಾವ ಕೆಲಸವೂ ಇರುವುದಿಲ್ಲ. ಅಂಥದ್ದೊಂದು ಅನಿವಾರ್ಯ ಭವಿಷ್ಯಕ್ಕೂ ನಾವು ಸಿದ್ಧರಾಗಬೇಕಿದೆ.

ಲೇಖಕ: ಸುಪ್ರೀಂ ಕೋರ್ಟ್‌ನಲ್ಲಿ ವಕೀಲ

ಚುರುಮುರಿ



ಲಿಕ್ವಿಡ್ ಆಕ್ಸಿಜನ್!

● ಬಿ.ಎನ್.ಮಲ್ಲೇಶ್

ಬೆಳಬೆಳಿಗ್ಗೆ ಕೈಚೀಲ ಹಿಡ್ಕಂಡು ಪೇಟೆ ಬೀದೀಲಿ ಹೊರಟದ್ದ ತೆಪರೇಸಿನ ಕಂಡು ದುಬ್ಬೀರ ಚಪ್ಪಾಳೆ ತಟ್ಟಿ ಕರೆದ, ‘ಲೇ ತೆಪರ, ಏನೋ ಇದು ಆಶ್ಚರ್ಯ? ಇಷ್ಟು ಬೇಗ ಎದ್ದುಬಿಟ್ಟಿದೀಯ? ಕೈಯಲ್ಲಿ ಬ್ಯಾಗು ಬೇರೆ. ಏನ್ ತರೋಕೆ ಹೊರಟದೀಯ, ಹಾಲೋ ಆಲ್ಕೋಹಾಲೋ?’ ಎಂದ ನಗುತ್ತ.

‘ಏಯ್, ಹಾಲು, ತರಕಾರಿ ತರಾಕೆ ಹೊಂಟೀದಿನಿ ಕಣಲೆ. ಹತ್ತು ಗಂಟೆ ಒಳಗೆ ಮನಿ ಸೇರ್ಕಾಬೇಕಲ್ಲ...’

‘ತಿಂಡಿ ಆತಾ? ಬಾ ಚಾ ಕುಡಿಯಾಣ’ ದುಬ್ಬೀರ ಕರೆದ.

‘ಬ್ಯಾಡ ಕಣಲೆ, ತಿಂಡಿ ಆತು, ಇವತ್ತು ಬೆಳಿಗ್ಗೇನೇ ಪಮ್ಮಿ ಹತ್ರ ಬೈಸ್ಕಂಡೆ...’ ತೆಪರೇಸಿ ನಗುತ್ತ ಹೇಳಿದ.

‘ಬೈಸ್ಕಂಡೆ ಅಂತೀಯ, ಮತ್ತೆ ನಗ್ತೀಯಲ್ಲೋ?’

‘ಅದೂ ಹಂಗಲ್ಲ... ಪಮ್ಮಿ ಬೆಳಿಗ್ಗೆ ಉಪ್ಪಿಟ್ಟು ಕೊಟ್ಲು, ಒಂದು ಸ್ಪೂನು ಬಾಯಿಗೆ ಹಾಕ್ಕಂಡೆ. ರುಚಿನೇ ಇಲ್ಲ? ಓ ಇದು ಕೊರೊನಾ ಲಕ್ಷಣ ಅನ್ಕಂಡು ಗಾಬರಿಯಾಗಿ, ‘ಲೇ ಪಮ್ಮಿ ನಂಗೆ ಕೊರೊನಾ ಬಂದಂಗಿದೆ ಕಣೆ, ರುಚಿನೇ ಗೊತ್ತಾಗ್ತಿಲ್ಲ’ ಅಂದೆ. ಪಮ್ಮಿಗೂ ಗಾಬರಿ. ಅವಳೂ ಒಂಚೂರು ಉಪ್ಪಿಟ್ಟು ಬಾಯಿಗೆ ಹಾಕ್ಕಂಡು ನೋಡಿದ್ಲು, ತಕ್ಷಣ ‘ನಿಮ್ ತಲೆ, ನಾನು ಉಪ್ಪಿಟ್ಟಿಗೆ ಉಪ್ಪೇ ಹಾಕಿಲ್ಲ. ಕೊರೊನಾ ಅಂತೆ ಕೊರೊನಾ...’ ಅಂತ ನನ್ ಮೂತಿಗೆ ತಿವಿದ್ಲು ಕಣಲೆ...’

ದುಬ್ಬೀರನಿಗೆ ನಗು ತಡೆಯಲಾಗಲಿಲ್ಲ, ‘ಥೂ ನಿನ್ನ, ಅಷ್ಟೂ ಗೊತ್ತಾಗಲ್ಲೇನ್? ಹೋಗ್ಲಿ ಎಣ್ಣೆಗೆ ಏನ್ ವ್ಯವಸ್ಥೆ ಮಾಡ್ಕಂಡೆ?’

‘ಥೋ... ಅದೊಂದ್ ಕತೆ. ಮನೆಗೆ ವಿಸ್ಕಿ ತಗಂಡ್ ಹೋದ್ರೆ ಪಮ್ಮಿ ಬೈತಾಳೆ ಅಂತ ವಾಸನೆ ಇಲ್ಲದ ವೋಡ್ಕಾ ತಗಂಡ್ ಹೋದೆ...’

‘ಸರಿ, ಪಮ್ಮಕ್ಕ ಅದೇನು ಅಂತ ಕೇಳಲಿಲ್ವ?’

‘ಕೇಳಿದ್ಲು. ನಾನು ಇದು ಲಿಕ್ವಿಡ್ ಆಕ್ಸಿಜನ್ ಕಣೆ, ಕೊರೊನಾ ಬರಬಾರ್ದು ಅಂದ್ರೆ ಆಗಾಗ ತಗೋತಿರಬೇಕು ಅಂದೆ’.

‘ಹೌದಾ? ಆಮೇಲೆ?’

‘ಅದ್ಕೆ ಪಮ್ಮಿ ಅದನ್ನ ನೀವೊಬ್ರೇ ತಗಂಡ್ರೆ ಹೆಂಗೆ? ನಮಗೂ ಕೊಡಿ, ನಾವೂ ಬದುಕಬಾರ್ದಾ ಅನ್ನೋದಾ?’

ದುಬ್ಬೀರನಿಗೆ ಮತ್ತೂ ನಗು ತಡೆಯಲಾಗಲಿಲ್ಲ.

ದಿನದ ಟ್ವೀಟ್

ಮಂತ್ರಿಯಾಗಿದ್ದು ಯಾಕಾಗಿ?



ಜನಪ್ರತಿನಿಧಿಗಳ ಗುಣಗಳಲ್ಲಿ ಮೊದಲ ಸ್ಥಾನ ಕರುಣೆಗೆ. ಇದಿಲ್ಲದಿದ್ದರೆ ಅವರು ಜನಪ್ರತಿನಿಧಿಯಾಗಲು ಅನರ್ಹರು. ಅದರಲ್ಲೂ ಮಂತ್ರಿಯಾದವರಿಗೆ ಸಹನೆ, ಸಂಯಮವು ಕರುಣೆಯ ಜೊತೆಗೆ ಹೆಚ್ಚುವರಿಯಾಗಿ ಇರಲೇಬೇಕು. ಆದರೆ ಉಮೇಶ ಕತ್ತಿ ಅವರ ನಡವಳಿಕೆಯಲ್ಲಿ ಈ ಯಾವುದೇ ಗುಣಗಳು ಕಾಣಸಿಗುವುದಿಲ್ಲ. ‘ನೀನು ಸಾಯುವುದೇ ಒಳ್ಳೆಯದು’ ಎನ್ನಲು ಅವರು ಮಂತ್ರಿ ಆಗಬೇಕಿತ್ತೇ?

ರೋಹಿತ್ ಸಿಂಹ, ಎಂಜಿನಿಯರ್

25 ವರ್ಷಗಳ ಹಿಂದೆ

ಮಂಗಳವಾರ, 30-4-1996

● **17 ರಾಜ್ಯಗಳಲ್ಲಿ ಇಂದು ಪ್ರಚಾರ ಕಾರ್ಯ ಅಂತ್ಯ**

ನವದೆಹಲಿ, ಏ. 29 (ಪಿಟಿಐ, ಯುಎನ್‌ಐ)- ಎರಡನೇ ಹಂತದ ಲೋಕಸಭಾ ಚುನಾವಣೆಗೆ 17 ರಾಜ್ಯಗಳಲ್ಲಿ ರಂಗ ಸಜ್ಜಾಗಿದ್ದು, ನಾಳೆ ಸಂಜೆ ಬಹಿರಂಗ ಪ್ರಚಾರ ಕೊನೆಗೊಳ್ಳುವುದರಿಂದ ಇಂದು ವಿವಿಧ ರಾಜಕೀಯ ಪಕ್ಷಗಳ ನಾಯಕರು ಭರದಿಂದ ಪ್ರಚಾರ ನಡೆಸಿದರು. ಎರಡನೇ ಹಂತದಲ್ಲಿ 204 ಲೋಕಸಭಾ ಸ್ಥಾನಗಳಿಗೆ ಮತ್ತು 223 ವಿಧಾನಸಭಾ ಕ್ಷೇತ್ರಗಳಿಗೆ ಮೇ 2ರಂದು ಮತದಾನ ನಡೆಯಲಿದೆ.

ಪ್ರಧಾನಿ ಪಿ.ವಿ.ನರಸಿಂಹ ರಾವ್, ಬಿಜೆಪಿ ನಾಯಕ ಅಟಲ್ ಬಿಹಾರಿ ವಾಜಪೇಯಿ, ಜನತಾದಳದ ನಾಯಕರಾದ ಬಿಜು ಪಟ್ನಾಯಕ್, ರಾಮ್ ವಿಲಾಸ್ ಪಾಸ್ವಾನ್, ಮೇನಕಾ ಗಾಂಧಿ, ಇಂದಿರಾ ಕಾಂಗ್ರೆಸ್ ಅಧ್ಯಕ್ಷ ಎನ್.ಡಿ.ತಿವಾರಿ, ಲೋಕಸಭಾ ಅಧ್ಯಕ್ಷ ಶಿವರಾಜ್ ಪಾಟೀಲ್, ಉಪಾಧ್ಯಕ್ಷ ಎಸ್.ಮಲ್ಲಿಕಾರ್ಜುನಯ್ಯ, ಕೇಂದ್ರದ ಮಾಜಿ ಸಚಿವ ಕುಮಾರಮಂಗಳಂ ಅವರ ರಾಜಕೀಯ ಭವಿಷ್ಯ ಈ ಚುನಾವಣೆಯಲ್ಲಿ ನಿರ್ಧಾರವಾಗಲಿದೆ.

● **ಮತದಾರರ ಹೆಸರು ನಾಪತ್ತೆ ವಿವಾದ: ಶೇಷನ್ ಗಮನಕ್ಕೆ**

ಬೆಂಗಳೂರು, ಏ. 29- ‘ಬೆಂಗಳೂರು ವ್ಯಾಪ್ತಿಯ ಲೋಕಸಭಾ ಕ್ಷೇತ್ರಗಳ ಮತದಾರರ ಪಟ್ಟಿಯಲ್ಲಿ ಮತದಾರರ ಹೆಸರುಗಳು ಬಿಟ್ಟು ಹೋಗಿರುವ ಹಿನ್ನೆಲೆಯಲ್ಲಿ ಮರು ಮತದಾನ ಇಲ್ಲ. ಸದ್ಯದ ಪರಿಸ್ಥಿತಿಯಲ್ಲಿ ಅದಕ್ಕೆ ಪರಿಹಾರ ಏನೂ ಇಲ್ಲ. ಈಗಿನ ಮತದಾರರ ಪಟ್ಟಿಯೇ ಮತದಾರರ ಪಟ್ಟಿ’ ಎಂದು ಮುಖ್ಯ ಚುನಾವಣಾ ಕಮಿಷನರ್ ಟಿ.ಎನ್.ಶೇಷನ್ ಅವರು ಇಂದು ಇಲ್ಲಿ ಸ್ಪಷ್ಟಪಡಿಸಿದರು.

‘ದೇಶದ ಯಾವುದೇ ಕ್ಷೇತ್ರದಲ್ಲಿ ಮುಂದೆ ಈ ರೀತಿ ಆಗದಂತೆ ಒಂದು ಹೊಸ ವಿಧಾನವನ್ನು ಕಾರ್ಯರೂಪಕ್ಕೆ ತರುವ ಬಗ್ಗೆ ಆಲೋಚಿಸಲಾಗುತ್ತಿದೆ’ ಎಂದರು.

50 ವರ್ಷಗಳ ಹಿಂದೆ

ಶುಕ್ರವಾರ, 30-4-1971

● **ಶೀಘ್ರವೇ ಅಭಿವೃದ್ಧಿ ದಳ ಅಸ್ತಿತ್ವಕ್ಕೆ**

ಬೆಂಗಳೂರು, ಏ. 29- ಅಮೆರಿಕದ ‘ಶಾಂತಿ ದಳ’ದ ಮಾದರಿಯಲ್ಲಿ ರಾಜ್ಯದಲ್ಲಿ ಅಭಿವೃದ್ಧಿ ದಳ ಸ್ಥಾಪಿಸಬೇಕೆಂಬ ಯುವಜನ ಇಲಾಖೆಯ ಯೋಜನೆಯು ಅಂತಿಮ ಸ್ವರೂಪ ತಳೆಯುತ್ತಿದೆ.

ವಿಶೇಷ ಯೋಜನೆಗಳನ್ನು ನೋಡಿಕೊಳ್ಳಲು ಸುಮಾರು 150 ಸ್ವಯಂ ಸೇವಕರಿರುವ ದಳವನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ದಳಕ್ಕೆ ಸೇರಲು ವಿದ್ಯಾವಂತ ಯುವಜನರಿಂದ ಹೆಚ್ಚು ಆಸಕ್ತಿ ಪ್ರಕಟವಾಗುತ್ತಿದೆ. ಸುಮಾರು 500 ಮಂದಿ ಅರ್ಜಿ ಹಾಕಿದ್ದಾರೆ ಎಂದು ವರದಿಯಾಗಿದೆ.

● **ತ್ರಿಭಾಷಾ ಸೂತ್ರ ಜಾರಿಗೆ ತರಲು ರಾಜ್ಯಗಳಿಗೆ ರಾಷ್ಟ್ರಪತಿ ಮನವಿ**

ಮದರಾಸ್, ಏ. 29- ತ್ರಿಭಾಷಾ ಸೂತ್ರವನ್ನು ಒಪ್ಪಿಕೊಳ್ಳುವಂತೆ ಹಾಗೂ ಪರಿಣಾಮಕಾರಿಯಾಗಿ ಈ ಸೂತ್ರವನ್ನು ಕಾರ್ಯಗತ ಮಾಡುವಂತೆ ರಾಷ್ಟ್ರಪತಿ ಶ್ರೀ ವಿ.ವಿ.ಗಿರಿ ಅವರು ಇಂದು ಎಲ್ಲಾ ರಾಜ್ಯಗಳಿಗೂ ಮನವಿ ಮಾಡಿಕೊಂಡರು.

ಭಾಷೆ ಬಗ್ಗೆ ವಿವಾದಗಳನ್ನು ತೊಡೆದುಹಾಕಿ ಎಲ್ಲಾ ಭಾರತೀಯ ಭಾಷೆಗಳ ಅಭಿವೃದ್ಧಿಯ ರಚನಾತ್ಮಕ ಕಾರ್ಯಕ್ಕೆ ಹೆಚ್ಚು ಗಮನ ಹರಿಸುವಂತೆ ಅವರು ತಿಳಿಸಿದರು.

ಸಂಗತ

ಕೋವಿಡ್ ಪರಿಸ್ಥಿತಿ, ಕುಬ್ಲರ್ ಮನಃಸ್ಥಿತಿ

ರೋಗನಿರೋಧಕಗಳು ನಮ್ಮ ಮನದೊಳಗೆ ಹುಟ್ಟಿವೆ; ಹೀಗಾಗಿ, ಅಪಾಯ ಕಾಲ ಬುಡದಲ್ಲಿದ್ದರೂ ನಮ್ಮಲ್ಲಿ ಗಾಬರಿಯೇ ಕಾಣಿಸುತ್ತಿಲ್ಲ!

● ಡಾ. ಮುರಳೀಧರ ಕಿರಣಕೆರೆ

ಒಂದೆಡೆ, ರೂಪಾಂತರಿ ಕೊರೊನಾ ರೋಗಾಣುಗಳ ಅಂಕೆಗೆ ನಿಲುಕದ ಪ್ರಬಲ ದಾಳಿ, ಮತ್ತೊಂದೆಡೆ, ತತ್ಸಂಬಂಧದ ಘೋರ ಫಲಿತಾಂಶದ ಅರಿವಿದ್ದರೂ ಅತೀವ ನಿರ್ಲಕ್ಷ್ಯ. ಪರಿಣಾಮ, ಪರಿಸ್ಥಿತಿಯಿಂದು ತುಂಬಾ ಬಿಗಡಾಯಿಸಿದೆ. ಅತಿ ಕ್ಷಿಪ್ರವಾಗಿ ಎಲ್ಲೆಡೆ ಪಸರಿಸುತ್ತಾ ಸಾಮುದಾಯಿಕ ಆರೋಗ್ಯ ವ್ಯವಸ್ಥೆಯನ್ನೇ ಬುಡಮೇಲು ಮಾಡುತ್ತಿರುವ ಸಾಂಕ್ರಾಮಿಕವೊಂದರ ಕುರಿತಾಗಿ ಯಾವ ತೀವ್ರತೆಯಲ್ಲಿ ಭಯ ಇರಬೇಕಾಗಿತ್ತೋ ಅದು ಕಾಣಿಸುತ್ತಿಲ್ಲ.

ಭೀತಿಯಿದ್ದಿದ್ದರೆ ಒಂದಿಷ್ಟಾದರೂ ಶಿಸ್ತಿರುತ್ತಿತ್ತು. ಅಪಾಯದಿಂದ ರಕ್ಷಿಸಿಕೊಳ್ಳುವ ಮಾರ್ಗೋಪಾಯಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಒತ್ತಡವಿರುತ್ತಿತ್ತು. ಆದರೆ ಈಗ ಅವ್ಯಾವುವೂ ಆಗುತ್ತಿಲ್ಲ. ಸುತ್ತಮುತ್ತಲ ದುರಂತ ಘಟನೆಗಳು ಯಾವ ಸ್ಪಂದನೆಗಳನ್ನೂ ತಾರದ ರೀತಿಯಲ್ಲಿ ಮನಸ್ಸು ಜಡ್ಡುಗಟ್ಟಿದೆ. ವಿಶ್ವದಾದ್ಯಂತ ಮೂವತ್ತು ಲಕ್ಷಕ್ಕೂ ಅಧಿಕ ಮಂದಿ ಕೋವಿಡ್‌ಗೆ ಬಲಿಯಾಗಿರುವ ಅಂಕೆ ಸಂಖ್ಯೆಯೂ ಗಾಬರಿ ಮೂಡಿಸುತ್ತಿಲ್ಲ! ಹಲವರಲ್ಲಿ ಅದೇ ಅಶಿಸ್ತು, ಉಪೇಕ್ಷೆ, ಬೇಜವಾಬ್ದಾರಿ ವರ್ತನೆ ಎಗ್ಗಿಲ್ಲದೆ ಮುಂದುವರಿದಿದೆ.

ಕೊರೊನಾ ಪ್ರಾಯೋಜಿತ ಈ ದುಷ್ಕಾಲದಲ್ಲಿ ಮನೋವಿಜ್ಞಾನಕ್ಕೆ ಸಂಬಂಧಿಸಿದ ‘ಕುಬ್ಲರ್-ರಾಸ್ ಮಾದರಿ’ ತುಂಬಾ ಪ್ರಸ್ತುತವಾಗಿ ಕಾಣುತ್ತಿದೆ. ಈ ನಮೂನೆಯಲ್ಲಿನ ಐದನೆಯ ಹಂತದ ಮನಃಸ್ಥಿತಿ ನಿರ್ಮಾಣವೇ ಸದ್ಯದ ಸಂಕಟಗಳಿಗೆ ಮೂಲ. ಹೌದು, ಯಾವುದೇ ತರದ ವೇದನೆ, ದುಃಖದ ಘಟನೆಗಳನ್ನು ಮನಸ್ಸು ಆ ಕ್ಷಣದಲ್ಲಿ ಒಪ್ಪಿಕೊಳ್ಳುವುದಿಲ್ಲ. ವಾಸ್ತವಕ್ಕೆ ಹೊಂದಿಕೊಳ್ಳುವ ಮುನ್ನ ನಿರಾಕರಣೆ, ಕೋಪ, ಚೌಕಾಶಿ, ಖಿನ್ನತೆ ಮತ್ತು ಒಪ್ಪಿಕೊಳ್ಳುವಿಕೆ ಎಂಬ ಐದು ಹಂತಗಳನ್ನು ಹಾದು ಹೋಗುತ್ತದೆ ಎಂದು ಕುಬ್ಲರ್ ರಾಸ್ ಎಂಬ ಸ್ವಿಸ್- ಅಮೆರಿಕನ್ ಮನೋವೈದ್ಯೆ ಪ್ರತಿಪಾದಿಸಿದ್ದಾರೆ. ಆಕೆಯ ಪ್ರಸಿದ್ಧ ಪುಸ್ತಕ ‘ಆನ್ ಡೆತ್ ಆ್ಯಂಡ್ ಡೈಯಿಂಗ್’ನಲ್ಲಿ ಈ ಅಂಶಗಳು ವಿವರವಾಗಿ ಪ್ರಸ್ತಾಪಿತವಾಗಿವೆ.

ಸಾವಿನ ಸನಿಹದ ವ್ಯಥೆಯ ಮಜಲುಗಳ ಬಗ್ಗೆ ಕುಬ್ಲರ್ ಹೇಳಿದ್ದರೂ ಇದು ಆಘಾತ, ಅಪಘಾತ, ದುರಂತ, ಆಪ್ತರ ಅಗಲಿಕೆ, ರೋಗ- ರುಜಿನಗಳಂತಹ ಸನ್ನಿವೇಶಗಳಿಗೂ ಅನ್ವಯವಾಗುವಂತಿದೆ. ಹಾಗಂತ ಅವಘಡಗಳು ಎದುರಾದಾಗಲೆಲ್ಲಾ ಮನಸ್ಸು ಈ ಐದು ಹಂತಗಳನ್ನು ಕ್ರಮವಾಗಿ ಹಾದು ಹೋಗುತ್ತದೆ ಎಂದಲ್ಲ. ಸಾಮಾನ್ಯವಾಗಿ ಹೀಗೆ ನಡೆಯುತ್ತದೆಯಷ್ಟೆ. ಕೆಲವೊಮ್ಮೆ ಮುಂದಿನ ಹಂತಕ್ಕೆ ದಾಟಿದ ಮನಸ್ಸು ಮತ್ತೆ ಹಿಂದಿನ ಸ್ಥಿತಿಗೆ ಮರಳಬಹುದು. ಒಂದೆರಡು ಮಜಲುಗಳು ಕಾಣಿಸದಿರಲೂಬಹುದು. ಹಾಗೆಯೇ ವಿವಿಧ ಹಂತಗಳಿಂದ ಹೊರಬರಲು ನಿರ್ದಿಷ್ಟ ಸಮಯವೆಂಬುದಿಲ್ಲ. ದುಃಖದ ತೀವ್ರತೆ, ವಾತಾವರಣ, ವ್ಯಕ್ತಿಯ ಮನೋಬಲವನ್ನು ಅವಲಂಬಿಸಿ ಕೆಲವು ನಿಮಿಷಗಳಿಂದ ಹಲವು ವರ್ಷಗಳೂ ಆಗಬಹುದು!

ಕೊರೊನಾ ವಿಷಯದಲ್ಲಿ ವರ್ಷದ ಹಿಂದೆ ಆಗಿದ್ದೂ ಹೀಗೆಯೆ. ಈ ಪಿಡುಗು ನಮ್ಮ ದೇಶಕ್ಕೂ ಹರಡುತ್ತದೆ ಎಂಬುದನ್ನು ನಾವು ಮೊದಲು ನಿರಾಕರಿಸಿದೆವು. ದೂರದ ಚೀನಾದಲ್ಲಿರುವುದು ಇಲ್ಲಿಗೆ ಹೇಗೆ ತಾನೇ ಬರಲು ಸಾಧ್ಯ ಎಂಬ ಮನೋಭಾವ. ನೋಡನೋಡುತ್ತಿದ್ದಂತೆ ನಮ್ಮ ನಾಡಿಗೂ ಕಾಲಿಟ್ಟಾಗಲೆ ನಿಜವಾದ ಬಿಸಿ ತಟ್ಟಿದ್ದು. ಆಮೇಲದು ತಿರುಗಿದ್ದು ಆಕ್ರೋಶದತ್ತ.

ವಿದೇಶದಲ್ಲಿ ಇದ್ದವರನ್ನು ದೇಶದೊಳಕ್ಕೆ ಯಾಕೆ ಬಿಟ್ಟುಕೊಳ್ಳಬೇಕಿತ್ತು? ಲಾಕ್‌ಡೌನ್‌ನಿಂದ ಜೀವನ ನಿರ್ವಹಣೆಗೆ ತೊಂದರೆಯಾಗುತ್ತಿದೆ, ಆರ್ಥಿಕ ಸಂಕಷ್ಟ, ಅಗತ್ಯ ವಸ್ತುಗಳು ಸಿಗುತ್ತಿಲ್ಲ... ಸಿಟ್ಟು ಹಲವು ವಿಧಗಳಲ್ಲಿ ವ್ಯಕ್ತವಾಯಿತು. ದಿನಕಳೆದಂತೆ ಚಿತ್ತವು ಚೌಕಾಶಿಯ ಹಂತಕ್ಕೇರಿತ್ತು. ಮಾಸ್ಕ್ ಹಾಕೋಣ, ಹೊರಹೋಗುವುದನ್ನು ಕಡಿಮೆ ಮಾಡೋಣ, ಕಾರ್ಯಕ್ರಮಗಳು ಬೇಡ, ಹೇಗಾದರೂ ಈ ಮಹಾಸೋಂಕಿನಿಂದ ಬಚಾವಾದರೆ ಸಾಕು... ಹೀಗೆ ವಿವಿಧ ನಮೂನೆಯ ಹೊಂದಾಣಿಕೆಗಳ ಬೆನ್ನಲ್ಲೇ ಶೀತ-ಜ್ವರ ಬಂದರೂ ಸಾಕು ತಮಗೆ ಕೊರೊನಾ ಬಂತೆಂದು ಗಾಬರಿ ಬಿದ್ದರು. ಕೆಲವು ಸೋಂಕಿತರು ಖಿನ್ನತೆಗೆ ಜಾರಿ ಆತ್ಮಹತ್ಯೆಯ ದಾರಿ ಹಿಡಿದರು. ಇನ್ನು ಕೆಲವರು, ಮನೆಯ ಹೊಸಲು ದಾಟದೆ ಮಂಕಾದರು. ದಿನ ಸರಿಯುತ್ತಿದ್ದಂತೆ ಭಯ, ಖಿನ್ನತೆಯಿಂದ ಹೊರಬಂದು ವಾಸ್ತವವನ್ನು ಒಪ್ಪಿಕೊಂಡು ಕೊರೊನಾದೊಂದಿಗೆ ಬದುಕಲು ಅಣಿಯಾದರು.



ಕುಬ್ಲರ್-ರಾಸ್ ಮಾದರಿಯಂತೆ ನಿರಾಕರಣೆಯ ಹಂತದಿಂದ ಸಾಗಿಬಂದು ಪರಿಸ್ಥಿತಿಯನ್ನು ಒಪ್ಪಿಕೊಂಡು ತುಸು ಎಚ್ಚರಿಕೆಯಿಂದ ಜೀವನ ಮುನ್ನಡೆಸುತ್ತಿದ್ದಂತೆ ಒಂದನೇ ಅಲೆ ದುರ್ಬಲವಾಯಿತು. ಸಾಂಕ್ರಾಮಿಕದ ವಿರುದ್ಧ ಜಯಿಸಿದ ಸಂಭ್ರಮ ಎಲ್ಲೆಡೆ!

ಈಗ ಕೊರೊನಾದ ಎರಡನೇ ಹೆದ್ದೆರೆ ಪ್ರಬಲವಾಗಿ ಎರಗುತ್ತಿದೆ. ಸೋಂಕಿತರ ಸಂಖ್ಯೆ ಊಹೆಗೂ ನಿಲುಕದ ರೀತಿಯಲ್ಲಿ ಹಬ್ಬುತ್ತಿದೆ. ಆದರೆ ಐದನೆಯ ಮಜಲಿನಲ್ಲಿ ನೆಲೆನಿಂತ ಮನಸ್ಸು ಮುನ್ನೆಚ್ಚರಿಕೆಗಳನ್ನು ಮರೆತು ಪರಿಸ್ಥಿತಿಗೆ ಹೊಂದಿಕೊಂಡಿದೆ. ವೈರಾಣುಗಳನ್ನು ಹೆಡೆಮುರಿ ಕಟ್ಟಬೇಕಾದರೆ ಶರೀರದೊಳಗೆ ಪ್ರತಿಕಾಯಗಳು ಸೃಷ್ಟಿಯಾಗಬೇಕು. ಆದರೆ ಈಗ ರೋಗನಿರೋಧಕಗಳು ಹುಟ್ಟಿರುವುದು ಮನದೊಳಗೆ. ಹಾಗಾಗಿ ಅಪಾಯ ಕಾಲ ಬುಡದಲ್ಲಿದ್ದರೂ ಗಾಬರಿಯೇ ಕಾಣಿಸುತ್ತಿಲ್ಲ. ತಜ್ಞರು ಮತ್ತು ಸರ್ಕಾರವು ಪರಿಸ್ಥಿತಿಯ ಗಂಭೀರತೆಯ ಬಗ್ಗೆ ಎಷ್ಟೇ ಗಂಟಲು ಹರಿದುಕೊಂಡರೂ ಇದು ತಮಗಲ್ಲವೆಂಬಂತೆ ಬೇಕಾಬಿಟ್ಟಿ ನಡೆಯೇ ಕಾಣುತ್ತಿದೆ. ದಂಡ, ಶಿಕ್ಷೆಗೂ ಕ್ಯಾರೇ ಎನ್ನುತ್ತಿಲ್ಲ.

ಇಂತಹ ವರ್ತನೆಯಿದ್ದಾಗ ಕೊರೊನಾದಂತಹ ಸಾಂಕ್ರಾಮಿಕಗಳಿಗೆ ತಡೆ ಹಾಕುವುದು ಖಂಡಿತ ಅಸಾಧ್ಯ. ಎಲ್ಲಾ ಮುಂಜಾಗ್ರತೆಗಳನ್ನು ಒಳಗೊಂಡ ಕುಬ್ಲರ್‌ರ ಐದನೇ ಹಂತದ ಮನಃಸ್ಥಿತಿ ಮಾತ್ರ ಇಂದಿನ ಗಂಭೀರ ಪರಿಸ್ಥಿತಿಯಿಂದ ನಮ್ಮನ್ನು ಮೇಲೆತ್ತಲು ಸಾಧ್ಯ.

ವಾಚಕರ ವಾಣಿ

ದುಷ್ಕೃತ್ಯದ ಫಲ ಉಣ್ಣಲೇಬೇಕು

ಮಹಾರಾಷ್ಟ್ರದ ವಿದರ್ಭ ಪ್ರಾಂತ್ಯದ ಅರಣ್ಯದಲ್ಲಿ ಗರ್ಭಿಣಿ ಹುಲಿಯನ್ನು ಭೀಕರವಾಗಿ ಹತ್ಯೆ ಮಾಡಿರುವುದು (ಪ್ರ.ವಾ., ಏ. 28) ಅತ್ಯಂತ ಅಮಾನವೀಯ ಕೃತ್ಯ. ಹುಲಿಯ ಉಗುರುಗಳ ಸಲುವಾಗಿ ಮುಂದಿನ ಎರಡು ಕಾಲುಗಳ ಪಂಜವನ್ನು ಕತ್ತರಿಸಿ ಬೇಟೆಯಾಡಿರುವುದು ಕ್ರೂರ ಮನುಷ್ಯನ ದುರಾಸೆಗೆ ಹಿಡಿದ ಕನ್ನಡಿ. ಕಾಡುಪ್ರಾಣಿಗಳ ಜೀವಕ್ಕೆ ಬೆಲೆಯೇ ಇಲ್ಲವೆ? ಸರ್ಕಾರ ಇಂತಹ ದುಷ್ಕೃತ್ಯದ ವಿರುದ್ಧ ಕಠಿಣ ಕ್ರಮ ಕೈಗೊಳ್ಳದಿದ್ದರೆ ಮುಂದೊಂದು ದಿನ ಕಾಡು ನಾಶವಾಗಿ, ಕಾಡುಪ್ರಾಣಿಗಳು ಇಲ್ಲವಾಗಿ, ಆಹಾರ ಸರಪಳಿ ತುಂಡರಿಸಿ ಮಾನವನಿಗೇ ಕುತ್ತು ಬರುವ ದಿನಗಳು ದೂರವಿಲ್ಲ. ಈಗಾಗಲೇ ಅಂತಹ ದುಷ್ಕೃತ್ಯದ ಫಲವನ್ನು ಉಣ್ಣುತ್ತಿದ್ದರೂ ಅರಿತುಕೊಳ್ಳದೇ ಅಡ್ನಾಡಿಯಾಗುತ್ತಿದ್ದಾನೆ ಮಾನವ.

ಮಹಾಂತೇಶ್ ಬಿ. ನಿಟ್ಟೂರ್, ದಾವಣಗೆರೆ

ನಾಯಕರ ಹೆಸರು ತಿಳಿಸಬೇಕಿತ್ತು

‘ಗಡ್ಡಕ್ಕೆ ಬೆಂಕಿ ಬಿದ್ದಿದೆ, ಟೊಂಕ ಕಟ್ಟುವವರಿಲ್ಲ!’ ಎಂಬ ಲೇಖನದಲ್ಲಿ (ಪ್ರ.ವಾ., ಏ. 28) ರವೀಂದ್ರ ಭಟ್ಟ ಅವರು, ‘ನಮ್ಮ ಪ್ರಮುಖ ನಾಯಕರೊಬ್ಬರು ಚುನಾವಣಾ ಪ್ರಚಾರ ಸಭೆಯೊಂದರಲ್ಲಿ ಪಾಲ್ಗೊಂಡು, ಇಷ್ಟೊಂದು ಭಾರೀ ಸಂಖ್ಯೆಯಲ್ಲಿ ಜನ ಸೇರಿರುವುದನ್ನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದು ಖುಷಿಯಿಂದ ಹೇಳಿಕೊಂಡರು’ ಎಂದು ಬರೆದಿದ್ದಾರೆ. ಆ ಹೇಳಿಕೆ ಓದಿ, ಅಯ್ಯೋ, ನಾಯಕರಾದವರು ಹೀಗೂ ಇರುತ್ತಾರೆಯೇ ಎಂದು ಅಚ್ಚರಿಯಾಯಿತು, ದುಃಖವಾಯಿತು. ಮಹಾಮಾರಿಯ ಈ ಕಾಲದಲ್ಲಿ ಹಾಗೆಂದವರು ಯಾರು ಎಂದು ಲೇಖನವು ತಿಳಿಸಿಲ್ಲ.

ಹಾಗೆಂದವರು ಬಿಜೆಪಿ ಪಕ್ಷದವರಾಗಿರಲಿಕ್ಕಿಲ್ಲ, ಅಲ್ಲವೇ? ಒಂದು ವೇಳೆ ಅವರು ಆ ಪಕ್ಷದವರಾಗಿದ್ದಿದ್ದರೆ, ದೇಶದ ಮುತ್ಸದ್ದಿ- ಕಾವಲುಗಾರರಾಗಿರುವ ನಮ್ಮ ಪ್ರಧಾನಿ ನರೇಂದ್ರ ಮೋದಿಯವರು ಖಂಡಿತವಾಗಿಯೂ ಅವರಿಗೆ ಬಹಿರಂಗವಾಗಿ ಛೀಮಾರಿ ಹಾಕಿ ಶಿಕ್ಷಿಸುತ್ತಿದ್ದರು ಅಥವಾ ಹಾಗೆಂದವರು ಯಾವುದಾದರೂ ವಿರೋಧ ಪಕ್ಷದ ನಾಯಕರಾಗಿದ್ದಿದ್ದರೆ, ಮೋದಿಯವರು ಅವರ ಮೇಲೆ ದೇಶದ್ರೋಹದ ಮೊಕದ್ದಮೆಯನ್ನು ಹೊರಿಸುತ್ತಿದ್ದರು. ನಿಜಕ್ಕೂ ಅಂಥವರಿಗೆ ತಕ್ಕ ಶಿಕ್ಷೆ ಆಗಲೇಬೇಕು. ಲೇಖಕರು ಓದುಗರಿಗೆ ಆ ನಾಯಕರ ಹೆಸರನ್ನು ತಿಳಿಸಬೇಕಾಗಿತ್ತು.

ರಘುನಂದನ, ಬೆಂಗಳೂರು

ಪೊಲೀಸರಿಗೆ ಹೊರೆಯಾಗದಿರೋಣ

ಪ್ರಸಕ್ತ ಲಾಕ್‌ಡೌನ್ ಸಂದರ್ಭದಲ್ಲಿ ಸರ್ಕಾರವು ಕಠಿಣ ಮಾರ್ಗಸೂಚಿಗಳನ್ನು ಹೊರಡಿಸಿರುವುದು ಸರಿಯಷ್ಟೆ. ಈ ಮಾರ್ಗಸೂಚಿಗಳನ್ನು ಉಲ್ಲಂಘಿಸಿ ಬೇಕಾಬಿಟ್ಟಿಯಾಗಿ ತಿರುಗಾಡಿ ಪೊಲೀಸರಿಗೆ ತಾಪತ್ರಯ ನೀಡುವುದು ಸರಿಯಲ್ಲ. ನಮ್ಮ ಆರೋಗ್ಯಕ್ಕಾಗಿ ನಾವೇ ಸ್ವಯಂ ನಿರ್ಬಂಧಗಳನ್ನು ಹಾಕಿಕೊಂಡು ನಮ್ಮ ಬಗ್ಗೆ ನಾವೇ ಎಚ್ಚರ ವಹಿಸೋಣ.

ಪೊಲೀಸರು ಲಾಠಿ ಬೀಸುತ್ತಾರೆ ಎಂಬ ಕಾರಣಕ್ಕೆ ಹೆದರಿಕೆಯಿಂದ ಮಾರ್ಗಸೂಚಿ ಪಾಲಿಸುವುದು ಬೇಡ. ಕೊರೊನಾ ಸೋಂಕು ಹರಡುವಿಕೆ ತಡೆಗೆ ಅಗತ್ಯ ಎಂದು ಭಾವಿಸಿ ಅನುಸರಿಸೋಣ. ಈ ಮೂಲಕ ಲಾಕ್‌ಡೌನ್ ಅವಧಿಯನ್ನು ಸಾರ್ಥಕಗೊಳಿಸೋಣ. ನಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುವುದರ ಜೊತೆಗೆ ಇತರರ ಆರೋಗ್ಯವನ್ನೂ ಕಾಪಾಡುವ ಗಟ್ಟಿ ನಿರ್ಧಾರ ಮಾಡೋಣ.

ಮಹೇಶ್ ಸಿ.ಎಚ್., ಶಿವಮೊಗ್ಗ

ಆರೈಕೆ ಮಾಹಿತಿ ಪಡೆಯುವುದು ರೋಗಿಗಳ ಹಕ್ಕು

‘ಕೋವಿಡ್ ರೋಗಿಗಳಿಗೆ ಆಸ್ಪತ್ರೆಗಳಲ್ಲಿ ಯಾವ ರೀತಿಯ ಚಿಕಿತ್ಸೆ ನೀಡುತ್ತಿದ್ದಾರೆ ಎಂಬುದು ಸಂಬಂಧಿಕರಿಗೆ ತಿಳಿಯುತ್ತಿಲ್ಲ. ರೋಗಿಯ ಚಿಕಿತ್ಸೆಯ ಬಗ್ಗೆ ಪಾರದರ್ಶಕ ವ್ಯವಸ್ಥೆ ಆಗಲಿ’ ಎಂದು ನಟ ಜಗ್ಗೇಶ್ ಅವರು ಟ್ವೀಟ್ ಮಾಡಿ, ಅದನ್ನು ಮುಖ್ಯಮಂತ್ರಿಗೆ ಟ್ಯಾಗ್ ಮಾಡಿದ್ದಾರೆ (ಪ್ರ.ವಾ., ಏ. 28). ಬಹುತೇಕ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಮಾಡುವ ಉಪಚಾರದ ಬಗ್ಗೆ ಅವರ ಸಂಬಂಧಿಕರನ್ನು ಕತ್ತಲೆಯಲ್ಲಿ ಇಡಲಾಗುತ್ತಿದೆ. ತನಗೆ ಬಂದಿರುವ ರೋಗ ಮತ್ತು ಅದನ್ನು ಗುಣಪಡಿಸಲು ಕೈಗೊಂಡ ಆರೈಕೆಯ ಬಗ್ಗೆ ತಿಳಿದುಕೊಳ್ಳುವುದು ರೋಗಿಯ ಹಕ್ಕಾಗಿರುತ್ತದೆ. ಕೆಲವೆಡೆ ಸಾಮಾನ್ಯ ರೋಗವನ್ನು ಮುಚ್ಚಿಟ್ಟು, ಕೋವಿಡ್ ಉಪಚಾರದ ನೆಪದಲ್ಲಿ ಸುಲಿಗೆ ಮಾಡುವುದು ಸಾಮಾನ್ಯ ಸಂಗತಿಯಾಗಿದೆ.

ಹಲವಾರು ಬಾರಿ ಆರೈಕೆಯ ಲೋಪದಿಂದಾಗಿ ವ್ಯತಿರಿಕ್ತ ಪರಿಣಾಮ ಮತ್ತು ಸಾವು ಸಂಭವಿಸಿದರೂ ಸಂಬಂಧಿಕರಿಗೆ ಲೋಪದ ಬಗ್ಗೆ ಮಾಹಿತಿಯೇ ಸಿಗುವುದಿಲ್ಲ. ಆದ್ದರಿಂದ ದಾಖಲಾದ ರೋಗಿಗೆ ಆಸ್ಪತ್ರೆಯವರು ತಾವು ನೀಡುತ್ತಿರುವ ಉಪಚಾರ, ಆರೈಕೆಯ ಮಾಹಿತಿಯನ್ನು ನೀಡಬೇಕು. ಆಸ್ಪತ್ರೆಯಿಂದ ಬಿಡುಗಡೆಯಾಗುವ ಸಂದರ್ಭದಲ್ಲಿ ನೀಡುವ ವರದಿಯಲ್ಲಿ ಎಲ್ಲ ಮಾಹಿತಿಗಳನ್ನೂ ರೋಗಿಗೆ ಅರ್ಥವಾಗುವಂತೆ ದಾಖಲಿಸಬೇಕು. ಅದೇ ರೀತಿ, ವೈದ್ಯರು ನೀಡುವ ಸಲಹಾಪತ್ರವು ಎಲ್ಲರೂ ಓದುವಂತಿರಬೇಕೇ ವಿನಾ ಮೆಡಿಕಲ್ ಶಾಪಿನವರಿಗೆ ಮಾತ್ರ ತಿಳಿಯುವಂತಲ್ಲ!

ಡಾ. ರುದ್ರೇಶ್ ಅದರಂಗಿ, ಬೆಂಗಳೂರು

ಮಕ್ಕಳ ಮೇಲೆ ದುಷ್ಪರಿಣಾಮ ಆಗದಿರಲಿ

ಕೊರೊನಾ ಎಂಬ ಪದ ಕೇಳುತ್ತಿದ್ದಂತೆಯೇ ಕೆಲವು ಮಕ್ಕಳಲ್ಲಿ ವಿಚಿತ್ರ ವರ್ತನೆ ಕಾಣಿಸಿಕೊಳ್ಳುತ್ತಿರುವ ಸುದ್ದಿ (ಪ್ರ.ವಾ., ಏ. 28) ಓದಿ ಮನಸ್ಸಿಗೆ ಆಘಾತವಾಯಿತು. ಕೋವಿಡ್ ಎಂಬುದು ಕೆಲವರಿಗೆ ದೈಹಿಕ ರೋಗವಾಗಿ ಪರಿಣಮಿಸಿದ್ದರೆ, ಇನ್ನು ಕೆಲವರಿಗೆ ಮಾನಸಿಕ ಕಾಯಿಲೆಯಾಗಿದೆ. ಅದರಲ್ಲಿಯೂ ಏನೂ ಅರಿಯದ ಮಕ್ಕಳ ಮನಸ್ಸಿನ ಮೇಲೆ ಈ ಕಾಯಿಲೆ ಪರಿಣಾಮ ಬೀರಿದೆ. ಇದಕ್ಕೆ ಕಾರಣ, ತಿಳಿವಳಿಕೆ ಇಲ್ಲದ ಪೋಷಕರು ಹಾಗೂ ಕೆಲ ಮಾಧ್ಯಮಗಳು.

ಕೊರೊನಾ ಎಂದರೆ ‘ಭಯ ಬೇಡ ಜಾಗ್ರತಿ ಇರಲಿ’ ಎಂಬ ಮಾತನ್ನು ಹಲವಾರು ಬಾರಿ ಕೇಳುತ್ತಲೇ ಇದ್ದರೂ, ಕೆಲ ಮಾಧ್ಯಮಗಳು ಕೊರೊನಾ ಎಂಬ ಪದವನ್ನು ಭಯ ಹುಟ್ಟಿಸುವ ರೀತಿಯಲ್ಲಿ ಅನೇಕ ಬಾರಿ ಹೇಳಿ ಹೇಳಿ ಜನರ ಮನಸ್ಸಿನಲ್ಲಷ್ಟೇ ಅಲ್ಲ ಮಕ್ಕಳ ಮನಸ್ಸಿನಲ್ಲೂ ಅದು ಅಚ್ಚಳಿಯುವಂತೆ ಮಾಡಿವೆ. ಮಕ್ಕಳ ಮುಂದೆ ದೃಶ್ಯ ಮಾಧ್ಯಮಗಳನ್ನು ವೀಕ್ಷಿಸುವುದನ್ನು ಪೋಷಕರು ನಿಲ್ಲಿಸಲಿ. ಬದಲಾಗಿ ಕೊರೊನಾದ ಬಗ್ಗೆ ಮಕ್ಕಳ ಜೊತೆ ಚರ್ಚಿಸಿ ಸೂಕ್ತ ಅರಿವು ಮೂಡಿಸಲಿ. ದೇಶದ ಭವಿಷ್ಯದ ಪ್ರಜೆಗಳೆನಿಸಿರುವ ಮಕ್ಕಳ ಮೇಲೆ ದುಷ್ಪರಿಣಾಮಗಳಾಗದಂತೆ ನೋಡಿಕೊಳ್ಳಬೇಕಾದ ಹೊಣೆಗಾರಿಕೆ ನಮ್ಮೆಲ್ಲರ ಮೇಲಿದೆ.

ಯೋಗೇಶ್ ವೈ.ಸಿ., ಮಂಡ್ಯ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.


ಜನಾದೇಶದ ಕುರಿತು ವಿವಿಧ ಮತಗಟ್ಟೆ ಸಮೀಕ್ಷೆಗಳು ಹೇಳುವುದೇನು?

ಪಶ್ಚಿಮ ಬಂಗಾಳ: ಬಿಜೆಪಿಗೆ ಗಟ್ಟಿ ನೆಲೆ

ನಗಣ್ಯವಾದ ಎಡರಂಗ – ಕಾಂಗ್ರೆಸ್

ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯಲ್ಲಿ ಮಮತಾ ಬ್ಯಾನರ್ಜಿ ನೇತೃತ್ವದ ಟಿಎಂಸಿ ಗೆಲ್ಲುತ್ತದೆ ಎಂದೇ ಬಹುತೇಕ ಎಲ್ಲಾ ಮತದಾನೋತ್ತರ ಸಮೀಕ್ಷೆಗಳು ಹೇಳಿವೆ. ರಿಪಬ್ಲಿಕ್ ಟಿವಿ-ಸಿಎನ್‌ಎಕ್ಸ್ ಸಮೀಕ್ಷೆ ಮಾತ್ರ ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಮುನ್ನಡೆ ಪಡೆಯುತ್ತದೆ ಎಂದಿದೆ. ಆದರೆ ಈ ಚುನಾವಣೆಯಲ್ಲಿ ಬಿಜೆಪಿ ಪಶ್ಚಿಮ ಬಂಗಾಳದಲ್ಲಿ ತನ್ನ ನೆಲೆಗಟ್ಟಿಮಾಡಿಕೊಂಡಿದೆ ಎಂದು ಬಹುತೇಕ ಎಲ್ಲಾ ಸಮೀಕ್ಷೆಗಳು ಹೇಳಿವೆ.

ಈ ಚುನಾವಣೆಯಲ್ಲಿ ಬಿಜೆಪಿಗೆ ಮುನ್ನಡೆ ಎಂದು ರಿಪಬ್ಲಿಕ್ ಟಿವಿ-ಸಿಎನ್‌ಎಕ್ಸ್ ಸಮೀಕ್ಷೆ ಹೇಳಿದ್ದರೂ, ಗರಿಷ್ಠ 138ರಿಂದ 148 ಸ್ಥಾನಗಳನ್ನು ಮಾತ್ರ ಗೆಲ್ಲಬಹುದು ಎಂದು ಅಂದಾಜಿಸಿದೆ. ಸರ್ಕಾರ ರಚಿಸಲು ಬೇಕಿರುವ ಸರಳ ಬಹುಮತ 148. 2016ರ ಚುನಾವಣೆಯಲ್ಲಿ ಬಿಜೆಪಿ ಕೇವಲ ಎರಡು ಸ್ಥಾನಗಳಲ್ಲಿ ಗೆದ್ದಿತ್ತು. ಆದರೆ ಈ ಚುನಾವಣೆಯಲ್ಲಿ ಬಿಜೆಪಿ 110ಕ್ಕೂ ಹೆಚ್ಚು ಸ್ಥಾನಗಳನ್ನು ಗೆಲ್ಲಲಿದೆ ಎಂದು ಎಲ್ಲಾ ಸಮೀಕ್ಷೆಗಳು ಅಂದಾಜಿಸಿವೆ. ಈ ಮೂಲಕ ಪಶ್ಚಿಮ ಬಂಗಾಳದ ರಾಜಕಾರಣದಲ್ಲಿ ಬಿಜೆಪಿ ಒಂದು ಪ್ರಮುಖ ಶಕ್ತಿಯಾಗಿ ಬೆಳೆಯಲಿದೆ. ಮುಂದಿನ ಚುನಾವಣೆ ವೇಳೆಗೆ ಸರಳ ಬಹುಮತಕ್ಕಿಂತಲೂ ಹೆಚ್ಚು ಸ್ಥಾನಗಳನ್ನು ಪಡೆಯುತ್ತದೆ ಎಂದು ವಿಶ್ಲೇಷಿಸಲಾಗಿದೆ.




ಕಾಂಗ್ರೆಸ್ ಮತ್ತು ಎಡಪಕ್ಷಗಳ ಮೈತ್ರಿಕೂಟವು 20-25 ಸ್ಥಾನಗಳನ್ನಷ್ಟೇ ಗೆಲ್ಲಬಹುದು ಎಂದು ಎಲ್ಲಾ ಸಮೀಕ್ಷೆಗಳು ಅಂದಾಜಿಸಿವೆ. ಈ ಪ್ರಕಾರ ಪ್ರಮುಖ ವಿರೋಧ ಪಕ್ಷದ ಸ್ಥಾನವನ್ನು ಬಿಜೆಪಿಗೆ ಈ ಮೈತ್ರಿಕೂಟವು ಬಿಟ್ಟುಕೊಡಲಿದೆ ಎಂದು ಅಂದಾಜಿಸಲಾಗಿದೆ. ಈ ಮೈತ್ರಿಕೂಟವು ಭಾರಿ ಹುಮ್ಮಸ್ಸಿನೊಂದಿಗೆ ಪ್ರಚಾರ ನಡೆಸಿತ್ತು. ಹೀಗಾಗಿ ಆಡಳಿತಾರೂಢ ಟಿಎಂಸಿ ಮತ್ತು ಬಿಜೆಪಿಗೆ ಪ್ರಬಲ ಪೈಪೋಟಿ ಕೊಡಲಿದೆ ಎಂಬ ನಿರೀಕ್ಷೆ ಹುಸಿಯಾಗಲಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

ಪಶ್ಚಿಮ ಬಂಗಾಳ
294 ಒಟ್ಟು ಸ್ಥಾನಗಳು, 148 ಬಹುಮತ

ಸಮೀಕ್ಷೆ	ಟಿಎಂಸಿ	ಬಿಜೆಪಿ	ಕಾಂಗ್ರೆಸ್+ಎಡಪಕ್ಷಗಳ ಮೈತ್ರಿಕೂಟ
ಇಟಿಜಿ-ರಿಸರ್ಚ್	164-176	105-115	10-15
ಪಿ-ಮಾರ್ಕ್	152-172	112-132	10-20
ಎಬಿಪಿ-ಸಿವೋಟರ್	152-164	109-121	14-25
ಸಿಎನ್‌ಎಸ್-ನ್ಯೂಸ್18	162	115	15
ರಿಪಬ್ಲಿಕ್ ಟಿವಿ-ಸಿಎನ್‌ಎಕ್ಸ್	128-138	138-148	11-21

ಮುಖ್ಯಮಂತ್ರಿ ಗಾದಿಯತ್ತ ಸ್ಟಾಲಿನ್?



ತೀವ್ರ ಕುತೂಹಲ ಕೆರಳಿಸಿದ್ದ ತಮಿಳುನಾಡು ವಿಧಾನಸಭಾ ಚುನಾವಣೆಯ ಮತದಾನೋತ್ತರ ಸಮೀಕ್ಷೆಗಳು ಈ ಬಾರಿ ಡಿಎಂಕೆ ಚುಕ್ಕಾಣಿ ಹಿಡಿಯಲಿದೆ ಎಂದು ತಿಳಿಸಿವೆ. ಎಂ. ಕರುಣಾನಿಧಿ ನಿಧನಾನಂತರ ಪಕ್ಷದ ಹೊಣೆ ಹೊತ್ತಿದ್ದ ಸ್ಟಾಲಿನ್, ಈ ಬಾರಿ ದ್ರಾವಿಡ ನಾಡಿನ ಮುಖ್ಯಮಂತ್ರಿಯಾಗುವ ಎಲ್ಲ ಸಾಧ್ಯತೆಗಳಿವೆ.

ಡಿಎಂಕೆ ನೇತೃತ್ವದ ಮೈತ್ರಿಕೂಟವು 160ಕ್ಕೂ ಹೆಚ್ಚು ಸ್ಥಾನಗಳಲ್ಲಿ ಜಯಭೇರಿ ಬಾರಿಸಲಿದೆ ಎಂದು ರಿಪಬ್ಲಿಕ್ ಟಿವಿ-ಸಿಎನ್‌ಎಕ್ಸ್ ಹಾಗೂ ಪಿ-ಮಾರ್ಕ್ ಸಮೀಕ್ಷೆಗಳು ತಿಳಿಸಿವೆ. 10 ವರ್ಷಗಳಿಂದ ವಿರೋಧ ಪಕ್ಷದಲ್ಲಿ ಕುಳಿತಿದ್ದ ಡಿಎಂಕೆ ಈ ಬಾರಿ ಅಧಿಕಾರದ ರುಚಿ ನೋಡಲಿದೆ ಎಂಬ ಸೂಚನೆ ನೀಡಿವೆ.

ಆಡಳಿತಾರೂಢ ಎಐಎಡಿಎಂಕೆ ಈ ಬಾರಿ ಭಾರಿ ಮುಖಭಂಗ ಅನುಭವಿಸಲಿದೆ. ಕಳೆದ ಎರಡು ಅವಧಿಗಳಲ್ಲಿ ಏಕಾಂಗಿಯಾಗಿ ಅಧಿಕಾರ ಹಿಡಿದಿದ್ದ ಪಕ್ಷವು ಈ ಬಾರಿ 70 ಸ್ಥಾನಗಳನ್ನು ದಾಟುವುದಿಲ್ಲ ಎಂದು ಸಮೀಕ್ಷೆಗಳು ತಿಳಿಸಿವೆ. ಆಡಳಿತ ವಿರೋಧಿ ಅಲೆಯಿಂದ ಎಐಎಡಿಎಂಕೆ ಅಧಿಕಾರ ಕಳೆದುಕೊಳ್ಳಲಿದೆ ಎಂದು ಎರಡು ಸಮೀಕ್ಷೆಗಳು ಭವಿಷ್ಯ ನುಡಿದಿವೆ.

ಕಮಲ್‌ಹಾಸನ್ ಅವರ ಮಕ್ಕಳ ನೀಧಿ ಮಯ್ಯಂ ನೇತೃತ್ವದ ಮೈತ್ರಿಕೂಟವು ತಮಿಳುನಾಡು ರಾಜಕಾರಣದ ಮೇಲೆ ಸದ್ಯದ ಮಟ್ಟಿಗೆ ಯಾವುದೇ ಪ್ರಭಾವ ಬೀರುವ ಸಾಧ್ಯತೆ ಇಲ್ಲ ಎಂಬುದು ಸಮೀಕ್ಷೆಗಳ ಅಂದಾಜು. ಟಿ.ಟಿ.ವಿ. ದಿನಕರನ್ ಅವರ ಪಕ್ಷ ಕೂಡ ಮೂಲೆಗುಂಪಾಗುವ ಸಾಧ್ಯತೆಯೇ ಅಧಿಕ.


ತಮಿಳುನಾಡು
234 ಒಟ್ಟು ಸ್ಥಾನಗಳು

ಸಮೀಕ್ಷೆ	ಎಐಎಡಿಎಂಕೆ	ಡಿಎಂಕೆ	ಎಎಂಎಂಕೆ	ಇತರೆ
ರಿಪಬ್ಲಿಕ್ ಟಿವಿ-ಸಿಎನ್‌ಎಕ್ಸ್ ಸಮೀಕ್ಷೆ	58-68	160-170	4-6	0-2
ಪಿ-ಮಾರ್ಕ್ ಸಮೀಕ್ಷೆ	40-65	165-190	1-3	1-6

ಕೇರಳ: ಎಲ್‌ಡಿಎಫ್, ಯುಡಿಎಫ್ ಪರ್ಯಾಯ ಆಳ್ವಿಕೆಗೆ ಕೊನೆ?

ಕೇರಳ ವಿಧಾನಸಭಾ ಚುನಾವಣೆಯ ಫಲಿತಾಂಶದಲ್ಲಿ ಎರಡು ಕುತೂಹಲಕರ ಅಂಶಗಳಿಗೆ ಉತ್ತರ ದೊರೆಯಲಿದೆ. ಎಲ್‌ಡಿಎಫ್ ಮತ್ತು ಯುಡಿಎಫ್ ಪರ್ಯಾಯ ಆಡಳಿತ ಕೊನೆಗೊಳ್ಳಲಿದೆಯೇ ಎಂಬುದು ಒಂದು ಪ್ರಶ್ನೆ. ಕೇರಳದಲ್ಲಿ ಬಿಜೆಪಿ ಗಟ್ಟಿ ನೆಲೆ ಕಂಡುಕೊಳ್ಳಬಹುದೇ ಎಂಬುದು ಎರಡನೇ ಪ್ರಶ್ನೆ.

ಸಮೀಕ್ಷೆಗಳು ಈ ಎರಡೂ ಪ್ರಶ್ನೆಗಳಿಗೂ ಉತ್ತರ ನೀಡಿವೆ. ದಶಕಗಳ ಪರ್ಯಾಯ ಆಳ್ವಿಕೆಯ ಬಳಿಕ ಈ ಬಾರಿ ಎಲ್‌ಡಿಎಫ್ ಸತತ ಎರಡನೇ ಅವಧಿಗೆ ಅಧಿಕಾರಕ್ಕೆ ಏರಲಿದೆ. ಈ ಮೂಲಕ 'ಪರ್ಯಾಯ ಆಳ್ವಿಕೆ' ಕೊನೆಗೊಳ್ಳಲಿದೆ ಎಂಬುದು ಸಮೀಕ್ಷೆಗಳ ಅಂದಾಜು. ಈ ಚುನಾವಣೆಯಲ್ಲಿಯೂ ಬಿಜೆಪಿಯ ನೆಲೆ ಗಟ್ಟಿಗೊಳ್ಳದು ಎಂಬುದು ಸಮೀಕ್ಷೆಯ ಭವಿಷ್ಯ. ಕಳೆದ ಬಾರಿ ಒಂದು ಕ್ಷೇತ್ರದಲ್ಲಿ ಬಿಜೆಪಿ ಗೆದ್ದಿತ್ತು. ಈ ಬಾರಿ ಎರಡರಲ್ಲಿ ಗೆಲ್ಲಬಹುದು ಎಂಬುದು ಕೆಲ ಸಮೀಕ್ಷೆಗಳ ಅಂದಾಜು. ಹಾಗಾಗಿ ಭಾರಿ ದೊಡ್ಡ ಮುನ್ನಡೆ ಬಿಜೆಪಿಗೆ ಸಾಧ್ಯವಾಗದು ಎನ್ನಲಾಗಿದೆ.




ಈ ಚುನಾವಣೆಯಲ್ಲಿ ಕೋಮು ಧ್ರುವೀಕರಣಕ್ಕೆ ಯುಡಿಎಫ್, ಬಿಜೆಪಿ ಎರಡೂ ಪ್ರಯತ್ನಿಸಿವೆ. ಶಬರಿಮಲೆ ವಿಚಾರವು ಪ್ರಚಾರದ ಮುನ್ನೆಲೆಯಲ್ಲಿ ಇರುವಂತೆ ನೋಡಿಕೊಂಡಿವೆ. 'ಸ್ವಾಮಿಯೇ ಶರಣಂ ಅಯ್ಯಪ್ಪ' ಘೋಷಣೆ ಚುನಾವಣಾ ಪ್ರಚಾರ ವೇದಿಕೆಗಳಲ್ಲಿ ಮೊಳಗಿವೆ. ಸಮೀಕ್ಷೆಗಳ ಫಲಿತಾಂಶ ನಿಜವಾದರೆ, ರಾಜಕೀಯ ಪಕ್ಷಗಳ ಕೋಮುವಾದಿ ಮನಸ್ಥಿತಿಗೆ ಕೇರಳದ ಮತದಾರರು ಮಣೆ ಹಾಕಿಲ್ಲ ಎಂಬುದು ಸಾಬೀತಾಗುತ್ತದೆ.

ಚುನಾವಣಾ ಪ್ರಕ್ರಿಯೆ ಆರಂಭವಾದಾಗ ರಾಜ್ಯದಲ್ಲಿ ಎಲ್‌ಡಿಎಫ್ ಪರವಾಗಿ ಬಲವಾದ ಅಲೆಯೇ ಇತ್ತು ಎಂದು ರಾಜಕೀಯ ತಜ್ಞರು ವಿಶ್ಲೇಷಿಸಿದ್ದರು. ಆದರೆ, ಕಾಂಗ್ರೆಸ್ ಮುಖಂಡರಾದ ರಾಹುಲ್ ಗಾಂಧಿ ಮತ್ತು ಪ್ರಿಯಾಂಕಾ ಗಾಂಧಿ ವಾದ್ರಾ ಅವರು ತೀವ್ರವಾಗಿ ಪ್ರಚಾರ ನಡೆಸಿದ ಬಳಿಕ ಈ ಅಲೆ ಬಿರುಸು ಕಳೆದುಕೊಂಡಿದೆ ಎಂಬ ವಿಶ್ವಾಸದಲ್ಲಿ ಕಾಂಗ್ರೆಸ್ ಮುಖಂಡರು ಇದ್ದಾರೆ.

ಮೈತ್ರಿಕೂಟಗಳ ಮೂಲಗಳ ಪ್ರಕಾರ, 75ರಿಂದ 80 ಕ್ಷೇತ್ರಗಳಲ್ಲಿ ಗೆಲುವು ಸಿಗಬಹುದು ಎಂಬ ಲೆಕ್ಕಾಚಾರದಲ್ಲಿ ಎಲ್‌ಡಿಎಫ್ ಮತ್ತು ಯುಡಿಎಫ್‌ಗಳೆರಡೂ ಇವೆ. ಏಳರಿಂದ 12 ಕ್ಷೇತ್ರಗಳಲ್ಲಿ ವಿಜಯ ದಕ್ಕಬಹುದು ಎಂಬುದು ಬಿಜೆಪಿ ಲೆಕ್ಕಾಚಾರ ಎನ್ನಲಾಗುತ್ತಿದೆ.

ಕೇರಳ ವಿಧಾನಸಭೆ
140 ಒಟ್ಟು ಸ್ಥಾನಗಳು

ಸಮೀಕ್ಷೆ	ಎಲ್‌ಡಿಎಫ್	ಯುಡಿಎಫ್	ಬಿಜೆಪಿ	ಇತರೆ
ಎಬಿಪಿ ನ್ಯೂಸ್-ಸಿ ವೋಟರ್ ಸಮೀಕ್ಷೆ	71-77	62-68	0-2	0
ಇಂಡಿಯಾಟುಡೆ-ಆ್ಯಕ್ಸಿಸ್ ಮೈ ಇಂಡಿಯ	104-120	20-36	0-2	0-2
ನ್ಯೂಸ್24-ಟುಡೇಸ್ ಚಾಣಕ್ಯ	102	35	3	0-1
ಪಿ-ಮಾರ್ಕ್	72-79	60-66	0-3	0-1
ರಿಪಬ್ಲಿಕ್ ಟಿವಿ-ಸಿಎನ್‌ಎಕ್ಸ್	72-80	58-64	1-5	0



ಪುದುಚೇರಿ ವಿಧಾನಸಭೆ, 30 ಒಟ್ಟು ಸ್ಥಾನಗಳು


ಸಮೀಕ್ಷೆ	ಎನ್‌ಡಿಎ+	ಯುಪಿಎ+	ಇತರೆ
ಇಂಡಿಯಾ ಟುಡೇ-ಆ್ಯಕ್ಸಿಸ್ ಮೈ ಇಂಡಿಯ ಸಮೀಕ್ಷೆ	20-24	6-10	-
ರಿಪಬ್ಲಿಕ್-ಸಿಎನ್‌ಎಕ್ಸ್ ಸಮೀಕ್ಷೆ	16-20	11-13	-
ಎಬಿಪಿ-ಸಿ ವೋಟರ್ ಸಮೀಕ್ಷೆ	19-23	6-10	1-2

ಎನ್‌ಡಿಎಗೆ ಪುದುಚೇರಿ ಗದ್ದುಗೆ?

ಪುದುಚೇರಿ ವಿಧಾನಸಭೆಯ ಮತದಾನೋತ್ತರ ಸಮೀಕ್ಷೆ ಹೊರಬಿದ್ದಿದೆ. ಅಬ್ಬರದ ಪ್ರಚಾರ ನಡೆಸಿದ್ದ ಎನ್‌ಡಿಎ ಮೈತ್ರಿಕೂಟವು ಸರಳ ಬಹುಮತ ಗಳಿಸಲಿದೆ ಎಂದು ಮೂರು ಸಮೀಕ್ಷೆಗಳು ಭವಿಷ್ಯ ನುಡಿದಿವೆ. ಎನ್.ರಂಗಸ್ವಾಮಿ ಅವರ ಎನ್. ಆರ್. ಕಾಂಗ್ರೆಸ್ ಮೈತ್ರಿಕೂಟದ ಪ್ರಮುಖ ಪಕ್ಷ. ಈ ಪಕ್ಷದ ಜತೆಗೆ ಬಿಜೆಪಿ ಮತ್ತು ಎಐಎಡಿಎಂಕೆ ಇವೆ. ಕಾಂಗ್ರೆಸ್ ನೇತೃತ್ವದ ಯುಪಿಎ ಎರಡನೇ ಸ್ಥಾನ ಗಳಿಸಬಹುದು ಎಂದು ತಿಳಿಸಿವೆ.

ಎನ್.ಆರ್. ಕಾಂಗ್ರೆಸ್ ನೇತೃತ್ವದ ಮೈತ್ರಿಕೂಟವು ಭಾರಿ ಅಂತರದ ಜಯ ಗಳಿಸಲಿದೆ ಎಂದು ಇಂಡಿಯಾ ಟುಡೇ-ಆ್ಯಕ್ಸಿಸ್ ಮೈ ಇಂಡಿಯಾ ಸಮೀಕ್ಷೆ ತಿಳಿಸಿದೆ. ಒಟ್ಟು 30 ಸ್ಥಾನಗಳ ಪೈಕಿ, 20ರಿಂದ 24 ಸ್ಥಾನ ಗೆಲ್ಲಬಹುದು ಎಂದಿದೆ; ಗರಿಷ್ಠ 23 ಕ್ಷೇತ್ರಗಳಲ್ಲಿ ಗೆಲ್ಲಬಹುದು ಎಂದು ಎಬಿಪಿ-ಸಿ ವೋಟರ್ ಅಭಿಪ್ರಾಯಪಟ್ಟಿದೆ.

ಕೇಂದ್ರಾಡಳಿತ ಪ್ರದೇಶ ಪುದುಚೇರಿಯಲ್ಲಿ ಕೇಂದ್ರ ಸರ್ಕಾರವು ಮೂವರು ಶಾಸಕರನ್ನು ನಾಮ ನಿರ್ದೇಶನ ಮಾಡುತ್ತದೆ. ಕಳೆದ ವಿಧಾನಸಭೆಯಲ್ಲಿ ಮೂವರು ಬಿಜೆಪಿ ಶಾಸಕರನ್ನು ಕೇಂದ್ರ ನಾಮನಿರ್ದೇಶನ ಮಾಡಿತ್ತು. ಚುನಾವಣೆ ಹೊಸ್ತಿಲಲ್ಲಿ ವಿ. ನಾರಾಯಣಸ್ವಾಮಿ ನೇತೃತ್ವದ ಕಾಂಗ್ರೆಸ್ ಸರ್ಕಾರದ ಪತನದ ಹಿಂದೆ ಬಿಜೆಪಿ ಇತ್ತು ಎಂದು ವಿಶ್ಲೇಷಿಸಲಾಗಿತ್ತು.



ಅಸ್ಸಾಂ: ಎನ್‌ಡಿಎ ಮೇಲುಗೈ

ಅಸ್ಸಾಂ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಗೆದ್ದು, ಸರ್ಕಾರ ಉಳಿಸಿಕೊಳ್ಳುತ್ತದೆ ಎಂದು ಬಹುತೇಕ ಎಲ್ಲಾ ಮತದಾನೋತ್ತರ ಸಮೀಕ್ಷೆಗಳು ಹೇಳಿವೆ. ಭಾರಿ ಬಿರುಸಿನ ಪ್ರಚಾರ ನಡೆಸಿದ ಕಾಂಗ್ರೆಸ್ ನೇತೃತ್ವದ ಮೈತ್ರಿಕೂಟವು ಎರಡನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಳ್ಳಬೇಕಾಗುತ್ತದೆ ಎಂದು ಸಮೀಕ್ಷೆಗಳಲ್ಲಿ ಅಂದಾಜಿಸಲಾಗಿದೆ.

2016ರ ಚುನಾಚಣೆಯಲ್ಲಿ ಎನ್‌ಡಿಎ ಮೈತ್ರಿಕೂಟವು 86 ಸ್ಥಾನಗಳನ್ನು ಗೆದ್ದುಕೊಂಡಿತ್ತು. ಈ ಚುನಾವಣೆಯಲ್ಲಿಯೂ ಎನ್‌ಡಿಎ ಗರಿಷ್ಠ 84-86 ಸ್ಥಾನಗಳನ್ನು ಗೆಲ್ಲುತ್ತದೆ ಎಂದು ಇಂಡಿಯಾ ಟುಡೆ-ಆಕ್ಸಿಸ್ ಮೈ ಇಂಡಿಯಾ ಮತ್ತು ರಿಪಬ್ಲಿಕ್ ಟಿವಿ-ಸಿಎನ್‌ಎಕ್ಸ್ ಸಮೀಕ್ಷೆಗಳು ಅಂದಾಜಿಸಿವೆ. ಎಬಿಪಿ-ಸಿವೋಟರ್ ಮಾತ್ರ ಎನ್‌ಡಿಎ 58-71 ಸ್ಥಾನಗಳನ್ನು ಗೆಲ್ಲಬಹುದು ಎಂದು ಅಂದಾಜಿಸಿದೆ.

ರಾಷ್ಟ್ರೀಯ ಪೌರತ್ವ ನೋಂದಣಿಗೆ ಸಂಬಂಧಿಸಿದಂತೆ ಬಿಜೆಪಿಗೆ ಅಸ್ಸಾಂನಲ್ಲಿ ಪ್ರಬಲ ವಿರೋಧ ವ್ಯಕ್ತವಾಗಿತ್ತು. ಹೀಗಾಗಿ ಈ ಚುನಾವಣೆಯಲ್ಲಿ ಬಿಜೆಪಿಗೆ ಹಿನ್ನಡೆಯಾಗುತ್ತದೆ ಎಂದು ನಿರೀಕ್ಷಿಸಲಾಗಿತ್ತು. ಹೀಗಾಗಿಯೇ ಎನ್‌ಆರ್‌ಸಿಯನ್ನು ವಿರೋಧಿಸಿದ್ದ ರಾಜಕೀಯ ಪಕ್ಷಗಳನ್ನು ಕಲೆಹಾಕಿ, ಕಾಂಗ್ರೆಸ್ ಮೈತ್ರಿಕೂಟ ರಚಿಸಿಕೊಂಡಿತ್ತು. ಬಿಜೆಪಿ ನೇತೃತ್ವದ ಎನ್‌ಡಿಎಯನ್ನು ಭಾರಿ ಅಂತರದಲ್ಲಿ ಸೋಲಿಸುವ ನಿರೀಕ್ಷೆಯಲ್ಲಿ ಕಾಂಗ್ರೆಸ್ ಮೈತ್ರಿಕೂಟ ಇತ್ತು. ಆದರೆ ಮತದಾನೋತ್ತರ ಸಮೀಕ್ಷೆಗಳು ಈ ನಿರೀಕ್ಷೆಯನ್ನು ಹುಸಿಯಾಗಿಸಿವೆ.

ಅಸ್ಸಾಂ
126 ಒಟ್ಟು ಸ್ಥಾನಗಳು, 64 ಬಹುಮತ

ಸಮೀಕ್ಷೆ	ಎನ್‌ಡಿಎ	ಕಾಂಗ್ರೆಸ್+	ಇತರೆ
ಎಬಿಪಿ-ಸಿವೋಟರ್	58-71	53-66	0-5
ಪಿ-ಮಾರ್ಕ್	62-70	56-64	0-4
ಇಂಡಿಯಾ ಟುಡೆ-ಆಕ್ಸಿಸ್ ಮೈ ಇಂಡಿಯಾ	75-85	40-50	1-4
ರಿಪಬ್ಲಿಕ್ ಟಿವಿ-ಸಿಎನ್‌ಎಕ್ಸ್	74-84	40-50	1-3

ಮೋದಿ ರಾಜೀನಾಮೆಗೆ ಒತ್ತಾಯಿಸಿದ್ದ ಪೋಸ್ಟ್ ಸ್ಥಗಿತ

ತಪ್ಪಿನಿಂದಾದ ಕ್ರಮ ಫೇಸ್‌ಬುಕ್ ಸ್ಪಷ್ಟನೆ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಕೋವಿಡ್ ನಿರ್ವಹಣೆಯಲ್ಲಿ ವಿಫಲವಾಗಿರುವ ನರೇಂದ್ರ ಮೋದಿ ಅವರು ಪ್ರಧಾನಿ ಸ್ಥಾನಕ್ಕೆ ರಾಜೀನಾಮೆ ನೀಡಬೇಕು' ಎಂದು ಒತ್ತಾಯಿಸಿ ಫೇಸ್‌ಬುಕ್‌ನಲ್ಲಿ #ResignModi ಹ್ಯಾಷ್‌ಟ್ಯಾಗ್‌ನಲ್ಲಿ ಮಾಡಿದ್ದ ಪೋಸ್ಟ್‌ಗಳನ್ನು, ಬುಧವಾರ ರಾತ್ರಿ ಫೇಸ್‌ಬುಕ್ ತೆಗೆದುಹಾಕಿತ್ತು. ಈ ಬಗ್ಗೆ ವ್ಯಾಪಕ ಆಕ್ರೋಶ ವ್ಯಕ್ತವಾದ ಬೆನ್ನಲ್ಲೇ, ಈ ಪೋಸ್ಟ್‌ಗಳು ಲಭ್ಯವಾಗುವಂತೆ (ಅನ್‌ಬ್ಲಾಕ್) ಮಾಡಿದೆ.

ಪ್ರಧಾನಿ ನರೇಂದ್ರ ಮೋದಿ ಅವರ ವೈಫಲ್ಯದಿಂದಲೇ ದೇಶದಲ್ಲಿ ಕೋವಿಡ್ ತೀವ್ರವಾಗಿ ಹರಡುತ್ತಿದೆ. ಈ ದುರಂತದ ಹೊಣೆಯನ್ನು ಪ್ರಧಾನಿ ನರೇಂದ್ರ ಮೋದಿ ಅವರೇ ಹೊರಬೇಕು. ಅವರು ಪ್ರಧಾನಿ ಹುದ್ದೆಗೆ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿ ಸಾಮಾಜಿಕ ಜಾಲತಾಣಗಳಲ್ಲಿ ಅಭಿಯಾನ ಆರಂಭವಾಗಿದೆ. ಫೇಸ್‌ಬುಕ್‌ನಲ್ಲಿ ಸಾವಿರಾರು ಮಂದಿ #ResignModi ಹ್ಯಾಷ್‌ಟ್ಯಾಗ್‌ನಲ್ಲಿ ಮೋದಿ ಅವರ ರಾಜೀನಾಮೆಗೆ ಒತ್ತಾಯಿಸುತ್ತಿದ್ದಾರೆ.

#ResignModi ಹ್ಯಾಷ್‌ಟ್ಯಾಗ್‌ನಲ್ಲಿ ಮಾಡಲಾಗಿದ್ದ ಪೋಸ್ಟ್‌ಗಳನ್ನು ಬುಧವಾರ ತಡರಾತ್ರಿ ಫೇಸ್‌ಬುಕ್ ಸ್ಥಗಿತ (ಬ್ಲಾಕ್) ಮಾಡಿತ್ತು. ಈ ಹ್ಯಾಷ್‌ಟ್ಯಾಗ್‌ನಲ್ಲಿ ಮಾಡಿದ್ದ ಪೋಸ್ಟ್‌ಗಳು ಯಾರಿಗೂ ಕಾಣಿಸುತ್ತಿರಲಿಲ್ಲ. ಪೋಸ್ಟ್ ಮಾಡಿದ್ದವರಲ್ಲಿ ಹಲವರ ಖಾತೆಗಳನ್ನೂ ತಾತ್ಕಾಲಿಕ ಅವಧಿಯವರೆಗೆ ಬ್ಲಾಕ್ ಮಾಡಲಾಗಿತ್ತು. ಫೇಸ್‌ಬುಕ್‌ನ ಈ ಕ್ರಮವನ್ನು ಖಂಡಿಸಿ ಮತ್ತೆ ಸಾವಿರಾರು ಮಂದಿ ಪೋಸ್ಟ್ ಮಾಡಿದರು. ತಮ್ಮ ಪೋಸ್ಟ್‌ಗಳು ಬ್ಲಾಕ್ ಆಗಿರುವ ಸ್ಕ್ರೀನ್ ಶಾಟ್‌ಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಲು ಆರಂಭಿಸಿದರು.



ಕೇಂದ್ರ ಸರ್ಕಾರದ ಆದೇಶದ ಮೇರೆಗೆ ಫೇಸ್‌ಬುಕ್ ಈ ಕ್ರಮ ತೆಗೆದುಕೊಂಡಿದೆ ಎಂದು ಹಲವರು ಆರೋಪಿಸಿದ್ದಾರೆ. ಫೇಸ್‌ಬುಕ್ ಮತ್ತು ಟ್ವಿಟರ್‌ನಲ್ಲಿ ಪ್ರಕಟವಾಗುವ ಪೋಸ್ಟ್‌ಗಳನ್ನು ಸರ್ಕಾರದ ಆದೇಶದ ಮೇರೆಗೆ ತೆಗೆದುಹಾಕಲು ಈಗ ಅವಕಾಶವಿದೆ. ಅದನ್ನು ಮೋದಿ ಅವರ ನೇತೃತ್ವದ ಸರ್ಕಾರ ದುರುಪಯೋಗ ಮಾಡಿಕೊಳ್ಳುತ್ತಿದೆ ಎಂದು ವಿರೋಧ ಪಕ್ಷಗಳು ಮತ್ತು ಸಾಮಾಜಿಕ ಕಾರ್ಯಕರ್ತರು ಆರೋಪಿಸಿದ್ದಾರೆ.

ತನ್ನ ಕ್ರಮಕ್ಕೆ ಭಾರಿ ಆಕ್ಷೇಪ ವ್ಯಕ್ತವಾದ ಕಾರಣ, ಫೇಸ್‌ಬುಕ್ ಗುರುವಾರ ಬೆಳಿಗ್ಗೆ ವೇಳೆಗೆ ಆ ಪೋಸ್ಟ್‌ಗಳನ್ನು ಅನ್‌ಬ್ಲಾಕ್ ಮಾಡಿತು. 'ಸರ್ಕಾರದ ಆದೇಶದ ಮೇರೆಗೆ ನಾವು ಈ ಕ್ರಮ ತೆಗೆದುಕೊಂಡಿಲ್ಲ. ತಾಂತ್ರಿಕ ಮತ್ತು ವಿಶ್ಲೇಷಣೆಯಲ್ಲಿ ಆದ ತಪ್ಪಿನಿಂದ ಪೋಸ್ಟ್‌ಗಳನ್ನು ತಾತ್ಕಾಲಿಕವಾಗಿ ಬ್ಲಾಕ್ ಮಾಡಲಾಗಿತ್ತು. ಈಗ ಅವನ್ನು ಅನ್‌ಬ್ಲಾಕ್ ಮಾಡಲಾಗಿದೆ' ಎಂದು ಫೇಸ್‌ಬುಕ್ ಹೇಳಿಕೆ ನೀಡಿದೆ.


ತಪ್ಪು ಮಾಹಿತಿ ಅಥವಾ ಧಾರ್ಮಿಕ ಭಾವನೆಗೆ ಧಕ್ಕೆ ತರುತ್ತದೆ ಎಂದು ಪೋಸ್ಟ್‌ಗಳನ್ನು ಬಳಕೆದಾರರು ವರದಿ ಮಾಡಲು ಫೇಸ್‌ಬುಕ್‌ನಲ್ಲಿ ಅವಕಾಶವಿದೆ. ಹೀಗೆ ವರದಿ ಮಾಡಲಾದ ಪೋಸ್ಟ್‌ಗಳನ್ನು ಫೇಸ್‌ಬುಕ್‌ನ ಸ್ವಯಂಚಾಲಿತ ವ್ಯವಸ್ಥೆ ಬ್ಲಾಕ್ ಮಾಡುತ್ತದೆ. ಕೆಲವು ಸಂದರ್ಭದಲ್ಲಿ ವಿಶ್ಲೇಷಣಾ ತಂಡವು ಈ ಕ್ರಮ ತೆಗೆದುಕೊಳ್ಳುತ್ತದೆ. ಆದರೆ ಈ ಬಾರಿ ಸ್ವಯಂಚಾಲಿತವಾಗಿ ಈ ಕ್ರಮ ತೆಗೆದುಕೊಳ್ಳಲಾಗಿದೆಯೇ ಅಥವಾ ವಿಶ್ಲೇಷಣಾ ತಂಡವು ಈ ಕ್ರಮ ತೆಗೆದುಕೊಂಡಿದೆಯೇ ಎಂಬುದನ್ನು ಫೇಸ್‌ಬುಕ್ ಸ್ಪಷ್ಟಪಡಿಸಿಲ್ಲ.

ಟ್ವಿಟರ್‌ನಲ್ಲಿಯೂ ಅಭಿಯಾನ

ಈ ಮೊದಲು ಟ್ವಿಟರ್‌ನಲ್ಲಿ #resignpm ಹ್ಯಾಷ್‌ಟ್ಯಾಗ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ರಾಜೀನಾಮೆಗೆ ಒತ್ತಾಯಿಸಲಾಗಿತ್ತು. ಫೇಸ್‌ಬುಕ್ ಪೋಸ್ಟ್‌ಗಳನ್ನು ಬ್ಲಾಕ್ ಮಾಡಿದ ನಂತರ ಟ್ವಿಟರ್‌ನಲ್ಲಿಯೂ #ResignModi ಹ್ಯಾಷ್‌ಟ್ಯಾಗ್‌ನಲ್ಲಿ ಟ್ವೀಟ್ ಮಾಡಲಾಗುತ್ತಿದೆ. ಟ್ವಿಟರ್‌ನಲ್ಲಿ ಗುರುವಾರ ಮಧ್ಯಾಹ್ನದ ನಂತರ #ResignModi ಹ್ಯಾಷ್‌ಟ್ಯಾಗ್‌ನಲ್ಲಿ ಪ್ರಧಾನಿ ರಾಜೀನಾಮೆಗೆ ಒತ್ತಾಯಿಸಲಾಗುತ್ತಿದೆ. ಗುರುವಾರ ಸಂಜೆ 7ರ ವೇಳೆಗೆ 2.8 ಲಕ್ಷಕ್ಕೂ ಹೆಚ್ಚು ಬಾರಿ ಟ್ವೀಟ್ ಮಾಡಲಾಗಿದೆ. ಈ ಹ್ಯಾಷ್‌ಟ್ಯಾಗ್ ಟ್ವಿಟರ್‌ನಲ್ಲಿ ಟ್ರೆಂಡ್ ಕೂಡ ಆಗಿತ್ತು.

ಫೇಸ್‌ಬುಕ್‌ನಲ್ಲಿಯೂ ಇದೇ ಹ್ಯಾಷ್‌ಟ್ಯಾಗ್‌ನಲ್ಲಿ ಮತ್ತೆ ಪೋಸ್ಟ್‌ಗಳನ್ನು ಹಂಚಿಕೊಳ್ಳಲಾಗುತ್ತಿದೆ.

ಗುಂಡಣ್ಣ



ದಿನ ಭವಿಷ್ಯ

ಶುಕ್ರವಾರ 30 ಏಪ್ರಿಲ್ 2021

ಶ್ರೀ ಪ್ಲವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ಚೈತ್ರ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಭರಣಿ ಚತುರ್ಥಿ ಗಂ. 45-4 (ರಾ. 12-08) ಶುಕ್ರವಾರ ನಿತ್ಯ ನಕ್ಷತ್ರ ಜ್ಯೇಷ್ಠ ಗಂ. 26-32 (ಹ. 4-43) ಪರಿಘ ನಾಮ ಯೋಗ ಗಂ 15-39 ಬವ ಕರಣ ಗಂ. 17-54 ವಿಷಾಭಾವಃ ಅಮೃತ ಗಂ. 6-10 : ರಾಹುಕಾಲ ಬೆ ಗಂ. 10-30 ರಿಂದ 12-00 ಗುಳಿಕ ಬೆ ಕಾಲ ಗಂ 7-30 ರಿಂದ 9-00 ಯಮಗಂಡ ಕಾಲ ಮ ಗಂ 3-00 ರಿಂದ 4-30 ಸೂರ್ಯೋದಯ: 6-03 ಸೂರ್ಯಾಸ್ತ: 6-31 ಅದೃಷ್ಟ ಸಂಖ್ಯೆ 2, 6

ಮೇಷ: ಬಿಚ್ಚು ಮನಸ್ಸಿನ ಸ್ಪಷ್ಟ ಹೇಳಿಕೆಯಿಂದಾಗಿ ಸಹೋದ್ಯೋಗಿಗಳಿಗೆ ಇರುಸುಮುರುಸು. ಸತ್ಯ ದರ್ಶನದಿಂದ ಎಲ್ಲವೂ ನಿರಾಳ. ಸಂತೋಷದ ವಾತಾವರಣ ಮೂಡುವುದು.

ವೃಷಭ: ಕುಟುಂಬದಲ್ಲಿ ಹೊಂದಾಣಿಕೆಯಿಂದ ಬೆಂಬಲ ಗಳಿಸುವಿರಿ. ವ್ಯಕ್ತಿಗಳ ಸಂಪರ್ಕದಿಂದಾಗಿ ಉತ್ತಮ ಲಾಭದ ನಿರೀಕ್ಷೆ. ಸಂಘರ್ಷದಿಂದ ದೂರವಿರಿ. ಗೆಳೆಯರಿಂದ ನೆಮ್ಮದಿ.

ಮಿಥುನ: ಕೆಲಸ-ಕಾರ್ಯಗಳಲ್ಲಿ ಉತ್ತಮ ಪ್ರಗತಿ. ನಿಕಟವರ್ತಿಗಳಿಂದ ಅನುಕೂಲಕರ ಸಹಾಯ. ಆತ್ಮಸ್ಥೈರ್ಯ ಮೂಡುವುದು. ವ್ಯಾಪಾರದಲ್ಲಿ ಹೆಚ್ಚಿನ ಲಾಭದ ನಿರೀಕ್ಷೆ. ಗಣ್ಯರ ಭೇಟಿ ಸಂಭವ.

ಕರ್ಕಾಟಕ: ಭಿನ್ನಾಭಿಪ್ರಾಯದಿಂದಾಗಿ ನಿಂತುಹೋದ ಕಾರ್ಯಗಳು ಒಮ್ಮತದಿಂದ ಸಾಧಿಸಲ್ಪಡುವವು. ಮದುವೆ ಮುಂತಾದ ಮಂಗಳಕಾರ್ಯಗಳ ನಿಶ್ಚಯ ಸಾಧ್ಯತೆ. ಕೆಲಸ ಕಾರ್ಯಗಳಲ್ಲಿ ಹುಮ್ಮಸ್ಸು.

ಸಿಂಹ: ನಿಮ್ಮ ನಿಲುವಿನಲ್ಲಿ ಆಕಸ್ಮಿಕ ತಿರುವು ಕಂಡುಬರುವುದು. ದೈಹಿಕ ಮತ್ತು ಮಾನಸಿಕ ಶ್ರಮ ಕಡಿಮೆಯಾಗಿ ನಿರಾಳ ಭಾವ. ಕಾರ್ಯನಿರ್ವಹಣೆಯಲ್ಲಿ ಯಶಸ್ಸನ್ನು ಕಾಣುವಿರಿ.

ಕನ್ಯಾ: ಸಾಮಾಜಿಕ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಳ್ಳುವಿರಿ. ಅಚ್ಚರಿಯ ಸುದ್ದಿಯನ್ನು ಕೇಳುವ ಸಾಧ್ಯತೆ. ಸ್ವಪ್ರಯತ್ನದಿಂದ ಕಾರ್ಯಕ್ಷೇತ್ರಗಳಲ್ಲಿ ಉನ್ನತಿ. ಸಾಮಾಜಿಕ ಮನ್ನಣೆ ನಿಮ್ಮದಾಗಲಿದೆ.

ತುಲಾ: ಬೇರೆಯವರ ವಿವಾದಗಳನ್ನು ಪರಿಹರಿಸುವಲ್ಲಿ ಮಧ್ಯಸ್ಥಿಕೆ ವಹಿಸಬೇಕಾದೀತು. ಅಡ್ಡಿ ಆತಂಕಗಳಿಲ್ಲದ ಜೀವನದಿಂದಾಗಿ ಉಲ್ಲಾಸ ಮೂಡುವುದು. ಸ್ನೇಹಿತರಿಂದಾಗಿ ಸಂತೋಷದ ವಾತಾವರಣ.

ವೃಶ್ಚಿಕ: ಮುಕ್ತ ಭಾವನೆಯಿಂದಾಗಿ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಿರಿ. ಪ್ರಯಾಣದ ಸಾಧ್ಯತೆ ಕಂಡುಬರುವುದು. ಆಶ್ಚರ್ಯಕರ ರೀತಿಯಲ್ಲಿ ಕೆಲಸ ಕಾರ್ಯಗಳು ಕೂಡಿಬರುವವು.

ಧನು: ಸ್ನೇಹಿತರೊಂದಿಗೆ ವಿಷಯಗಳ ವಿನಿಮಯದಿಂದಾಗಿ ವಾತಾವರಣ ತಿಳಿಗೊಂಡು ಮನಸ್ಸಿಗೆ ನೆಮ್ಮದಿ. ವಿಶೇಷ ಭೋಜನಕೂಟಗಳಲ್ಲಿ ಭಾಗವಹಿಸುವ ಸಾಧ್ಯತೆ. ಸಂಗಾತಿಯಿಂದ ಸಹಕಾರ.

ಮಕರ: ಗಂಡಾಂತರಕ್ಕೆ ಬಲಿಯಾಗದಂತೆ ಹಿರಿಯರಿಂದ ಸಕಾಲಿಕ ಸಲಹೆಗಳು. ವೈಮನಸ್ಸು ನಿವಾರಣೆಯಾಗಿ ದೃಢ ಸಂಕಲ್ಪ. ಆರೋಗ್ಯದಲ್ಲಿ ಪ್ರಗತಿ. ಬಂಧುಗಳ ಆಗಮನ ಸಾಧ್ಯತೆ.

ಕುಂಭ: ಆತ್ಮಶೋಧನೆಯಿಂದ ತಲೆದೋರಿರುವ ಆಂತರಿಕ ಗೊಂದಲಗಳು ನಿವಾರಣೆಯಾಗುವವು. ನಿಷ್ಕಲ್ಮಷ ಭಾವನೆಯಿಂದ ಸಮಾಧಾನ. ಸ್ನೇಹಿತರಿಂದ ಪ್ರಶಂಸೆ, ಸಂಗಾತಿಯಿಂದ ಉತ್ತಮ ಸಹಕಾರ.

ಮೀನ: ಆತ್ಮೀಯತೆಯಿಂದಾಗಿ ಶುಭ ಸಂದರ್ಭ ನಿರ್ಮಾಣ. ಹೊಣೆಗಾರಿಕೆಯ ವಿಷಯದಲ್ಲಿ ಸಮರ್ಥ ನಿರ್ವಹಣೆ. ವಿಷಯಗಳ ಸ್ಪಷ್ಟ ಅರಿವು ಉಂಟಾಗಿ ವಿಶ್ವಾಸ ಮೂಡುವುದು.

ನಿಮ್ಮ ಜನ್ಮದಿನ 30-ಏಪ್ರಿಲ್ ಈ ದಿನ ಅತ್ಯಂತ ಶುಭಕರ. ಕೃಷಿ ಕ್ಷೇತ್ರದಲ್ಲಿ ಆಸಕ್ತಿಯನ್ನು ಕಳೆದುಕೊಳ್ಳುವ ಸಾಧ್ಯತೆ. ಗಟ್ಟಿ ಮನಸ್ಸಿನ ನೀವು ಶೀಘ್ರ ನಿರ್ಧಾರ ಕೈಗೊಳ್ಳುವ ಸ್ವಭಾವ ಹೊಂದಿರುವಿರಿ. ಕಲಾಲೋಕದಲ್ಲಿ ವಿಹರಿಸುವುದು ನಿಮ್ಮ ಜಾಯಮಾನ. ನಿಸರ್ಗದ ಸೌಂದರ್ಯವನ್ನು ಸದಾ ಆಸ್ವಾದಿಸುವ ಮನೋಭಾವ ಹೊಂದಿರುವಿರಿ.



ಗುಣಗಳ ಅವತರಣ

ಜನಿಸಿದೆಡೆಯಿಂ ಕಡಲವರೆಗಮಡಿಯಡಿ ನೆಲದ |
ಗುಣವಕೊಳ್ಳುತ ಕೊಡುತ ಪೊನಲು ಮಾರ್ಪಡುಗುಂ ||
ಮನುಜಸಂತಾನದಲಿ ಗುಣದವತರಣವಂತು |
ಗುಣಿಪುದೆಂತಾ ತೆರನ – ಮಂಕುತಿಮ್ಮ || 412 ||

ಪದ-ಅರ್ಥ: ಜನಿಸಿದೆಡೆಯಿಂ = ಜನಿಸಿದ + ಎಡೆಯಿಂ(ಸ್ಥಾನದಿಂದ), ಕಡಲವರೆಗಮಡಿಯಡಿ = ಕಡಲವರೆಗಂ(ಕಡಲವರೆಗೂ) + ಅಡಿ + ಅಡಿ, ಪೊನಲು = ನದಿ, ಮಾರ್ಪಡುಗುಂ = ಬದಲಾಯಿಸುತ್ತದೆ, ಗುಣದವತರವಂತು = ಗುಣದ + ಅವತರಣ + ಅಂತು(ಹಾಗೆಯೇ), ಗುಣಿಪುದೆಂತಾ = ಗುಣಿಪುದೆಂತು (ಲೆಕ್ಕ ಹಾಕುವುದೆಂತು) + ಆ, ತೆರನ = ರೀತಿಯನ್ನು.

ವಾಚ್ಯಾರ್ಥ: ಹುಟ್ಟಿದೆಡೆಯಿಂದ ಕಡಲವರೆಗೆ ಹರಿಯುವ ನದಿ ನೆಲದ ಗುಣವನ್ನು ಪಡೆಯುತ್ತ, ನೆಲಕ್ಕೆ ತನ್ನ ಗುಣವನ್ನು ಕೊಡುತ್ತ ಬದಲಾಗುವಂತೆ, ಮನುಷ್ಯನಲ್ಲೂ ಗುಣಗಳ ಅವತರಣ ಹಾಗೆಯೇ ಆಗುತ್ತದೆ. ಅದನ್ನು ಗಣಿಸುವುದೆಂತು?


ವಿವರಣೆ: ಎಲ್ಲೋ ಒಂದೆಡೆ ನೆಲದಲ್ಲಿ ಜಿನುಗಿ ಹುಟ್ಟಿದ ನದಿ ಸಣ್ಣದಾಗಿ ಹರಿಯುತ್ತ ಮುಂದುವರೆಯುತ್ತದೆ. ಹಾಗೆ ಹೋಗುವಾಗ ನೆಲದ ಗುಣವನ್ನು ಹೀರಿಕೊಳ್ಳುತ್ತದೆ. ಅಷ್ಟೇ ಅಲ್ಲ, ತನ್ನ ಗುಣವನ್ನು ನೆಲಕ್ಕೆ ಕೊಡುತ್ತದೆ. ನೀರಿನ ರುಚಿ, ಮೃದುತ್ವ, ಕಠಿಣತೆ ಬಂದದ್ದು ನದಿ ಹರಿದು ಬಂದ ಮಣ್ಣಿನ ಗುಣ. ಅದಕ್ಕೇ ಒಂದು ಬಾವಿಯ, ಕೆರೆಯ, ನದಿಯ ನೀರಿನ ಗುಣ, ಮತ್ತೊಂದರಂತಿರುವುದಿಲ್ಲ. ಇಸ್ರೇಲ್‌ನ ಪಕ್ಕದಲ್ಲಿರುವ ಎರಡು ಸಮುದ್ರಗಳಲ್ಲಿ ಒಂದು ಮೃತ ಸಮುದ್ರ, ಮತ್ತೊಂದು ಗೆಲಲೀ ಸಮುದ್ರ. ಮೃತಸಮುದ್ರ ಎಂದು ಹೆಸರು ಬಂದದ್ದೇ ಅದರಲ್ಲಿರುವ ಉಪ್ಪಿನಂಶದಿಂದ. ಆ ನೀರಿನಲ್ಲಿ ಪ್ರತಿಶತ ಮೂವತ್ತೆರಡರಷ್ಟು ಉಪ್ಪಿದೆ. ಅದರಿಂದಾಗಿ ಈ ಸಮುದ್ರದ ನೀರಿನಲ್ಲಿ ಒಂದು ಜಲಚರವೂ ಬದುಕುವುದಿಲ್ಲ, ಅದರ ಸುತ್ತಮುತ್ತ ಸಸ್ಯಗಳೂ ಬೆಳೆಯಲಾರವು. ಅದಕ್ಕೇ ಅದು ಮೃತಸಮುದ್ರ. ಗೆಲಿಲಿ ಸಮುದ್ರದಲ್ಲಿ ನೀರು ಹರಿದು, ಸದಾಕಾಲ ಬದಲಾಗುವುದರಿಂದ ಆ ನೀರಿನಲ್ಲಿ ಉಪ್ಪಿನಂಶ ಕಡಿಮೆ ಇದೆ. ಅಂದರೆ ನೀರಿನ ಗುಣ ತಾನು ಹರಿಯುವ ಮಣ್ಣಿನಿಂದ ಮಾತ್ರ ಬಂದದ್ದಲ್ಲ, ತನ್ನ ಚಲನಶೀಲತೆಯಿಂದ ಪಡೆದುಕೊಂಡದ್ದು. ಒಂದೇ ಕಡೆಗೆ ನಿಂತ ನೀರು ಕ್ಷಾರಯುಕ್ತವಾಗಿ, ವಿಷಕಾರಿಯಾದ ಅಂಶಗಳನ್ನು ಸಂಗ್ರಹಿಸಿಕೊಂಡರೆ, ಹರಿಯುವ ನೀರು ಪರಿಶುದ್ಧತೆಯನ್ನು ಕಾಪಾಡಿಕೊಳ್ಳುತ್ತದೆ.

ಮನುಷ್ಯನ ಬದುಕೂ ಹಾಗೆಯೇ. ಹುಟ್ಟಿದಾಗಿನಿಂದ ಸಾಯುವವರೆಗೆ ವ್ಯಕ್ತಿ ಬೆಳೆದು ಬಂದ ಪರಿಸರ, ಕಲಿತ ವಿದ್ಯೆ, ಕಟ್ಟಿಕೊಂಡ ಸ್ನೇಹಿತರ ಬಳಗ, ಪಟ್ಟ ಪರಿಶ್ರಮ, ಜೀವನಾದರ್ಶಗಳು, ಪ್ರೇರಕ ಶಕ್ತಿಗಳು ಅವನ ಗುಣವನ್ನು ನಿರ್ಣಯಿಸುತ್ತವೆ. ಅದನ್ನು ಈ ಕಗ್ಗ ಸುಂದರವಾಗಿ ಪ್ರಸ್ತುತಪಡಿಸುತ್ತದೆ. ಮನುಷ್ಯನಲ್ಲಿ ಗುಣಗಳ ಅವತರಣವಾಗುವುದು ಹೀಗೆಯೇ. ಆದರೆ ಯಾರಿಂದ, ಯಾವಾಗ, ಯಾವ ಪ್ರಮಾಣದ ಪ್ರೇರಣೆ ದೊರೆತು ಗುಣಗಳು ಬದಲಾಗುವುವು ಎಂಬುದನ್ನು ಹೇಳುವುದು ಹೇಗೆ? ಒಂದು ಕ್ಷಣದ ದರ್ಶನದಿಂದ ಕ್ರೂರತೆಯನ್ನು ಬಿಟ್ಟ ಅಂಗುಲಿಮಾಲ, ಹೆಂಡತಿಯ ಒಂದೇ ಮಾತಿನಿಂದ ರಾಮಭಕ್ತರಾದ ತುಲಸೀದಾಸರು, ಕೆಲವು ಋಣಾತ್ಮಕ ಘಟನೆಗಳಿಂದ ಯಹೂದ್ಯರ ಬಗ್ಗೆ ದ್ವೇಷದ ಬೆಂಕಿಯನ್ನು ಕಟ್ಟಿಕೊಂಡು ಮಾರಣಹೋಮ ಮಾಡಿದ ಹಿಟ್ಲರ್, ಇಂಥವರ ಬದುಕುಗಳನ್ನು ಗಮನಿಸಿದಾಗ, ನೀರಿನಂತೆ ಮನುಷ್ಯನ ಗುಣಗಳೂ ಯಾವುಯಾವುದೋ ಕಾರಣಗಳಿಂದ ಬದಲಾಗುವುದು ಕಾಣುತ್ತದೆ. ❖

ಪದಬಂಧ 4582 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಎಣ್ಣೆಯ ಮಜ್ಜನ (4)
3.ಜೇಡರ ಹುಳು ಇಲ್ಲಿದೆ (4)
5.ಗುರುಗುಟ್ಟುತ್ತಿರುವ ಗಂಡುಕುರಿ (3)
7.ಪದಾತಿಯಲ್ಲಿರುವ ಗಂಡ (2)
8.ನಡೆದ ಅಥವಾ ಕಲ್ಪಿತ ಸಂಗತಿ (2)
11.ಸಮ್ಮತದಿಂದ ನೀಡಿದ ಓಟು (2)
13.ಆಮಶಂಕೆಯೇ ಎಂಬ ಸಂದೇಹ! (2)
14.ರಕ್ತವಿಲ್ಲಿ ವಿರಳವಾಗಿ ಕಾಣುತ್ತಿದೆ (3)
16.ಬರಿದಾದ ಕೈ (4)
17.ತಿರುವಿನಲ್ಲಿ ಸಿಕ್ಕಿರುವ ತಿರುಪು (4)

ಮೇಲಿಂದ ಕೆಳಕ್ಕೆ
1.ಅಳತೆಗೆ ಮೀರಿದ ಸ್ಥಿತಿ (4)
2.ಈತ ಅಭಿನಯಿಸುವವನು (2)
3.ಜನ ವಾಸ ಮಾಡುವ ಸ್ಥಳ (2)
4.ಸಮುದ್ರ ಅಥವಾ ನದಿಯ ಉಬ್ಬರ (3)
6.ಬೆಳಕು ಕಿಂಡಿಯಿದು (3)
7.ಶ್ರೇಷ್ಠವಾದ ನೆಲೆಯಿದು (4)
9.ಹೊಗಳಿಕೆಯ ವಿರುದ್ಧ ಪದ (4)
10.ಚಾವಟಿ ಇಲ್ಲಿದೆ (3)
12.ಬರಿದಾಗದ ಬತ್ತಳಿಕೆ (4)
13.ಪಾರ್ವತಿಯ ಇನ್ನೊಂದು ಹೆಸರು (3)
14.ತಿರುವು ಮುರುವಾಗಿರುವ ಮಡಿಕೆ (2)
15.ತರಗತಿಯಲ್ಲಿರುವ ಸಮೂಹ (2)



4581ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 3.ಮಾಸ 5.ಖಂಡಗ್ರಹಣ6.ಪರಾತ 7.ವಾಗ್ದಾನ8.ವಾಗ್ಗೇಯಕಾರ 9.ಬುನಾದಿ10.ಸುದೈವ 13.ಆಹ್ಲಾದಕರ14.ದರಿ
ಮೇಲಿಂದ ಕೆಳಕ್ಕೆ: 1.ಅಪರೂಪ 2.ನಿಗ್ರಹ4.ಸನ್ನಿಧಾನ5.ಖಂಡಿತವಾದಿ7.ವಾರಸುದಾರ 9.ಬುದ್ಧಿವಾದ11.ವನಸ್ಪತಿ 12.ಅಂದಣ

ಸುಡೊಕು 4968

		1						
			1		6			
3		5		2			8	1
	8						1	
		4	7		3	8		9
5	9						7	
		2		7		1		5
1					5			
	5			4		2		8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4967 ಸುಡೊಕು

2	7	9	4	5	3	6	8	1
6	4	3	1	8	7	2	5	9
8	1	5	2	6	9	7	3	4
3	8	4	7	2	6	1	9	5
7	9	2	8	1	5	4	6	3
5	6	1	9	3	4	8	2	7
9	2	7	5	4	8	3	1	6
1	5	6	3	7	2	9	4	8
4	3	8	6	9	1	5	7	2

ಬಿಗ್‌ಬಾಸ್ಕೆಟ್ ಖರೀದಿ: ಟಾಟಾ ಸಮೂಹಕ್ಕೆ ಸಮ್ಮತಿ

ನವದೆಹಲಿ (ಪಿಟಿಐ): ಬಿಗ್‌ಬಾಸ್ಕೆಟ್ ಕಂಪನಿಯಲ್ಲಿನ ಶೇಕಡ 64.3ರಷ್ಟು ಷೇರುಗಳನ್ನು ಖರೀದಿಸುವ ಟಾಟಾ ಸಮೂಹದ ಪ್ರಸ್ತಾವಕ್ಕೆ ಭಾರತೀಯ ಸ್ಪರ್ಧಾ ಆಯೋಗ (ಸಿಸಿಐ) ಸಮ್ಮತಿ ನೀಡಿದೆ.

ಟಾಟಾ ಸಮೂಹದ 'ಟಾಟಾ ಡಿಜಿಟಲ್ ಲಿಮಿಟೆಡ್' ಕಂಪನಿಯು ಬಿಗ್ ಬಾಸ್ಕೆಟ್‌ನಲ್ಲಿನ ಷೇರುಗಳನ್ನು ಖರೀದಿಸಲಿದೆ. 2011ರಲ್ಲಿ ಆರಂಭವಾದ ಬಿಗ್‌ಬಾಸ್ಕೆಟ್ ದೇಶದ 25 ನಗರಗಳಲ್ಲಿ ಸೇವೆ ಒದಗಿಸುತ್ತಿದೆ. ಗ್ರೋಫರ್ಸ್, ಅಮೆಜಾನ್ ಮತ್ತು ಫ್ಲಿಪ್‌ಕಾರ್ಟ್ ಜೊತೆ ಬಿಗ್‌ಬಾಸ್ಕೆಟ್ ಸ್ಪರ್ಧಿಸುತ್ತಿದೆ.

ಮುಂಬೈ ಧಾರಣೆ

ಶೇಂಗಾ

29-4-2021

ಜಾವಾ 70/80(ಹೊಸ)	10150-10200
ಜಾವಾ 80/90(ಹೊಸ)	9400-9450
ದಪ್ಪ ಮಧ್ಯಪ್ರದೇಶ(ಹೊಸ)	9900-9950
ದಪ್ಪ ಗುಜರಾತ್(ಹೊಸ)	9100-9200

ಶೇಂಗಾ ಎಣ್ಣೆ (10 ಕೆಜಿಗೆ)


ಕಚ್ಚಾ (ತೆರಿಗೆ ಬಿಟ್ಟು)	1580 (1580)
ಒಂದು ವಾರದ ಡೆಲಿವರಿ	1575 (1575)
ಸೋಯಾ ಕಚ್ಚಾ	1402 (1420)
ಪಾಮ್ ವಾರದ ಡೆಲಿವರಿ	1293 (1286)
ಸೂರ್ಯಕಾಂತಿ ಎಣ್ಣೆ ಕಚ್ಚಾ	1670 (1670)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
46,600 (46,750)
ಬೆಳ್ಳಿ ಕೆ.ಜಿ 68,350 (67,800)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	14,864
ಇಂದಿನ ಅಂತ್ಯ	14,894
▲	30
ದಿನದ ಗರಿಷ್ಠ	15,044

ವಿನಿಮಯ ದರ

$ ಡಾಲರ್	74.07
£ ಪೌಂಡ್	103.20
€ ಯುರೊ	89.70
¥ ಯೆನ್ (100ಕ್ಕೆ)	68

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು

100 ಮೊಟ್ಟೆಗೆ	₹425
12 ಮೊಟ್ಟೆಗೆ	₹58

ಮೈಸೂರು

100 ಮೊಟ್ಟೆಗೆ	₹427

ಖಾದ್ಯ ತೈಲ ಮುಂಬೈ



(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1570 (1570)
ಸೋಯಾ (ರಿಫೈನ್ಡ್)	₹1400 (1395)
ಸೂರ್ಯಕಾಂತಿ (ರಿಫೈನ್ಡ್)	₹1720 (1720)
ಪಾಮೋಲಿನ್	₹1295 (1288)

ತೆಂಗು ಧಾರಣೆ (ಸಾವಿರಕ್ಕೆ)



ಮಂಗಳೂರು
1ನೇ ದರ್ಜೆ
₹25000-32000
2ನೇ ದರ್ಜೆ
₹16000-25000

ಈ ಬಾರಿ ಲಾಭಾಂಶ ಇಲ್ಲ: ಬಯೋಕಾನ್ ಮಾಹಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾರ್ಚ್ 31ಕ್ಕೆ ಕೊನೆಗೊಂಡ ಆರ್ಥಿಕ ವರ್ಷದಲ್ಲಿ ಷೇರುದಾರರಿಗೆ ಲಾಭಾಂಶ ನೀಡುವುದಿಲ್ಲ ಎಂದು ಬಯೋಕಾನ್ ಕಂಪನಿಯು ತನ್ನ ವಾರ್ಷಿಕ ಹಣಕಾಸು ವರದಿಯಲ್ಲಿ ತಿಳಿಸಿದೆ.

ಕೋವಿಡ್–19 ಸಾಂಕ್ರಾಮಿಕದ ಎರಡನೆಯ ಅಲೆ ಸೃಷ್ಟಿಸಿರುವ ಅನಿಶ್ಚಿತ ಸ್ಥಿತಿ ಹಾಗೂ ಸಂಶೋಧನೆ ಮತ್ತು ಅಭಿವೃದ್ಧಿಗಾಗಿ ಮಾಡುತ್ತಿರುವ ನಿರಂತರ ಹೂಡಿಕೆಯನ್ನು ಗಮನದಲ್ಲಿ ಇಟ್ಟುಕೊಂಡು 2020–21ನೇ ಹಣಕಾಸು ವರ್ಷಕ್ಕೆ ಲಾಭಾಂಶ ಘೋಷಣೆ ಮಾಡದೇ ಇರುವುದೇ ಸೂಕ್ತ ಎಂದು ಕಂಪನಿಯ ಆಡಳಿತ ಮಂಡಳಿಯ ನಿರ್ದೇಶಕರು ನಿರ್ಧರಿಸಿದ್ದಾರೆ ಎಂದು ಹೇಳಿದೆ.

ಕಂಪನಿಯ ನಿವ್ವಳ ಲಾಭವು 2019–20ನೇ ಹಣಕಾಸು ವರ್ಷದಲ್ಲಿದ್ದ ₹ 789 ಕೋಟಿಗೆ ಹೋಲಿಸಿದರೆ 2020–21ನೇ ಹಣಕಾಸು ವರ್ಷದಲ್ಲಿ ಶೇಕಡ 4ರಷ್ಟು ಇಳಿಕೆ ಆಗಿದ್ದು, ₹ 754 ಕೋಟಿಗೆ ತಲುಪಿದೆ. ಆದರೆ, ವರಮಾನವು ₹ 6,462 ಕೋಟಿಗಳಿಂದ ₹ 7,360 ಕೋಟಿಗಳಿಗೆ ವೃದ್ಧಿಯಾಗಿ, ಶೇ 14ರಷ್ಟು ಬೆಳವಣಿಗೆ ಕಂಡಿದೆ.

ಖಜಾನಾ ಜುವೆಲರಿ: ರಶ್ಮಿಕಾ ಮಂದಣ್ಣ ರಾಯಭಾರಿ



ಬೆಂಗಳೂರು: ಚಿನ್ನಾಭರಣಗಳ ರಿಟೇಲ್ ಮಾರಾಟ ಕಂಪನಿ 'ಖಜಾನಾ'ದ ಹೊಸ ಬ್ರ್ಯಾಂಡ್ ರಾಯಭಾರಿ ಆಗಿ ನಟಿ ರಶ್ಮಿಕಾ ಮಂದಣ್ಣ ನೇಮಕ ಆಗಿದ್ದಾರೆ.

ದಕ್ಷಿಣ ಭಾರತದ ಮುಂಚೂಣಿ ನಟಿಯರಲ್ಲಿ ಒಬ್ಬರಾಗಿರುವ ಅವರು ಬಾಲಿವುಡ್‌ಗೂ ಪ್ರವೇಶಿಸುತ್ತಿದ್ದಾರೆ. 'ಅಕ್ಷಯ ತೃತೀಯಾ ಸಮೀಪಿಸುತ್ತಿರುವುದರಿಂದ ರಶ್ಮಿಕಾ ಅವರು ಖಜಾನಾ ಬ್ರ್ಯಾಂಡ್‌ನ ಅತ್ಯಾಕರ್ಷಕ ವಿನ್ಯಾಸ ಮತ್ತು ಉತ್ಕೃಷ್ಟ ಫಿನಿಶಿಂಗ್ ಇರುವ ಆಭರಣಗಳನ್ನು ಮಾಧ್ಯಮಗಳ ಮೂಲಕ ಪ್ರಚಾರ ಮಾಡಲಿದ್ದಾರೆ' ಎಂದು ಕಂಪನಿ ಹೇಳಿದೆ. 'ವಿಶಿಷ್ಟ ವಿನ್ಯಾಸ ಮತ್ತು ಉತ್ತಮ ಗುಣಮಟ್ಟಕ್ಕೆ ಆದ್ಯತೆ ನೀಡುವ ಖಜಾನಾ ಜೊತೆ ಕೆಲಸ ಮಾಡುವುದು ಹೆಮ್ಮೆಯ ವಿಷಯ' ಎಂದು ರಶ್ಮಿಕಾ ಪ್ರತಿಕ್ರಿಯೆ ನೀಡಿದ್ದಾರೆ.

ಬಡ ಹಾಗೂ ಮಧ್ಯಮ ವರ್ಗಗಳ ಜನರಿಗೆ ಇನ್ನಷ್ಟು ಸಂಕಷ್ಟ ಸಾಧ್ಯತೆ

ಲಾಕ್‌ಡೌನ್ ಮುಂದುವರಿದರೆ ಅಗತ್ಯ ವಸ್ತುಗಳ ಬೆಲೆ ಏರಿಕೆ

● ವಿಜಯ್ ಜೋಷಿ

ಬೆಂಗಳೂರು: ಕೋವಿಡ್–19 ಹರಡುವುದನ್ನು ತಡೆಯುವ ಉದ್ದೇಶದಿಂದ ಜಾರಿಗೆ ತಂದಿರುವ ಲಾಕ್‌ಡೌನ್ ಕ್ರಮಗಳನ್ನು ಮೇ 12ರ ನಂತರವೂ ಮುಂದುವರಿಸಿದರೆ ಅಗತ್ಯ ವಸ್ತುಗಳ ಬೆಲೆಯಲ್ಲಿ ಹೆಚ್ಚಳ ಆಗಲಿದೆ ಎಂದು ಅರ್ಥಶಾಸ್ತ್ರ ಪರಿಣತರು ಅಂದಾಜಿಸಿದ್ದಾರೆ.

'ಹಿಂದಿನ ವರ್ಷದಲ್ಲಿ ದೇಶದಾದ್ಯಂತ ಲಾಕ್‌ಡೌನ್ ಜಾರಿಗೊಳಿಸಿದ್ದಾಗ ಉಂಟಾಗಿದ್ದ ವಿಷಮ ಪರಿಸ್ಥಿತಿ ಈ ಬಾರಿ ಎದುರಾಗಲಿಕ್ಕಿಲ್ಲ. ಈಗ ರಾಜ್ಯಕ್ಕೆ ಸೀಮಿತವಾಗಿ ಲಾಕ್‌ಡೌನ್ ಜಾರಿಗೆ ತರಲಾಗಿದೆ. ಅಗತ್ಯ ವಸ್ತುಗಳ ಸಾಗಾಟಕ್ಕೆ ಅನುಮತಿ ಕೂಡ ಇದೆ. ಹಾಗಾಗಿ ಅಗತ್ಯ ವಸ್ತುಗಳ ಬೆಲೆಯಲ್ಲಿ ತಕ್ಷಣಕ್ಕೆ ಭಾರಿ ಹೆಚ್ಚಳ ಆಗಲಿಕ್ಕಿಲ್ಲ' ಎಂದು ರಾಜ್ಯ ಯೋಜನಾ ಮಂಡಳಿಯ ಮಾಜಿ ಸದಸ್ಯ ಪ್ರೊ.ಜಿ.ವಿ. ಜೋಶಿ ಅಭಿಪ್ರಾಯ ವ್ಯಕ್ತಪಡಿಸಿದರು.

ಆದರೆ, ಲಾಕ್‌ಡೌನ್ ಅನ್ನು ಮತ್ತೂ ಮುಂದುವರಿಸಿದ್ದೇ ಆದಲ್ಲಿ ಅಗತ್ಯ ವಸ್ತುಗಳ ಬೆಲೆಯಲ್ಲಿ ಹೆಚ್ಚಳ ಆಗಬಹುದು. ಕೆಲವು ವಸ್ತುಗಳ ಕೃತಕ ಅಭಾವ ಸೃಷ್ಟಿಯಾಗಬಹುದು ಎಂದು ಅವರು ಎಚ್ಚರಿಸಿದರು.

ಮುಖ್ಯಾಂಶಗಳು

- ಅಗತ್ಯ ವಸ್ತುಗಳ ಬೆಲೆಯಲ್ಲಿ ಶೇ 40ರವರೆಗೆ ಏರಿಕೆ ಸಾಧ್ಯತೆ
- ಅಸಂಘಟಿತ ವಲಯ, ಕೂಲಿ ಕಾರ್ಮಿಕರಿಗೆ ದೊಡ್ಡ ಪ್ರಮಾಣದಲ್ಲಿ ಸಮಸ್ಯೆ

ಈ ಬಾರಿಯ ಲಾಕ್‌ಡೌನ್ ದೀರ್ಘ ಕಾಲ ಮುಂದುವರಿದರೆ ಕಾರ್ಮಿಕರ ಅಭಾವ ಹಾಗೂ ಪೂರೈಕೆ ವ್ಯವಸ್ಥೆಯಲ್ಲಿ ಎದುರಾಗಬಹುದಾದ ಸಮಸ್ಯೆಗಳಿಂದಾಗಿ ಅನಿಶ್ಚಿತ ವಾತಾವರಣ ನಿರ್ಮಾಣ ಆಗಲಿದೆ. ಅದರ ಪರಿಣಾಮವಾಗಿ, ಅಗತ್ಯ ವಸ್ತುಗಳ ಬೆಲೆ ಹೆಚ್ಚಳ ಕಾಣಲಿದೆ ಎಂದು ಚೆನ್ನೈನ 'ದ್ವಾರಾ ರಿಸರ್ಚ್' ಸಂಸ್ಥೆಯ ಸಂಶೋಧನಾ ಸಹಾಯಕ ರಕ್ಷಿತ್ ಪೊನ್ನಾಥಪುರ ಹೇಳಿದರು.

ಹಿಂದಿನ ವರ್ಷದ ಲಾಕ್‌ಡೌನ್‌ನ ಪರಿಣಾಮ ಕಂಡು ಸರ್ಕಾರ ಯಾವುದಾದರೂ ಪಾಠ ಕಲಿತಿದ್ದರೆ, ಪೂರೈಕೆ ವ್ಯವಸ್ಥೆ ಹಾಗೂ ಉತ್ಪಾದನಾ ವಲಯದಲ್ಲಿ ಕೆಲಸ ಸುಗಮವಾಗಿ ನಡೆಯುವಂತೆ ನೋಡಿಕೊಳ್ಳಬೇಕು. ಆಗ ಒಂದು ಹಂತದ ಮಟ್ಟಿಗೆ ಅಗತ್ಯ ವಸ್ತುಗಳ ಬೆಲೆಯನ್ನು ನಿಯಂತ್ರಣದಲ್ಲಿ ಇರಿಸಬಹುದು. ಇಲ್ಲದಿದ್ದರೆ, ಈಗಾಗಲೇ ಏಟು ತಿಂದಿರುವ ಬಡ ಹಾಗೂ ಮಧ್ಯಮ ವರ್ಗಗಳ ಜನ ಇನ್ನಷ್ಟು ಕಷ್ಟಕ್ಕೆ ಸಿಲುಕಲಿದ್ದಾರೆ ಎಂದು ರಕ್ಷಿತ್ ಅಭಿಪ್ರಾಯ ವ್ಯಕ್ತಪಡಿಸಿದರು.



ಅಂತರರಾಜ್ಯ ಹಾಗೂ ಅಂತರಜಿಲ್ಲಾ ಮಟ್ಟದಲ್ಲಿ ಸರಕು ಸಾಗಣೆಗೆ ಅವಕಾಶ ಇದ್ದರೂ ಕೆಲವು ವಸ್ತುಗಳ ಬೆಲೆಯಲ್ಲಿ ಶೇಕಡ 10ರಿಂದ ಶೇ 20ರಷ್ಟು ಬೆಲೆ ಹೆಚ್ಚಳ ಈಗಾಗಲೇ ಆಗಿದೆ. ಲಾಕ್‌ಡೌನ್ ಮುಂದುವರಿದಿದ್ದೇ ಆದಲ್ಲಿ ಬೆಲೆಯಲ್ಲಿ ಶೇ 40ರವರೆಗೆ ಹೆಚ್ಚಳ ಆಗುವ ಸಾಧ್ಯತೆ ಇದೆ. ಇದರಿಂದಾಗಿ ಅಸಂಘಟಿತ ವಲಯದವರಿಗೆ, ಕೂಲಿ ಕಾರ್ಮಿಕರಿಗೆ ಸಮಸ್ಯೆ ದೊಡ್ಡ ಪ್ರಮಾಣದಲ್ಲಿ ಆಗುತ್ತದೆ ಎಂದು ಬೆಂಗಳೂರಿನ ಐಸೆಕ್‌ನ ಪ್ರೊ. ಕೃಷ್ಣರಾಜ್ ವಿವರಿಸಿದರು.

ಪ್ರಸಕ್ತ ಆರ್ಥಿಕ ವರ್ಷದ ಮೊದಲ ಆರು ತಿಂಗಳಲ್ಲಿ ಹಣದುಬ್ಬರ ಪ್ರಮಾಣವು ಹೆಚ್ಚಿನ ಮಟ್ಟದಲ್ಲಿಯೇ ಇರಲಿದೆ ಎಂದು ಆರ್‌ಬಿಐ ಈಚೆಗೆ ಅಂದಾಜಿಸಿತ್ತು. ಕೋವಿಡ್–19 ತಡೆಯಲು ಲಾಕ್‌ಡೌನ್‌ಗಿಂತಲೂ ಲಸಿಕೆ ಹಾಕಿಸುವುದು ಆರ್ಥಿಕವಾಗಿ ಹೆಚ್ಚು ಪ್ರಯೋಜನಕಾರಿ ಎಂದು ಎಸ್‌ಬಿಐ ಅರ್ಥಶಾಸ್ತ್ರಜ್ಞರು ಈಚೆಗೆ ಹೇಳಿದ್ದಾರೆ.

'ಸರಕು ಸಾಗಣೆ ವ್ಯವಸ್ಥೆಗೆ ಏಟು ಬಿದ್ದರೆ ಸಮಸ್ಯೆ ಆಗುತ್ತದೆ. ಲಾರಿ ಚಾಲಕರು ಕೊರೊನಾ ಭೀತಿಗೆ ಒಳಗಾದರೆ ಅಥವಾ ಅವರಿಗೇ ಸೋಂಕು ತಗುಲಿದರೆ ಸರಕು ಸಾಗಣೆಗೆ ಸಮಸ್ಯೆ ಆಗುತ್ತದೆ. ಅದರ ಪರಿಣಾಮವು ವಸ್ತುಗಳ ಬೆಲೆಯ ಮೇಲೆ ಉಂಟಾಗುತ್ತದೆ' ಎಂದು ತಕ್ಷಶಿಲಾ ಇನ್‌ಸ್ಟಿಟ್ಯೂಷನ್‌ನ ಅರ್ಥಶಾಸ್ತ್ರದ ಸಹಾಯಕ ಪ್ರಾಧ್ಯಾಪಕ ಅನುಪಮ್ ಮಣೂರ್ ಹೇಳಿದರು. ಲಾಕ್‌ಡೌನ್ ಮುಂದುವರಿದಿದ್ದೇ ಆದಲ್ಲಿ ಕೆಲವು ಅಗತ್ಯ ವಸ್ತುಗಳ ಬೆಲೆ ತಾತ್ಕಾಲಿಕವಾಗಿ ಜಾಸ್ತಿ ಆಗಬಹುದು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಕೋವಿಡ್ ಹೆಚ್ಚಳ, ಚಿನ್ನದ ಬೆಲೆ ಏರಿಕೆ ನಿರೀಕ್ಷೆ: ಡಬ್ಲ್ಯುಜಿಸಿ ವರದಿ

ಚಿನ್ನದ ಬೇಡಿಕೆ ಶೇ 37 ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದಲ್ಲಿ ಚಿನ್ನದ ಬೇಡಿಕೆಯು 2020ರ ಜನವರಿ–ಮಾರ್ಚ್ ಅವಧಿಗೆ ಹೋಲಿಸಿದರೆ 2021ರ ಜನವರಿ–ಮಾರ್ಚ್ ಅವಧಿಯಲ್ಲಿ ಶೇಕಡ 37ರಷ್ಟು ಏರಿಕೆ ಆಗಿದೆ ಎಂದು ವಿಶ್ವ ಚಿನ್ನ ಸಮಿತಿ (ಡಬ್ಲ್ಯುಜಿಸಿ) ಗುರುವಾರ ತಿಳಿಸಿದೆ.

ಕೋವಿಡ್ ನಿಯಂತ್ರಣ ಕ್ರಮಗಳು ಮತ್ತು ಲಸಿಕೆ ನೀಡುವ ಕಾರ್ಯಕ್ರಮ ಆರಂಭವಾಗಿದ್ದರಿಂದ ಈ ಅವಧಿಯಲ್ಲಿ ಬೇಡಿಕೆಯು ಹೆಚ್ಚಾಯಿತು ಎಂದು ಸಮಿತಿಯ ಭಾರತದ ವ್ಯವಸ್ಥಾಪಕ ನಿರ್ದೇಶಕ ಸೋಮಸುಂದರಂ ಪಿ.ಆರ್. ಅವರು ಗುರುವಾರ ವರ್ಚುವಲ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಚಿನ್ನದ ಬೆಲೆ ಇಳಿಕೆ, ಆರ್ಥಿಕ ಚಟುವಟಿಕೆಗಳಲ್ಲಿ ಸುಧಾರಣೆ ಹಾಗೂ ಮದುವೆ ಸಮಾರಂಭಗಳು ಮತ್ತೆ ಆರಂಭವಾಗಿದ್ದರಿಂದ ಚಿನ್ನಾಭರಣಗಳ ಬೇಡಿಕೆಯು ಶೇ 39ರಷ್ಟು ಏರಿಕೆ ಆಗಿದೆ. ಚಿನ್ನದ ಮೇಲಿನ ರಿಟೇಲ್ ಹೂಡಿಕೆಯು (ಸಣ್ಣ ಹೂಡಿಕೆದಾರರಿಂದ ಬರುವ ಹೂಡಿಕೆ ಮೊತ್ತ) ಸತತ ಮೂರನೇ ತ್ರೈಮಾಸಿಕದಲ್ಲಿಯೂ ಏರಿಕೆ ಆಗಿದೆ. ಚಿನ್ನದ ಗಟ್ಟಿ ಮತ್ತು ನಾಣ್ಯಗಳ ಬೇಡಿಕೆಯು ಶೇ 34ರಷ್ಟು ಹೆಚ್ಚಾಗಿದ್ದು 37.5 ಟನ್‌ಗಳಿಗೆ ತಲುಪಿದೆ. 2015ರ ಬಳಿಕ ತ್ರೈಮಾಸಿಕವೊಂದರಲ್ಲಿನ ಗರಿಷ್ಠ ಮಟ್ಟದ ಬೇಡಿಕೆ ಇದಾಗಿದೆ ಎಂದು ಅವರು ತಿಳಿಸಿದರು.



ಬೇಡಿಕೆ ವಿವರ (ಟನ್‌ಗಳಲ್ಲಿ)	2020ರ ಜನವರಿ–ಮಾರ್ಚ್	2021ರ ಜನವರಿ–ಮಾರ್ಚ್	ಬೆಳವಣಿಗೆ (%)
ಚಿನ್ನಾಭರಣ	73.9	102.5	57
ಹೂಡಿಕೆ	28.1	37.5	34

ಜಾಗತಿಕ ಬೇಡಿಕೆ ಇಳಿಕೆ

ಚಿನ್ನದ ಬೇಡಿಕೆಯು 2020ರ ಮೊದಲ ತ್ರೈಮಾಸಿಕಕ್ಕೆ ಹೋಲಿಸಿದರೆ 2021ರ ಮೊದಲ ತ್ರೈಮಾಸಿಕದಲ್ಲಿ ಶೇ 23ರಷ್ಟು ಇಳಿಕೆ ಆಗಿದ್ದು, 815.7 ಟನ್‌ಗಳಷ್ಟಾಗಿದೆ. ಚಿನ್ನಾಭರಣ ಬೇಡಿಕೆಯು ಶೇ 52ರಷ್ಟು ಹೆಚ್ಚಾಗಿದ್ದು 477.4 ಟನ್‌ಗಳಿಗೆ ತಲುಪಿದೆ. ಹೂಡಿಕೆದಾರರು ಚಿನ್ನದ ಇಟಿಎಫ್‌ಗಳನ್ನು ಮಾರಾಟ ಮಾಡಿದ್ದರಿಂದ ಚಿನ್ನದ ಬೇಡಿಕೆ ತಗ್ಗಿದೆ ಎಂದು ಡಬ್ಲ್ಯುಜಿಸಿ ತಿಳಿಸಿದೆ.

ಕಳೆದ ವರ್ಷದ ಕೋವಿಡ್ ಸಂದರ್ಭದಲ್ಲಿ ಚಿನ್ನದ ಬೆಲೆ ಭಾರಿ ಏರಿಕೆ ಕಂಡಿತ್ತು. ಮೊದಲ ತ್ರೈಮಾಸಿಕದಲ್ಲಿ 10 ಗ್ರಾಂಗೆ ಜಿಎಸ್‌ಟಿ ಹೊರತುಪಡಿಸಿ ₹ 41 ಸಾವಿರ ಇದ್ದಿದ್ದು ಎರಡನೇ ತ್ರೈಮಾಸಿಕದಲ್ಲಿ ₹ 46 ಸಾವಿರಕ್ಕೆ ಏರಿಕೆ ಆಯಿತು. ಬಳಿಕ ಮೂರನೇ ತ್ರೈಮಾಸಿಕದ ವೇಳೆಗೆ ₹ 51 ಸಾವಿರಕ್ಕೆ ಜಿಗಿಯಿತು. ನಾಲ್ಕನೇ ತ್ರೈಮಾಸಿಕದ ವೇಳೆಗೆ ಲಾಕ್‌ಡೌನ್ ನಿರ್ಬಂಧಗಳ ತೆರವಿನ ಪರಿಣಾಮ ಚಿನ್ನದ ಬೆಲೆಯು ₹ 50 ಸಾವಿರಕ್ಕೆ ಇಳಿಕೆ ಆಗಿತ್ತು.

ಕೋವಿಡ್ ನಿಯಂತ್ರಣ ಮತ್ತು ಆರ್ಥಿಕ ಚಟುವಟಿಕೆಗಳಲ್ಲಿ ಚೇತರಿಕೆಯಿಂದಾಗಿ ಸದ್ಯ ಬೆಲೆಯು ₹ 46 ಸಾವಿರದ ಆಸುಪಾಸಿನಲ್ಲಿದೆ. ಆದರೆ ಕೋವಿಡ್‌ನ ಎರಡನೇ ಅಲೆಯು ತೀವ್ರವಾಗಿ ಹರಡುತ್ತಿರುವುದರಿಂದ ಬೆಲೆಯು ಕಳೆದ ವರ್ಷದ ರೀತಿಯಲ್ಲಿಯೇ ಮತ್ತೆ ಏರಿಕೆ ಆಗುವ ಸಾಧ್ಯತೆ ಕಂಡುಬರುತ್ತಿದೆ ಎಂದು ಅವರು ಹೇಳಿದರು.

ಎರಡನೇ ಅಲೆ ನಿಯಂತ್ರಿಸಲು ಹಲವು ರಾಜ್ಯಗಳಲ್ಲಿ ಮತ್ತೆ ಲಾಕ್‌ಡೌನ್ ಜಾರಿಗೊಳಿಸಲಾಗುತ್ತಿದೆ. ಇದರಿಂದ 2021ರ 2ನೇ ತ್ರೈಮಾಸಿಕದಲ್ಲಿ ಮದುವೆ ಸಮಾರಂಭಗಳಿಗೆ ಚಿನ್ನಾಭರಣ ಖರೀದಿಸುವುದರ ಮೇಲೆ ಪರಿಣಾಮ ಉಂಟುಮಾಡುವ ಸಾಧ್ಯತೆ ಇದೆ ಎಂದು ತಿಳಿಸಿದರು.

ರಾಜ್ಯದಲ್ಲಿ ತೀವ್ರವಾಗಿ ಹರಡುತ್ತಿದೆ ಕೊರೊನಾ ಸೋಂಕು

ಐಸಿಯುನಲ್ಲಿ 2,431 ಮಂದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೊರೊನಾ ಸೋಂಕು ವೇಗವಾಗಿ ಹರಡುತ್ತಿರುವ ಜತೆಗೆ ಸೋಂಕಿನ ತೀವ್ರತೆಗೆ ಗಂಭೀರವಾಗಿ ಅಸ್ವಸ್ಥಗೊಳ್ಳುವವರ ಸಂಖ್ಯೆಯೂ ಹೆಚ್ಚಳವಾಗುತ್ತಿದೆ.

ಸದ್ಯ ಕೋವಿಡ್ ಪೀಡಿತರಲ್ಲಿ 2,431 ಮಂದಿ ತೀವ್ರ ನಿಗಾ ಘಟಕದಲ್ಲಿ (ಐಸಿಯು) ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ಕೋವಿಡ್ ಪೀಡಿತರಲ್ಲಿ ಬೆಂಗಳೂರಿನಲ್ಲಿ 143 ಮಂದಿ ಸೇರಿದಂತೆ ರಾಜ್ಯದಲ್ಲಿ 270 ಮಂದಿ ಸಾವಿಗೀಡಾಗಿರುವುದು ಗುರುವಾರ ದೃಢಪಟ್ಟಿದೆ. ಕೇವಲ ಐದು ದಿನಗಳಲ್ಲಿ 880 ಮಂದಿ ಕೋವಿಡ್‌ನಿಂದ ಮೃತಪಟ್ಟಿರುವುದು ಖಚಿತಪಟ್ಟಿದೆ. ಇದರಿಂದಾಗಿ ಈವರೆಗೆ ಸಾವಿಗೀಡಾದವರ ಸಂಖ್ಯೆ 15,306ಕ್ಕೆ ಏರಿಕೆಯಾಗಿದೆ. ಮರಣ ಪ್ರಮಾಣ ದರ ಶೇ 0.77ರಷ್ಟಿದೆ. ಒಂದು ದಿನದ ಅವಧಿಯಲ್ಲಿ 1.75 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. 35,024 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. ಸೋಂಕು ದೃಢ ಪ್ರಮಾಣ ಶೇ 19.92ರಷ್ಟಿದೆ.

'ಭಾರತದಲ್ಲಿ ಭಯಾನಕ ಪರಿಸ್ಥಿತಿ'

ವಾಷಿಂಗ್ಟನ್ (ಪಿಟಿಐ): ಭಾರತದಲ್ಲಿ ಕೋವಿಡ್–19 ಪಿಡುಗು ಭಾರಿ ಹಾನಿಯನ್ನುಂಟು ಮಾಡುತ್ತಿದ್ದು, ಈ ಪಿಡುಗಿನಿಂದ ಸಂಭವಿಸುತ್ತಿರುವ ಸಾವು–ನೋವಿನ ವರದಿಗಳು ಭಯಾನಕ ಹಾಗೂ ಹೃದಯ ಹಿಂಡುವಂತಿವೆ ಎಂದು ಅಮೆರಿಕದ ಸರ್ಜನ್ ಜನರಲ್ ಆಗಿರುವ ಭಾರತ ಮೂಲದ ವಿವೇಕ್ ಮೂರ್ತಿ ಹೇಳಿದ್ದಾರೆ.

ಎರಡನೇ ಬಾರಿಗೆ ದೇಶದ ವೈದ್ಯಕೀಯ ಸೇವೆಯ ಈ ಅತ್ಯುನ್ನತ ಹುದ್ದೆಗೇರಿದ ಹೆಗ್ಗಳಿಕೆ ಹೊಂದಿರುವ ಅವರು, ಕೋವಿಡ್‌ನಿಂದಾಗಿ ತಮ್ಮ ಕುಟುಂಬದ ಏಳು ಜನರನ್ನು ಕಳೆದುಕೊಂಡಿದ್ದಾರೆ.

'ಭಾರತದಲ್ಲಿರುವ ನಮ್ಮ ಕುಟುಂಬದ ಸದಸ್ಯರೊಂದಿಗೆ ನಿತ್ಯವೂ ಮಾತನಾಡುತ್ತಿರುವೆ. ಅವರು ಬಹಳಷ್ಟು ಯಾತನೆ ಅನುಭವಿಸುತ್ತಿದ್ದಾರೆ. ಇಂಥ ಪರಿಸ್ಥಿತಿ ಇನ್ನೆಂದೂ ಬಾರದಿರಲಿ ಎಂದೇ ಎಲ್ಲರೂ ಪ್ರಾರ್ಥಿಸುವಂತಾಗಿದೆ' ಎಂದು ಅವರು ಮಾಧ್ಯಮಗಳಿಗೆ ಹೇಳಿದರು.

'ನಿತ್ಯ 3.50 ಲಕ್ಷಕ್ಕೂ ಅಧಿಕ ಜನರು ಸೋಂಕಿಗೆ ಒಳಗಾಗುತ್ತಿದ್ದು, ರೋಗಿಗಳಿಗೆ ಚಿಕಿತ್ಸೆ ನೀಡಲು ಆಗುತ್ತಿಲ್ಲ. ಅಸ್ವಸ್ಥರಾದವರಿಗೆ ಆಮ್ಲಜನಕ ಪೂರೈಕೆ ಸಾಧ್ಯವಾಗುತ್ತಿಲ್ಲ. ಬಹಳ ಸಂಕಷ್ಟದ ಪರಿಸ್ಥಿತಿ ಮನೆ ಮಾಡಿದೆ' ಎಂದು ಕಳವಳ ವ್ಯಕ್ತಪಡಿಸಿದರು. 'ಸಂಕಷ್ಟದ ಈ ಸಮಯದಲ್ಲಿ ಭಾರತಕ್ಕೆ ಅಮೆರಿಕ ನೆರವು ನೀಡಲು ಮುಂದಾಗಿರುವುದು ಸಮಾಧಾನ ತಂದಿದೆ' ಎಂದು ಪ್ರಶ್ನೆಯೊಂದಕ್ಕೆ ಅವರು ಉತ್ತರಿಸಿದರು.

ಚೀನಾ: ಬಾಹ್ಯಾಕಾಶ ನಿಲ್ದಾಣ 'ಘಟಕ' ಉಡ್ಡಯನ

ಬೀಜಿಂಗ್ (ಪಿಟಿಐ): ಬಾಹ್ಯಾಕಾಶ ನಿಲ್ದಾಣ ಸ್ಥಾಪಿಸುವ ತನ್ನ ಕಾರ್ಯಕ್ರಮದ ಅಂಗವಾಗಿ ಚೀನಾ ದೇಶವು ನಿಲ್ದಾಣದ ಘಟಕವಾದ 'ತಿಯಾನ್ಹೆ'ಯನ್ನು ಗುರುವಾರ ಉಡ್ಡಯನ ಮಾಡಿತು.

ದಕ್ಷಿಣದಲ್ಲಿರುವ ಹೈನನ್ ಪ್ರಾಂತ್ಯದ ವೆಂಚಾಂಗ್ ಸ್ಪೇಸ್‌ಕ್ರಾಫ್ಟ್ ಲಾಂಚ್ ಸೈಟ್ ಎಂಬ ಉಡ್ಡಯನ ಕೇಂದ್ರದಿಂದ, ಬಾಹ್ಯಾಕಾಶ ನಿಲ್ದಾಣದ ಈ ಘಟಕವನ್ನು ಹೊತ್ತ ' ದಿ ಲಾಂಗ್ ಮಾರ್ಚ್–5ಬಿ ವೈ2' ಎಂಬ ರಾಕೆಟ್ ನಭದತ್ತ ಚಿಮ್ಮಿತು.

ಮುಂದಿನ ವರ್ಷದ ಅಂತ್ಯದ ವೇಳೆಗೆ ಬಾಹ್ಯಾಕಾಶ ನಿಲ್ದಾಣ ನಿರ್ಮಾಣವನ್ನು ಪೂರ್ಣಗೊಳಿಸುವ ಗುರಿ ಹೊಂದಿರುವ ಚೀನಾ, ಈ ನಿಟ್ಟಿನಲ್ಲಿ ಹಲವಾರು ಉಡ್ಡಯನ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

'ಟಿಯಾಂಗಾಂಗ್' ಎಂಬ ಬಾಹ್ಯಾಕಾಶ ನಿಲ್ದಾಣವನ್ನು ನಿರ್ಮಾಣ ಮಾಡಲಾಗುತ್ತಿದೆ. 'ದೇವಲೋಕದ ಅರಮನೆ' ಎಂಬುದು ಇದರ ಅರ್ಥ. 'ಈಗ ಉಡ್ಡಯನ ಮಾಡಿರುವ ವ್ಯೋಮಘಟಕವು (ತಿಯಾನ್ಹೆ) ಈ ನಿಲ್ದಾಣದ ನಿರ್ವಹಣೆ ಹಾಗೂ ನಿಯಂತ್ರಣ ಕಾರ್ಯ ಮಾಡುತ್ತದೆ. ಈ ಬಾಹ್ಯಾಕಾಶ ನಿಲ್ದಾಣದಲ್ಲಿ ಮೂರು ಗಗನನೌಕೆಗಳು ಕೆಲ ಕಾಲ ತಂಗಲು ಅವಕಾಶ ಇರುತ್ತದೆ' ಎಂದು ಚೀನಾ ಅಕಾಡೆಮಿ ಆಫ್ ಸ್ಪೇಸ್ ಟೆಕ್ನಾಲಜಿ (ಸಿಎಎಸ್‌ಟಿ)ಯ ಉಪಮುಖ್ಯ ವಿನ್ಯಾಸಕಾರ ಬಾಯಿ ಲಿನ್‌ಹೊ ಹೇಳಿದ್ದಾರೆ.


ತಿಯಾನ್ಹೆಯ ಉದ್ದ 16.6 ಮೀ. ಇದ್ದು, ಇದರ ವ್ಯಾಸ 4.2 ಮೀ. ಇದೆ. ಇದರ ಒಟ್ಟು ತೂಕ 22.5 ಟನ್ ಇದ್ದು, ಇದು ಚೀನಾ ಅಭಿವೃದ್ಧಿಪಡಿಸಿರುವ ದೊಡ್ಡ ಗಗನನೌಕೆಯಾಗಿದೆ.



'ತಿಯಾನ್ಹೆ'ಯ ಉಡ್ಡಯನ ಗುರುವಾರ ನಡೆಯಿತು —ಎಎಫ್‌ಪಿ ಚಿತ್ರ

ಕೊರೊನಾ ಸಾಂತ್ವನ

'ರೋಗ ಎದುರಿಸಲು ದೇಹ ಗಟ್ಟಿಗೊಳಿಸಿಕೊಳ್ಳಿ'



'ಆಯುರ್ವೇದದಲ್ಲಿ 'ಪ್ರಜ್ಞಾಪರಾಧ' ಎಂಬುದು ಬಳಕೆಯಲ್ಲಿದೆ. ಗೊತ್ತಿದ್ದು ಮಾಡುವ ತಪ್ಪಿಗೆ ಹಾಗೆ ಹೇಳಲಾಗುತ್ತದೆ. ಮೊದಲನೆ ಅಲೆಯಲ್ಲಿ ಸಾಕಷ್ಟು ಪಾಠ ಕಲಿತಿದ್ದೇವೆ. ಆ ವೇಳೆ ಮಾಡಿದ ತಪ್ಪುಗಳು ಮರುಕಳಿಸದಂತೆ ನೋಡಿಕೊಳ್ಳಬೇಕಾಗಿತ್ತು. ಈಗ ಮನೆಯಲ್ಲಿ ಒಬ್ಬರಿಗೆ ಸೋಂಕು ತಗುಲಿದರೆ ಎಲ್ಲ ಸದಸ್ಯರಿಗೆ ಕಾಯಿಲೆ ಹರಡುತ್ತಿದೆ. ಮನೆಯಲ್ಲಿನ ಆರೈಕೆ ಕಡಿಮೆಯಾಗಿರುವುದು ಕೂಡ ಇದಕ್ಕೆ ಕಾರಣ. ಈಗಲಾದರೂ ಎಚ್ಚೆತ್ತುಕೊಂಡು ರೋಗನಿರೋಧಕ ಶಕ್ತಿ ಹೆಚ್ಚಿಸಿಕೊಳ್ಳಬೇಕು.'

ಮುಖಗವಸು ಧರಿಸುವಿಕೆ, ಅಂತರ ಕಾಯ್ದುಕೊಳ್ಳುವಿಕೆ ಸೇರಿದಂತೆ ವಿವಿಧ ನಿಯಮಗಳು ಮುನ್ನೆಚ್ಚರಿಕೆ ಕ್ರಮಗಳಾಗಿವೆ. ಅವನ್ನು ಪಾಲಿಸಿದರೂ ಸೋಂಕು ತಗುಲಬಹುದು. ಹಾಗಾಗಿ, ರೋಗ ಎದುರಿಸಲು ದೇಹವನ್ನು ಗಟ್ಟಿಗೊಳಿಸಿಕೊಳ್ಳಬೇಕು. ಜೀರ್ಣಕ್ರಿಯೆಗೆ ಸಹಕಾರಿಯಾದ ಮೃದು ಆಹಾರಸೇವಿಸಬೇಕು. ಅರಿಶಿನ, ಕಾಳು ಮೆಣಸು, ಶುಂಠಿ ಸೇರಿದಂತೆ ವಿವಿಧ ಸಾಂಬಾರು ಪದಾರ್ಥಗಳನ್ನು ಅಗತ್ಯ ಪ್ರಮಾಣದಲ್ಲಿ ಬಳಸಬೇಕು. ವೈರಾಣು ರೋಗಗಳಿಗೆ ಆಯುರ್ವೇದದಲ್ಲಿ ಹೇರಳವಾಗಿ ಔಷಧಗಳಿವೆ. ಅವನ್ನು ಬಳಸಿದಲ್ಲಿ ಕೋವಿಡ್ ತಡೆಯಲು ನಮಗೆ ಸಾಧ್ಯವಾಗುತ್ತದೆ.

ಕೋವಿಡ್ ಜಯಿಸಲು ಹೀಗೆ ಮಾಡಿ

- ಒಂದು ಲೀಟರ್ ನೀರನ್ನು ಚೆನ್ನಾಗಿ ಕುದಿಸಿ, ಅದಕ್ಕೆ ಐದು ತುಳಸಿ ಎಲೆ ಹಾಕಬೇಕು. ಮತ್ತೊಮ್ಮೆ ಕುದಿಸಿ, ಬಳಿಕ ಅದನ್ನು ಕುಡಿಯಬೇಕು. ತುಳಸಿ ವೈರಾಣು ನಾಶಕ ಗುಣ ಹೊಂದಿದೆ.
- ಒಂದು ಬೆಟ್ಟದ ನೆಲ್ಲಿಕಾಯಿ ಅಥವಾ ಅದರ ಪುಡಿಯ ಚೂರ್ಣವನ್ನು ಪ್ರತಿನಿತ್ಯ ಸೇವಿಸಿ.
- ಉಸಿರಾಟದ ಸಮಸ್ಯೆಗಳು ಜೀವಕ್ಕೆ ಅಪಾಯ ತರುವ ಸಾಧ್ಯತೆ ಇರುತ್ತದೆ. ಇದನ್ನು ನಿಯಂತ್ರಣಕ್ಕೆ ತರಲು ಹಿಪ್ಪಲಿ ಸಹಾಯಕ. ಆಯುರ್ವೇದ ಗ್ರಂಥದಲ್ಲಿ 'ಹಿಪ್ಪಲಿ ವರ್ಧಮಾನ ರಸಾಯನ' ಎಂದು ಹೇಳಲಾಗಿದೆ. 1 ಸೆಂ.ಮೀ. ಉದ್ದದ ಹಿಪ್ಪಲಿಯನ್ನು ದಿನಕ್ಕೆ ಮೂರು ತೆಗೆದುಕೊಳ್ಳಬೇಕು. ಅದನ್ನು ಪುಡಿಮಾಡಿ ಜೇನುತುಪ್ಪದ ಜತೆಗೆ ಅಥವಾ ಹಾಲಿನ ಜತೆಗೆ ಸೇವಿಸಬಹುದು.
- ಆಯುರ್ವೇದದಲ್ಲಿ ಷಡಂಗ ಪಾನೀಯವಿದೆ. ಬದ್ರಮುಷ್ಠಿ, ಪರ್ಪಟಕ, ಲಾವಂಚ, ಉದೀಚ, ಶುಂಠಿ ಹಾಗೂ ಚಂದನದ ತಲಾ ಎರಡು ಗ್ರಾಂ ಪುಡಿಯನ್ನು 3 ಲೀಟರ್ ನೀರಿನಲ್ಲಿ ಕುದಿಸಬೇಕು. ಅದು ಅರ್ಧದಷ್ಟು ಆವಿಯಾಗಬೇಕು. ಬಳಿಕ ತಣ್ಣಗಾದ ಮೇಲೆ ಕುಡಿಯಬೇಕು. ಇದು ಜ್ವರ ಕಡಿಮೆ ಮಾಡುವ ಜತೆಗೆ ದೇಹವನ್ನು ತಂಪು ಮಾಡುತ್ತದೆ.
- ನೆಲನೆಲ್ಲಿ, ಭದ್ರಮುಷ್ಠಿ ಅಥವಾ ಅಮೃತಬಳ್ಳಿಯಿಂದ ಗ್ರೀನ್ ಟಿ ಮಾಡಿ, ದಿನಕ್ಕೆ ಎರಡು ಬಾರಿ ಸೇವಿಸಬೇಕು.

ರೋಗ ಬಂದಾಗ ಏನು ಮಾಡಬೇಕು?

- ಕೆಮ್ಮು, ಶೀತ, ಜ್ವರ ಬಂದಾಗ ಅಷ್ಟಗುಣ ಮಂಡವನ್ನು ತಯಾರಿಸಬೇಕು. ಅದರಲ್ಲಿ 8 ಸಾಮಗ್ರಿಗಳಿರುತ್ತವೆ. 8 ಗ್ರಾಂ ಅಕ್ಕಿ, 8 ಗ್ರಾಂ ಉದ್ದು, ಸ್ವಲ್ಪ ಸೈಂದಲವಣ ಅಥವಾ ಕಲ್ಲು ಉಪ್ಪು, ಶುಂಠಿ, ಹಿಪ್ಪಲಿ ಮತ್ತು ಕಾಳು ಮೆಣಸಿನ ಎರಡೆರಡು ಚಿಟಕಿಯಷ್ಟು ಹಾಕಬೇಕು. ಕೊತ್ತಂಬರಿ, ಇಂಗನ್ನೂ ಸೇರಿಸಬೇಕು. ಇದಕ್ಕೆ 225 ಎಂ.ಎಲ್. ನೀರು ಹಾಕಿ ಕುದಿಸಬೇಕು. ಅಕ್ಕಿಯು ಬೆಂದಮೇಲೆ ನೀರನ್ನು ಬೇರ್ಪಡಿಸಬೇಕು. ಆಗ 50 ಎಂ.ಎಲ್. ಗಂಜಿ ಸಿಗುತ್ತದೆ. ಅದನ್ನು ಬಿಸಿ ಇರುವಾಗಲೇ ಸೇವಿಸಬೇಕು. ಇದು ಜ್ವರ ಕಡಿಮೆ ಮಾಡಲು ಅನುಕೂಲ ಮಾಡುವ ಜತೆಗೆ ಶಕ್ತಿಯನ್ನು ನೀಡುತ್ತದೆ.
- ಆಯುರ್ವೇದದಲ್ಲಿ 'ವ್ಯೂಶ' ಎಂಬ ವಿಧಾನವಿದೆ. ಸಾಂಬಾರಿನ ರೀತಿ ತಯಾರಿ ಮಾಡಿ, ಸೇವಿಸುವುದು. ಹುರುಳಿ ಕಾಳು, ಹೆಸರು ಕಾಳು, ಚೆನ್ನಂಗಿ ಬೇಳೆಯ ಕಟ್ಟನ್ನು ಮಾಡಿ, ಬಿಸಿ ಇರುವಾಗಲೇ ಸೂಪು ರೀತಿಯಲ್ಲಿ ಕುಡಿದರೆ ಜ್ವರ ಹಾಗೂ ರೋಗ ಲಕ್ಷಣಗಳು ಕಡಿಮೆಯಾಗುತ್ತವೆ.
- 'ಉಷ್ಣೋದಕ ಕೂಡ ಕಾಯಿಲೆ ನಿವಾರಿಸಲು ಸಹಕಾರಿ. ಒಂದು ಲೀಟರ್ ನೀರನ್ನು ಸಣ್ಣ ಬೆಂಕಿಯಲ್ಲಿ ಅರ್ಧವಾಗುವಷ್ಟು ಕುದಿಸಬೇಕು. ಅದನ್ನು ಸೇವಿಸುವುದರಿಂದ ಜ್ವರ ಸೇರಿದಂತೆ ವಿವಿಧ ಸಮಸ್ಯೆಗಳು ನಿವಾರಣೆಯಾಗುತ್ತವೆ.
- ನೆಲನೆಲ್ಲಿ, ಅಮೃತಬಳ್ಳಿ ಅಥವಾ ಭದ್ರಮುಷ್ಠಿಯನ್ನು ಚಹ ಮಾಡಿ ಕುಡಿಯಬಹುದು.

ಡಾ. ಗಿರಿಧರ ಕಜೆ, ಆಯುರ್ವೇದ ತಜ್ಞ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ

ಕೂಳೆ	900-9050
ನಡುಗೋಲು	1000-1050
ರಾಶಿ	1200-1300
ರಾಶಿ ಉತ್ತಮ	1300-1400
ಜರಡಿ	1500-1550
ಹೆರಕಿದ್ದು	1900-2000
ಹಸಿರು ಸಾಧಾರಣ	1300-1400
ಹಸಿರು ಉತ್ತಮ	1700-1750
ಹಸಿರು ಅತಿ ಉತ್ತಮ	1900-2000
ಕಾಳು ಮೆಣಸು	350

ಅಡಿಕೆ
ಬಂಟ್ವಾಳ

ಹೊಸತು	23500-40000
ಹಳತು	42500-50000

ಕುಮಟ

ಚಿಪ್ಪು	25200-31448
ಕೋಕ	14081-27224
ಹಳೆಚಾಲಿ	39649-40529
ಹೊಸಚಾಲಿ	35299-37099

ರಾಮನಗರ ರೇಷ್ಮೆ

ಮಿಶ್ರತಳಿ	192-342
ದ್ವಿತಳಿ	235-385

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	---	10375	--- ಸೆಂಟ್ಸ್
ಎಸಿ	---	---	4080	
ಆರ್‌ಪಿ	---	---	5175	
ಆರ್‌ಸಿ	---	---	2975	--- ಡಾಲರ್ಸ್

ಕೋವಿಡ್ ಬಿಕ್ಕಟ್ಟು: ಕೇಂದ್ರ ಮಂತ್ರಿ ಪರಿಷತ್ ಸಭೆ ಇಂದು

ನವದೆಹಲಿ: ದೇಶಾದ್ಯಂತ ಸೃಷ್ಟಿಯಾಗಿರುವ 'ಕೋವಿಡ್ 19' ಸಾಂಕ್ರಾಮಿಕ ಬಿಕ್ಕಟ್ಟಿನ ಕುರಿತು ಚರ್ಚಿಸಲು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಮಂತ್ರಿ ಪರಿಷತ್ತಿನ ಸಭೆ ಕರೆದಿದ್ದಾರೆ.

ಈ ಸಭೆಯಲ್ಲಿ, ಕೋವಿಡ್ ಸಾಂಕ್ರಾಮಿಕ ರೋಗದಿಂದ ಉಂಟಾಗಿರುವ ಭೀತಿಯನ್ನು ಎದುರಿಸುವುದು ಹಾಗೂ ನಾಗರಿಕರಿಗೆ ಧೈರ್ಯತುಂಬುವಂತೆ ತಮ್ಮ ಸಂಪುಟದ ಸಚಿವರಿಗೆ ಮೋದಿ ಸಲಹೆ ನೀಡುವ ಸಾಧ್ಯತೆ ಇದೆ.

ಪ್ರಧಾನಿ ಮೋದಿಯವರು ಗುರುವಾರವೂ ವಿವಿಧ ಸಚಿವರು, ಅಧಿಕಾರಿಗಳೊಂದಿಗೆ ವರ್ಚುವಲ್ ಸಭೆ ನಡೆಸಿದರು. ಶುಕ್ರವಾರ ನಡೆಯುವ ಸಭೆಯಲ್ಲೂ ಲಸಿಕೆಗಳ ಕೊರತೆ ಮತ್ತು ಲಸಿಕೆಗಳಿಗೆ ಏಕರೂಪದ ಬೆಲೆ ನಿಗದಿಪಡಿಸುವ ಕುರಿತು ಚರ್ಚೆಯಾಗುವ ಸಾಧ್ಯತೆ ಇದೆ.

14 ತಿಂಗಳ ಕಾಲ ಕೇಂದ್ರ ಸರ್ಕಾರ ಏನು ಮಾಡುತ್ತಿತ್ತು: ಮುಖ್ಯ ನ್ಯಾಯಮೂರ್ತಿ ಪ್ರಶ್ನೆ

ಕೇಂದ್ರಕ್ಕೆ ಮದ್ರಾಸ್ ಹೈಕೋರ್ಟ್ ತರಾಟೆ

ಚೆನ್ನೈ (ಪಿಟಿಐ): ಕೋವಿಡ್–19 ನಿಯಂತ್ರಿಸಲು ಕಠಿಣ ಕ್ರಮಗಳನ್ನು ಕೈಗೊಳ್ಳುವಲ್ಲಿ ಕೇಂದ್ರ ಸರ್ಕಾರ ವಿಫಲವಾಗಿದೆ ಎಂದು ಮದ್ರಾಸ್ ಹೈಕೋರ್ಟ್ ತರಾಟೆಗೆ ತೆಗೆದುಕೊಂಡಿದೆ. '14 ತಿಂಗಳ ಕಾಲ ಸರ್ಕಾರ ಏನು ಮಾಡುತ್ತಿತ್ತು' ಎಂದು ನ್ಯಾಯಾಲಯ ಪ್ರಶ್ನಿಸಿದೆ.

'ತಜ್ಞರ ಸಲಹೆಗಳ ಆಧಾರದ ಮೇಲೆ ಕಾರ್ಯನಿರ್ವಹಿಸಬೇಕೇ ಹೊರತು ತಾತ್ಕಾಲಿಕ ಉದ್ದೇಶಕ್ಕಾಗಿ ಅಲ್ಲ. ನಮಗೆ ಒಂದು ವರ್ಷ ಸಮಯಾವಕಾಶವಿತ್ತು. ಆದರೆ, ಈಗ ಏಪ್ರಿಲ್ ತಿಂಗಳಲ್ಲಿ ದಿಢೀರನೆ ಎಚ್ಚೆತ್ತುಕೊಂಡಿದ್ದೀರಿ' ಎಂದು ಮುಖ್ಯ ನ್ಯಾಯಮೂರ್ತಿ ಸಂಜೀವ್ ಬ್ಯಾನರ್ಜಿ ಹೇಳಿದ್ದಾರೆ.

ವೈರಸ್‌ನ ಎರಡನೇ ಅಲೆ ಬರುವುದು ಅನಿರೀಕ್ಷಿತವಾಗಿತ್ತು ಎಂದು ಹೆಚ್ಚುವರಿ ಸಾಲಿಸಿಟರಲ್ ಜನರಲ್ ಆರ್. ಶಂಕರನಾರಾಯಣ ಅವರು ಹೇಳಿಕೆಗೆ ನ್ಯಾಯಾಲಯ ತೀವ್ರ ಅಸಮಾಧಾನ ವ್ಯಕ್ತಪಡಿಸಿತು. ಲಸಿಕೆಗಳಿಗೆ ಯಾವ ಮಾನದಂಡಗಳ ಆಧಾರದ ಮೇಲೆ ದರ ನಿಗದಿಪಡಿಸಲಾಗಿದೆ ಮತ್ತು ಕೋವಿನ್ ಪೋರ್ಟಲ್‌ನಲ್ಲಿ ತಾಂತ್ರಿಕ ದೋಷ ಉಂಟಾಗಿರುವ ಬಗ್ಗೆಯೂ ಮುಖ್ಯ ನ್ಯಾಯಮೂರ್ತಿ ಪ್ರಶ್ನಿಸಿದರು. ಈ ಬಗ್ಗೆ ಶುಕ್ರವಾರ ಉತ್ತರ ನೀಡುವುದಾಗಿ ಹೆಚ್ಚುವರಿ ಸಾಲಿಸಿಟರಲ್ ಜನರಲ್ ಉತ್ತರಿಸಿದರು.

ಮುಖ್ಯ ನ್ಯಾಯಮೂರ್ತಿ ಬ್ಯಾನರ್ಜಿ ಮತ್ತು ನ್ಯಾಯಮೂರ್ತಿ ಸೆಂಥಿಲ್ ಕುಮಾರ್ ರಾಮಮೂರ್ತಿ ಅವರನ್ನೊಳಗೊಂಡ ಪೀಠವು ರೆಮ್‌ಡಿಸಿವಿರ್ ಲಸಿಕೆ ಕೊರತೆಯ ಬಗ್ಗೆ ನಡೆಸಿದ ವಿಚಾರಣೆ ಸಂದರ್ಭದಲ್ಲಿ ಈ ವಿಷಯಗಳನ್ನು ಪ್ರಸ್ತಾಪಿಸಿತು. ದಿನಪತ್ರಿಕೆಗಳ ವರದಿಗಳ ಆಧಾರದ ಮೇಲೆ ಈ ಪ್ರಕರಣದ ವಿಚಾರಣೆಯನ್ನು ನ್ಯಾಯಾಲಯ ಸ್ವಯಂಪ್ರೇರಣೆಯಿಂದ ಕೈಗೆತ್ತಿಕೊಂಡಿದೆ.

ಲಾಕ್‌ಡೌನ್ ಅಗತ್ಯವಿಲ್ಲ: ಮೇ 1 ಮತ್ತು 2ರಂದು ರಜೆ ಇರುವುದರಿಂದ ಆ ದಿನಗಳಂದು ಲಾಕ್‌ಡೌನ್ ಜಾರಿಗೊಳಿಸುವ ಅಗತ್ಯ ಇಲ್ಲ ಎಂದು ತಮಿಳುನಾಡು ಮತ್ತು ಪುದುಚೇರಿ ಸರ್ಕಾರಗಳೂ ಹೈಕೋರ್ಟ್‌ಗೆ ವಿವರಣೆ ನೀಡಿವೆ. ಲಾಕ್‌ಡೌನ್ ಜಾರಿಗೊಳಿಸುವ ಬಗ್ಗೆ ಪರಿಶೀಲಿಸಬೇಕು ಎಂದು ಹೈಕೋರ್ಟ್ ಸೂಚನೆ ನೀಡಿತ್ತು. ಹೀಗಾಗಿ, ಈ ವಿವರಣೆ ನೀಡಲಾಗಿದೆ.

ಮನೆಯಲ್ಲಿ ರೆಮ್‌ಡಿಸಿವಿರ್ ಪಡೆಯಬೇಡಿ: ಆರೋಗ್ಯ ಸಚಿವಾಲಯ

ನವದೆಹಲಿ (ಪಿಟಿಐ): ಕೋವಿಡ್ ದೃಢಪಟ್ಟಿದ್ದರೂ, ರೋಗ ಲಕ್ಷಣಗಳು ಕಾಣಿಸದಿರುವಂಥವರು ಮನೆಯಲ್ಲಿ ಪ್ರತ್ಯೇಕವಾಗಿ ವಾಸಿಸುತ್ತಿರುವವರಿಗೆ ಕೇಂದ್ರ ಆರೋಗ್ಯ ಸಚಿವಾಲಯ ಪರಿಷ್ಕೃತ ನಿಯಮಾವಳಿಗಳನ್ನು ರೂಪಿಸಿದೆ.

ಮನೆಯಲ್ಲಿಯೇ ರೆಮ್‌ಡಿಸಿವಿರ್ ಇಂಜೆಕ್ಷನ್‌ಗಳನ್ನು ಪಡೆಯುವುದು ಅಥವಾ ಸಂಗ್ರಹಿಸಿಟ್ಟುಕೊಳ್ಳಬಾರದು. ಆಸ್ಪತ್ರೆಯಲ್ಲಿ ಮಾತ್ರ ರೆಮ್‌ಡಿಸಿವಿರ್ ಪಡೆದುಕೊಳ್ಳಬೇಕು ಎಂದು ಕಟ್ಟುನಿಟ್ಟಾಗಿ ಸೂಚಿಸಿದೆ.

ಜ್ವರ, ಕೆಮ್ಮು ಮುಂತಾದ ಲಕ್ಷಣಗಳು ಏಳು ದಿನಗಳ ಬಳಿಕವೂ ಕಾಣಿಸಿಕೊಂಡರೆ ತಕ್ಷಣವೇ ವೈದ್ಯರನ್ನು ಸಂಪರ್ಕಿಸಬೇಕು. 60 ವರ್ಷಗಳ ಮೇಲ್ಪಟ್ಟ ರೋಗಿಗಳು ಮತ್ತು ಡಯಾಬಿಟಿಸ್, ಹೃದ್ರೋಗ ಸೇರಿದಂತೆ ಅನ್ಯಕಾಯಿಲೆಗಳು ಇರುವವರಿಗೆ ವೈದ್ಯಾಧಿಕಾರಿಯು ಸಮರ್ಪಕ ತಪಾಸಣೆ ನಡೆಸಿದ ಬಳಿಕವೇ ಮನೆಯಲ್ಲಿ ಪ್ರತ್ಯೇಕವಾಗಿ ವಾಸಿಸಲು ಅವಕಾಶ ಕಲ್ಪಿಸಬೇಕು ಎಂದು ನಿಯಮಾವಳಿಗಳಲ್ಲಿ ತಿಳಿಸಲಾಗಿದೆ.

ಎಂಟು ಗಂಟೆಗಳ ಕಾಲ ಮಾಸ್ಕ್ ಬಳಸಿದ ಬಳಿಕ ಮತ್ತೆ ಉಪಯೋಗಿಸಬಾರದು. ಒಂದು ವೇಳೆ, ಅದಕ್ಕೂ ಮುನ್ನವೇ ಹಸಿಯಾಗಿದ್ದರೂ ಬಳಸಬಾರದು. ಇಂತಹ ಮಾಸ್ಕ್‌ಗಳನ್ನು ಎಸೆಯುವ ಮುನ್ನ ಕಡ್ಡಾಯವಾಗಿ ಸೋಡಿಯಂ ಹೈಪೊಕ್ಲೋರೈಟ್ ಹಾಕಿ ಸೋಂಕಿನಿಂದ ಮುಕ್ತಗೊಳಿಸಬೇಕು ಎಂದು ಸೂಚಿಸಲಾಗಿದೆ.

ಉಸಿರಾಟದ ತೊಂದರೆಯಾದರೂ ತಕ್ಷಣವೇ ಆಸ್ಪತ್ರೆಗೆ ದಾಖಲಾಗಿ ವೈದ್ಯರ ನೆರವು ಪಡೆದುಕೊಳ್ಳಬೇಕು. ಸೋಂಕಿನ ಲಕ್ಷಣಗಳು ಕಾಣಿಸಿಕೊಂಡ ಬಳಿಕ ಮತ್ತು ಜ್ವರ ಕಡಿಮೆಯಾದ ಮೂರು ದಿನಗಳ ನಂತರ ಕನಿಷ್ಠ 10 ದಿನಗಳ ಕಾಲ ಮನೆಯಲ್ಲಿ ಪ್ರತ್ಯೇಕ ವಾಸ ಇರಬೇಕು ಎಂದು ಸೂಚಿಸಲಾಗಿದೆ.

ಮಾತ್ರೆಗಳಿಂದ ಜ್ವರ ಕಡಿಮೆಯಾಗದಿದ್ದರೆ ವೈದ್ಯರನ್ನು ಸಂಪರ್ಕಿಸಿ. ವೈದ್ಯರು ಇತರ ಔಷಧಗಳನ್ನು ಶಿಫಾರಸು ಮಾಡಬಹುದು ಎಂದು ತಿಳಿಸಿದೆ.

ಮೃತದೇಹ ಮುಂದಿಟ್ಟು ವಸೂಲಿ ಶಿಕ್ಷಾರ್ಹ

ಒಂದನೇ ಪುಟದಿಂದ...

ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ್ದ ಸರ್ಕಾರದ ವಕೀಲರು ಹಾಗೂ ಪೊಲೀಸ್ ಇಲಾಖೆ, ಖಾಸಗಿ ಆಸ್ಪತ್ರೆಗಳ ವಿರುದ್ಧ ಕ್ರಮ ಕೈಗೊಳ್ಳಲು ಕಾನೂನಿನಲ್ಲಿರುವ ಅವಕಾಶಗಳ ಬಗ್ಗೆ ಚರ್ಚೆ ನಡೆಸಿದ್ದರು. ನ್ಯಾಯಾಲಯಗಳು ನೀಡಿರುವ ತೀರ್ಪುಗಳು ಹಾಗೂ ಚಾಲ್ತಿಯಲ್ಲಿರುವ ಕಾನೂನಿನ್ವಯ ಆಸ್ಪತ್ರೆಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಅವಕಾಶವಿರುವುದು ಗಮನಕ್ಕೆ ಬಂದಿದೆ.

ಅಕ್ರಮ ಬಂಧನ, ಸುಲಿಗೆ ಪ್ರಕರಣ: 'ಬಿಲ್ ಪಾವತಿಸುವವರೆಗೂ ಒಳರೋಗಿ ಅಥವಾ ಮೃತದೇಹವನ್ನುಆಸ್ಪತ್ರೆಗಳು ಅಕ್ರಮವಾಗಿ ವಶದಲ್ಲಿಟ್ಟುಕೊಳ್ಳುವ ಅವಕಾಶ ಕಾನೂನಿನಲ್ಲಿ ಇಲ್ಲ. ಇಂಥ ಪ್ರಕರಣಗಳಲ್ಲಿ ಮೃತರ ಸಂಬಂಧಿಕರು ಧೈರ್ಯವಾಗಿ ಠಾಣೆಗೆ ದೂರು ನೀಡಬಹುದು' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಸರ್ಕಾರದ ವಕೀಲರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಆಸ್ಪತ್ರೆ ಆಡಳಿತ ಮಂಡಳಿ ಅಥವಾ ವೈದ್ಯ ಹಾಗೂ ಚಿಕಿತ್ಸೆ ಪಡೆಯುವ ರೋಗಿ ನಡುವೆ ಚಿಕಿತ್ಸೆ ಉದ್ದೇಶದ ಒಪ್ಪಂದವಾಗಿರುತ್ತದೆ. ಇದು ಭಾರತೀಯ ಕರಾರು ಕಾಯ್ದೆ ವ್ಯಾಪ್ತಿಗೆ ಬರುತ್ತದೆ. ಹೀಗಾಗಿ, ರೋಗಿ ಅಥವಾ ಮೃತದೇಹವನ್ನು ಆಸ್ಪತ್ರೆಯವರು ಬಿಲ್‌ಗಾಗಿ ಒತ್ತೆಯಾಗಿಟ್ಟುಕೊಳ್ಳಲು ಬರುವುದಿಲ್ಲ. ಬಿಲ್ ಪಡೆಯಬೇಕಾದರೆ ನ್ಯಾಯಾಲಯದಲ್ಲಿ ಸಿವಿಲ್ ಮೊಕದ್ದಮೆ ಹೂಡಬೇಕಾಗುತ್ತದೆ.'

'ಬಿಲ್ ಪಾವತಿಸಿಯೇ ಮೃತದೇಹ ಪಡೆಯಬೇಕೆಂದು ಆಸ್ಪತ್ರೆ ಅಥವಾ ವೈದ್ಯರು ಹೇಳಿದರೆ, ಅದು ಐಪಿಸಿ 340ರಡಿ (ಅಕ್ರಮ ಬಂಧನ) ಅಪರಾಧವಾಗುತ್ತದೆ. ಇಂಥ ಕೃತ್ಯಕ್ಕೆ ಐಪಿಸಿ 342ರಡಿ ಒಂದು ವರ್ಷದವರೆಗೂ ವಿಸ್ತರಿಸಬಹುದಾದ ಜೈಲು ಶಿಕ್ಷೆ ಇದೆ' ಎಂದೂ ವಕೀಲರು ಹೇಳಿದರು.

ಮೃತದೇಹವಾರಸುದಾರರಸ್ವತ್ತು: 'ಮೃತದೇಹವು ವಾರಸುದಾರರ ಸ್ವತ್ತು. ಅದನ್ನು ಹಸ್ತಾಂತರಿಸದೆ ಬಿಲ್ ವಸೂಲಿ ಮಾಡಿದರೆ ಐಪಿಸಿ 390ರಡಿ ಸುಲಿಗೆ ಎಂದು ಪರಿಗಣಿಸಿ ಪ್ರಕರಣ ದಾಖಲಿಸಿಕೊಳ್ಳಬಹುದು. ಈ ಅಪರಾಧಕ್ಕೆ 10 ವರ್ಷದವರೆಗೆ ಜೈಲು ಶಿಕ್ಷೆ ಹಾಗೂ ದಂಡ ವಿಧಿಸುವ ಅಧಿಕಾರ ನ್ಯಾಯಾಲಯಕ್ಕೆ ಇದೆ' ಎಂದೂ ಸರ್ಕಾರದ ವಕೀಲರೊಬ್ಬರು ತಿಳಿಸಿದರು.

'ಕೇರಳದ ರೋಗಿಯೊಬ್ಬರನ್ನು ಬಿಲ್ ಪಾವತಿಸಿಲ್ಲವೆಂಬ ಕಾರಣಕ್ಕೆ ಆಸ್ಪತ್ರೆಯವರು ಬಿಡುಗಡೆ ಮಾಡಿರಲಿಲ್ಲ. ಅದನ್ನು ಪ್ರಶ್ನಿಸಿ ಎಸ್. ರಿಜಾ ಎಂಬುವರು, ಕೇರಳದ ಮ್ಯೂಸಿಯಂ ಪೊಲೀಸ್ ಠಾಣೆ ಹಾಗೂ ತಿರುವನಂತಪುರಂನ ಎಸ್.ಕೆ. ಆಸ್ಪತ್ರೆ ಆಡಳಿತಾಧಿಕಾರಿ ವಿರುದ್ಧ ಹೈಕೋರ್ಟ್‌ಗೆ ರಿಟ್ ಅರ್ಜಿ ದಾಖಲಿಸಿದ್ದರು. 2020ರ ಅಕ್ಟೋಬರ್ 23ರಂದು ಆದೇಶ ಹೊರಡಿಸಿದ್ದ ಹೈಕೋರ್ಟ್, ಆಸ್ಪತ್ರೆಯವರಿಗೆ ಛೀಮಾರಿ ಹಾಕಿ ರೋಗಿಯನ್ನು ಬಿಡುಗಡೆ ಮಾಡಲು ಆದೇಶ ಹೊರಡಿಸಿತ್ತು.'

'ಆರೋಗ್ಯದಲ್ಲಿ ಚೇತರಿಕೆ ಕಂಡುಬಂದವರನ್ನು ತಮ್ಮ ಬಳಿಯೇ ಇಟ್ಟುಕೊಳ್ಳುವುದು ರೋಗಿಯ ಸಂವಿಧಾನಾತ್ಮಕ ಹಕ್ಕುಗಳನ್ನು ಕಸಿದುಕೊಂಡಂತೆ. ಪಾವತಿಸದ ಶುಲ್ಕವನ್ನು ಕಾನೂನಿನಡಿ ವಸೂಲಿಗೆ ಕ್ರಮ ಕೈಗೊಳ್ಳಬಹುದು ಎಂದು ಕೇರಳ ಹೈಕೋರ್ಟ್ ಆದೇಶದಲ್ಲಿ ತಿಳಿಸಿದೆ' ಎಂದರು.

ಭಾರತದಿಂದ ತಕ್ಷಣ ಹೊರಟು ಬರಲು ಅಮೆರಿಕನ್ನರಿಗೆ ಸಲಹೆ

ವಾಷಿಂಗ್ಟನ್: ಕೊರೊನಾ ಪ್ರಕರಣಗಳ ಸಂಖ್ಯೆ ಭಾರತದಲ್ಲಿ ಹೆಚ್ಚುತ್ತಿರುವ ಕಾರಣ ಆ ದೇಶಕ್ಕೆ ಪ್ರಯಾಣ ಮಾಡದಂತೆ ಅಮೆರಿಕ ತನ್ನ ಪ್ರಜೆಗಳಿಗೆ ಸಲಹೆ ನೀಡಿದೆ.

ಭಾರತದಲ್ಲಿ ಈಗ ಇರುವ ಆರೋಗ್ಯ ಪರಿಸ್ಥಿತಿಯ ಕಾರಣ ಸಾಧ್ಯವಾದರೆ ಆದಷ್ಟು ಬೇಗ ಅಲ್ಲಿಂದ ಹೊರಟು ಬರುವಂತೆ ತನ್ನ ದೇಶದ ಪ್ರಜೆಗಳಿಗೆ ಸೂಚನೆಯನ್ನೂ ನೀಡಿದೆ.

ಭಾರತದಿಂದ ವಾಪಸ್ ಬರಬೇಕೆಂದು ಬಯಸುವ ಅಮೆರಿಕನ್ನರು ಪ್ಯಾರಿಸ್ ಮತ್ತು ಫ್ರಾಂಕ್‌ಫರ್ಟ್ ವಿಮಾನ ಮಾರ್ಗವನ್ನು ಬಳಸಿಕೊಳ್ಳಬಹುದು ಎಂದು ವಿದೇಶಾಂಗ ಸಚಿವಾಲಯ ಟ್ವೀಟ್ ಮಾಡಿದೆ.

ಕೊರೊನಾ ಸೋಂಕು ಪ್ರಮಾಣ ಹೆಚ್ಚುತ್ತಿರುವ ಕಾರಣ ಭಾರತದಲ್ಲಿ ಎಲ್ಲಾ ರೀತಿಯ ವೈದ್ಯಕೀಯ ಸೌಲಭ್ಯಗಳು ಸೀಮಿತ ಪ್ರಮಾಣದಲ್ಲಿ ಲಭ್ಯವಾಗುತ್ತಿವೆ ಎಂದು ನವದೆಹಲಿಯಲ್ಲಿರುವ ಅಮೆರಿಕದ ರಾಯಭಾರ ಕಚೇರಿ ಹೇಳಿದೆ.

ಪ್ರಯಾಣ ನಿರ್ಬಂಧ ಮತ್ತು ಈಚಿನ ಮಾಹಿತಿಗಳಿಗಾಗಿ ಅಮೆರಿಕ ಪ್ರಜೆಗಳು ಭಾರತದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ವೆಬ್‌ಸೈಟ್ ನೋಡುವಂತೆ ರಾಯಭಾರ ಕಚೇರಿ ತಿಳಿಸಿದೆ.

₹ 740 ಕೋಟಿ ಪರಿಹಾರ ಸಾಮಗ್ರಿ

ವಾಷಿಂಗ್ಟನ್ (ಪಿಟಿಐ): ಕೋವಿಡ್–19 ಪಿಡುಗಿನ ವಿರುದ್ಧ ಹೋರಾಡುತ್ತಿರುವ ಭಾರತಕ್ಕೆ ₹ 740 ಕೋಟಿ ಮೌಲ್ಯದ (100 ದಶಲಕ್ಷ ಡಾಲರ್) ಪರಿಹಾರ ಸಾಮಗ್ರಿಗಳನ್ನು ಕಳುಹಿಸಲಾಗುವುದು ಎಂದು ಶ್ವೇತಭವನ ತಿಳಿಸಿದೆ.

ವಿಶ್ವದ ಬೃಹತ್ ಯುದ್ಧವಿಮಾನವು ಟ್ರಾವಿಸ್ ವಾಯುನೆಲೆಯಿಂದ ಸಾಮಗ್ರಿಗಳನ್ನು ತೆಗೆದುಕೊಂಡು ಹೊರಟಿದೆ ಎಂದು ಯುಎಸ್ ಏಜೆನ್ಸಿ ಫಾರ್ ಇಂಟರ್‌ನ್ಯಾಷನಲ್ ಡೆವಲಪ್‌ಮೆಂಟ್ ಹೇಳಿದೆ.

ಈ ಪರಿಹಾರ ಸಾಮಗ್ರಿಗಳನ್ನು ಕ್ಯಾಲಿಫೋರ್ನಿಯಾ ರಾಜ್ಯ ನೀಡಿದೆ. 440 ಆಮ್ಲಜನಕ ಸಿಲಿಂಡರ್‌ಗಳು, ನಿಯಂತ್ರಕಗಳು, 9,60,000 ರ‍್ಯಾಪಿಡ್ ಡಯಾಗ್ನೊಸ್ಟಿಕ್ ಟೆಸ್ಟ್ ಕಿಟ್‌ಗಳು, 1 ಲಕ್ಷ ಎನ್–95 ಮಾಸ್ಕ್‌ಗಳನ್ನು ಈ ಮೊದಲ ವಿಮಾನ ಹೊತ್ತೊಯ್ದಿದೆ ಎಂದು ಸಂಸ್ಥೆ ತಿಳಿಸಿದೆ.

'ಬರುವ ದಿನಗಳಲ್ಲಿ ಆಕ್ಸಿಜನ್ ಜನರೇಶನ್ ಯುನಿಟ್ (ಪಿಎಸ್‌ಎ ಸಿಸ್ಟಂಸ್), 1.5 ಕೋಟಿ ಎನ್–95 ಮಾಸ್ಕ್‌ಗಳು ಸೇರಿದಂತೆ ಇತರ ಸಾಮಗ್ರಿಗಳನ್ನು ಭಾರತಕ್ಕೆ ನೀಡಲಾಗುತ್ತದೆ' ಎಂದೂ ಶ್ವೇತಭವನ ಪ್ರಕಟಣೆ ತಿಳಿಸಿದೆ.

ಸ್ಮಶಾನಗಳಲ್ಲಿ 24 ಗಂಟೆ ಗುಂಡಿ ತೋಡುವ ಕೆಲಸ

ರಮ್ಜಾನ್‌ನಲ್ಲೂ ತಪ್ಪದ ಕಾಯಕ

ಮುಂಬೈ: ದೇಶದಲ್ಲಿ ಕೊರೊನಾ ಸಾಂಕ್ರಾಮಿಕದ ಭೀಕರ ಪರಿಸ್ಥಿತಿ ಯಾವ ಹಂತದಲ್ಲಿದೆ ಎಂಬುದಕ್ಕೆ ಈ ಪ್ರಕರಣ ಸಾಕ್ಷಿ. ಮುಂಬೈನಲ್ಲಿ ಸ್ಮಶಾನಕ್ಕೆ ಬರುತ್ತಿರುವ ನೂರಾರು ಶವಗಳ ಅಂತ್ಯ ಸಂಸ್ಕಾರಕ್ಕೆ 24 ಗಂಟೆ ಗುಂಡಿ ತೋಡುವವರು ಕೆಲಸ ಮಾಡುತ್ತಿದ್ದಾರೆ.

ಈ ಮಧ್ಯೆ, ನಿಡತ್ಯ ಗುಂಡಿ ತೋಡುವ ಸಯ್ಯೆದ್ ಮುನೀರ್ ಕಮ್ರುದ್ದೀನ್ ಎಂಬ ಕಾರ್ಮಿಕ ಕೆಲಸದ ಒತ್ತಡದಲ್ಲಿ ವೈಯಕ್ತಿಕ ರಕ್ಷಣಾ ಕಿಟ್ ಮತ್ತು ಗ್ಲೌಸ್‌ಗಳನ್ನು ಬಿಟ್ಟು ಎಂದಿನ ಕಾಯಕಕ್ಕೆ ಮುಂದಾಗುತ್ತಿದ್ದಾರೆ.

'ನಾನು ಕೋವಿಡ್‌ಗೆ ಹೆದರುವುದಿಲ್ಲ, ನಾನು ಧೈರ್ಯದಿಂದ ಕೆಲಸ ಮಾಡಿದ್ದೇನೆ. ಇದು ಧೈರ್ಯದ ವಿಷಯ, ಭಯದ್ದಲ್ಲ' ಎಂದು 25 ವರ್ಷಗಳಿಂದ ನಗರದ ಸ್ಮಶಾನದಲ್ಲಿ ಗುಂಡಿ ತೆಗೆಯುತ್ತಿರುವ 52 ವರ್ಷದ ಸಯ್ಯೆದ್ ಹೇಳುತ್ತಾರೆ.

ನಾನು ಮತ್ತು ನನ್ನ ಸಹಚರರು 24 ಗಂಟೆ ಕೋವಿಡ್ ರೋಗಿಗಳ ಅಂತ್ಯಸಂಸ್ಕಾರದ ಕೆಲಸದಲ್ಲಿ ತೊಡಗಿದ್ದೇವೆ ಎಂದು ಕಮ್ರುದ್ದೀನ್ ರಾಯಿಟರ್ಸ್‌ಗೆ ತಿಳಿಸಿದ್ದಾರೆ.

'ಇದು ನಮ್ಮ ಏಕೈಕ ಕೆಲಸ. ಮೃತದೇಹವನ್ನು ಆಂಬುಲೆನ್ಸ್‌ನಿಂದ ತೆಗೆಯುವುದು, ನಂತರ ಅದನ್ನು ಸಮಾಧಿ ಮಾಡುವುದು' ಎಂದು ಅವರು ಹೇಳಿದರು, ಒಂದು ವರ್ಷದಿಂದ ನಾವು ರಜೆ ಪಡೆದಿಲ್ಲ' ಎಂದು ತಿಳಿಸಿದ್ದಾರೆ.

ರಮ್ಜಾನ್ ತಿಂಗಳಾದರೂ ಮೃತದೇಹಗಳ ಸಂಸ್ಕಾರದ ಕೆಲಸದಲ್ಲಿ ತೊಡಗಿಸಿಕೊಂಡಿರುವುದರಿಂದ ಉಪವಾಸ ಮಾಡಲಾಗುತ್ತಿಲ್ಲ.

'ನಮ್ಮ ಕೆಲಸ ತುಂಬಾ ಕಠಿಣ. ಗುಂಡಿ ತೋಡಬೇಕು. ಶವಗಳನ್ನು ತಂದು ಮಣ್ಣು ಮಾಡಬೇಕು. ಈ ಸಮಯದಲ್ಲಿ ಬಾಯಾರಿಕೆ ಆಗೇ ಆಗುತ್ತದೆ. ಹೀಗಿರುವಾಗ, ಉಪವಾಸ ಮಾಡಲು ಹೇಗೆ ಸಾಧ್ಯ?' ಎಂದು ಕಮ್ರುದ್ದೀನ್ ಹೇಳಿದ್ದಾರೆ.

ಒಟ್ಟಿನಲ್ಲಿ ಕೋವಿಡ್‌ನಿಂದ ಜನರ ಸಾವಿನ ಸಂಖ್ಯೆ ಎಷ್ಟರಮಟ್ಟಿಗೆ ಹೆಚ್ಚಿದೆ ಎಂದರೆ, ಸ್ಮಶಾನಗಳಲ್ಲಿ ಗುಂಡಿ ತೋಡುವವರಿಗೂ ಬಿಡುವಿಲ್ಲ.

ಕೋವಿಡ್ 2ನೇ ಅಲೆಗೆ ಸಿಲುಕಿರುವ ದೇಶದಲ್ಲಿ ಸದ್ಯ ನಿತ್ಯ 3 ಲಕ್ಷಕ್ಕೂ ಅಧಿಕ ಪಾಸಿಟಿವ್ ಪ್ರಕರಣಗಳು ಕಂಡುಬರುತ್ತಿವೆ.



ಜಾರ್ಖಂಡ್‌ನ ರಾಂಚಿಯಲ್ಲಿರುವ ಸ್ವರ ಘಾಟ್‌ನಲ್ಲಿ ಕೋವಿಡ್‌ನಿಂದ ಮೃತಪಟ್ಟವರಿಗೆ ಅವರ ಸಂಬಂಧಿಕರು ಅಂತಿಮ ಸಂಸ್ಕಾರ ನಡೆಸಿದರು —ಪಿಟಿಐ ಚಿತ್ರ

ಚಾರ್‌ಧಾಮ್ ಯಾತ್ರೆ ಮುಂದೂಡಿಕೆ

ಡೆಹ್ರಾಡೂನ್: 'ಉತ್ತರಾಖಂಡದ ಹಿಮಾಲಯದ ನಾಲ್ಕು ಪ್ರಸಿದ್ಧ ಕ್ಷೇತ್ರಗಳಿಗೆ ಮುಂದಿನ ತಿಂಗಳಿನಿಂದ ಆರಂಭವಾಗಬೇಕಿದ್ದ 'ಚಾರ್‌ಧಾಮ್ ಯಾತ್ರೆ'ಯನ್ನು ಮುಂದೂಡಲಾಗಿದೆ' ಎಂದು ಉತ್ತರಾಖಂಡ ಮುಖ್ಯಮಂತ್ರಿ ತೀರಥ್‌ಸಿಂಗ್ ರಾವತ್ ತಿಳಿಸಿದ್ದಾರೆ.

ಕೋವಿಡ್ ಪ್ರಕರಣಗಳು ಹೆಚ್ಚಾಗುತ್ತಿರುವ ನಡುವೆ ಚಾರ್‌ಧಾಮ್ ಯಾತ್ರೆ ನಡೆಸಲು ಸಾಧ್ಯವಿಲ್ಲ ಎಂದು ಮುಖ್ಯಮಂತ್ರಿ ಗುರುವಾರ ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

17 ವೈದ್ಯಕೀಯ ಸಾಧನಗಳ ಆಮದಿಗೆ ಕೇಂದ್ರ ಅನುಮತಿ

ನವದೆಹಲಿ (ಪಿಟಿಐ): ಆಮ್ಲಜನಕ ತುಂಬಿರುವ ಚಿಕ್ಕ ಸಿಲಿಂಡರ್ (ಕ್ಯಾನಿಸ್ಟರ್) ಸೇರಿದಂತೆ 17 ಬಗೆಯ ವೈದ್ಯಕೀಯ ಸಾಧನಗಳನ್ನು ಕೆಲವು ನಿಬಂಧನೆಗಳಿಗೆ ಒಳಪಟ್ಟು, ಆಮದು ಮಾಡಿಕೊಳ್ಳಲು ಕೇಂದ್ರ ಸರ್ಕಾರ ಗುರುವಾರ ಅನುಮತಿ ನೀಡಿದೆ.

ಮೂರು ತಿಂಗಳ ಅವಧಿಗೆ ಆಮದಿಗೆ ಅವಕಾಶ ನೀಡಲಾಗಿದೆ. ಆಮದು ಮಾಡಿಕೊಂಡಿರುವ ಸಾಧನ/ ವಸ್ತುಗಳನ್ನು ದೇಶೀಯ ಮಾರಕಟ್ಟೆಯಲ್ಲಿ ಮಾರಾಟ ಮಾಡುವ ಮುನ್ನ ವ್ಯವಹಾರಕ್ಕೆ ಸಂಬಂಧಿಸಿದ ಮಾಹಿತಿಯನ್ನು ಕಡ್ಡಾಯವಾಗಿ ಒದಗಿಸಬೇಕು ಎಂದು ಸರ್ಕಾರ ಹೇಳಿದೆ.

ಕೋವಿಡ್ ಪ್ರಕರಣ ಹೆಚ್ಚುತ್ತಿವೆ. ವೈದ್ಯಕೀಯ ಸಾಧನ, ಔಷಧಿಗಳಿಗೆ ಬೇಡಿಕೆಯೂ ಹೆಚ್ಚಿದೆ. ಹೀಗಾಗಿ, ನೆಬುಲೈಜರ್, ಆಕ್ಸಿಜನ್ ಕಾನ್ಸಂಟ್ರೇಟರ್‌ಗಳು, ಆಕ್ಸಿಜನ್ ಕ್ಯಾನಿಸ್ಟರ್, ವೆಂಟಿಲೇಟರ್ ಸೇರಿದಂತೆ ವಿವಿಧ ಸಾಧನಗಳನ್ನು ಆಮದು ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ.

ಆತ್ಮಹತ್ಯೆಗೆ ಪ್ರಚೋದನೆ: ಹಿರಿಯ ಅರಣ್ಯಾಧಿಕಾರಿ ಬಂಧನ

ಮುಂಬೈ: ಸಹೋದ್ಯೋಗಿಯೊಬ್ಬರ ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಆರೋಪಕ್ಕಾಗಿ ಹಿರಿಯ ಐಎಫ್‌ಎಸ್ ಅಧಿಕಾರಿ ಎಂ. ಶ್ರೀನಿವಾಸ್ ರೆಡ್ಡಿ ಅವರನ್ನು ಅಮರಾವತಿ ಪೊಲೀಸರು ಗುರುವಾರ ಬಂಧಿಸಿದ್ದಾರೆ.

ಅಮರಾವತಿಯಲ್ಲಿನ ಮೇಲಘಾಟ್ ಹುಲಿ ಸಂರಕ್ಷಿತಾರಣ್ಯಕ್ಕೆ ನಿಯೋಜಿಸಲಾಗಿದ್ದ ವಲಯ ಅರಣಾಧಿಕಾರಿ ದೀಪಾಲಿ ಚವ್ಹಾಣ್ (33) ರಿವಾಲ್ವರ್‌ನಿಂದ ಗುಂಡು ಹಾರಿಸಿಕೊಂಡು ಮಾರ್ಚ್ 25ರಂದು ಆತ್ಮಹತ್ಯೆ ಮಾಡಿಕೊಂಡಿದ್ದರು. 'ಲೇಡಿ ಸಿಂಗಂ' ಎಂದೇ ಅವರು ಖ್ಯಾತಿ ಪಡೆದಿದ್ದರು. ತಮ್ಮ ಸಾವಿಗೆ ವಿಭಾಗೀಯ ಅಗ್ನಿಶಾಮಕ ಅಧಿಕಾರಿ ವಿನೋದ ಶಿವಕುಮಾರ್ ಕಾರಣ ಎಂದು ಆತ್ಮಹತ್ಯೆಗೆ ಮುನ್ನ ಬರೆದಿದ್ದ ಪತ್ರದಲ್ಲಿ ತಿಳಿಸಿದ್ದರು. ಈ ಪತ್ರವನ್ನು ರೆಡ್ಡಿ ಅವರನ್ನು ಉದ್ದೇಶಿಸಿ ಬರೆಯಲಾಗಿತ್ತು. ಶಿವಕುಮಾರ್ ಅವರನ್ನು ಮಾರ್ಚ್ 26ರಂದು ಬಂಧಿಸಲಾಗಿತ್ತು.

ಬಳಿಕ, ರೆಡ್ಡಿ ಅವರನ್ನು ವರ್ಗಾವಣೆ ಮಾಡಿ ಅಮಾನತುಗೊಳಿಸಲಾಗಿತ್ತು.

ಹಿರಿಯ ನಟ ರಣಧೀರ್ ಕಪೂರ್‌ಗೆ ಕೋವಿಡ್



ಮುಂಬೈ: ಬಾಲಿವುಡ್‌ನ ಹಿರಿಯ ನಟ ರಣಧೀರ್ ಕಪೂರ್ ಅವರಿಗೆ ಕೋವಿಡ್–19 ದೃಢಪಟ್ಟಿದ್ದು, ಅವರನ್ನು ಇಲ್ಲಿನ ಕೋಕಿಲಾ ಬೆನ್ ಆಸ್ಪತ್ರೆಗೆ ದಾಖಲಿಸಲಾಗಿದೆ.

'74 ವರ್ಷದ ರಣಧೀರ್ ಅವರನ್ನು ಬುಧವಾರ ರಾತ್ರಿ ಆಸ್ಪತ್ರೆಗೆ ದಾಖಲಿಸಿದ್ದು, ಅವರ ಆರೋಗ್ಯ ಸ್ಥಿತಿ ಸ್ಥಿರವಾಗಿದೆ' ಎಂದು ಕೋಕಿಲಾ ಬೆನ್ ಆಸ್ಪತ್ರೆಯ ವೈದ್ಯರಾದ ಡಾ. ಸಂತೋಷ್ ಶೆಟ್ಟಿ ತಿಳಿಸಿದ್ದಾರೆ.

1.31 ಲಕ್ಷ ಪಡಿತರ ಚೀಟಿಗಳೇ ಅನರ್ಹ

ಒಂದನೇ ಪುಟದಿಂದ...

ಪಡಿತರ ಚೀಟಿ ಜೊತೆ ಲಿಂಕ್ ಆಗಿರುವ ಫಲಾನುಭವಿಗಳ 'ಆಧಾರ್' ಸಂಖ್ಯೆ ಆಧರಿಸಿ, ಆದಾಯ ತೆರಿಗೆ ಪಾವತಿದಾರರ ಮತ್ತು ಸಾಮಾಜಿಕ ಪಿಂಚಣಿ ಪಡೆಯುವವರ ಹೆಸರುಗಳನ್ನು ಪಡೆದುಕೊಂಡು ಇಲಾಖೆ ಪರಿಶೀಲನೆ ನಡೆಸಿದೆ. ಈ ವೇಳೆ ಅನರ್ಹ ಪಡಿತರ ಚೀಟಿದಾರರನ್ನು ಗುರುತಿಸಿದೆ.

ಇಂಥ ಪಡಿತರ ಚೀಟಿದಾರರು ಈವರೆಗೆ ಪಡೆದ ಆಹಾರಧಾನ್ಯದ ಮೌಲ್ಯ ಲೆಕ್ಕ ಹಾಕಿ ದಂಡ ವಸೂಲು ಮಾಡಲು ಮತ್ತು ದಂಡ ಪಾವತಿಸದಿದ್ದರೆ ಕ್ರಿಮಿನಲ್ ಪ್ರಕರಣ ದಾಖಲಿಸಲು ಇಲಾಖೆ ನಿರ್ಧರಿಸಿದೆ.

'ಅನರ್ಹರು' ಇನ್ನೂ ಇದ್ದಾರೆ!: ಸರ್ಕಾರ ನಿಗದಿಪಡಿಸಿದ ಮಾನದಂಡದ ಪ್ರಕಾರ, ಮೂರು ಹೆಕ್ಟೇರ್ ಜಮೀನು ಹೊಂದಿರುವವರು, ನಗರಗಳಲ್ಲಿ 1 ಸಾವಿರ ಚದರ ವಿಸ್ತೀರ್ಣದ ಮನೆ ಇರುವವರು, ₹ 1.20 ಲಕ್ಷ ಹೆಚ್ಚು ಆದಾಯ ಹೊಂದಿರುವವರು ಎಎವೈ, ಬಿಪಿಎಲ್ ಕಾರ್ಡ್ ಪಡೆಯಲು ಅರ್ಹರಲ್ಲ. ಆದರೆ, ಜಮೀನು ಮತ್ತು ಮನೆ ಹೊಂದಿದ 2.27 ಲಕ್ಷ ಮತ್ತು ನಿಗದಿಪಡಿಸಿದ್ದಕ್ಕಿಂತ ಹೆಚ್ಚು ಆದಾಯ ಹೊಂದಿರುವ 49 ಸಾವಿರ ಮಂದಿಯ ಬಳಿ ಎಎವೈ, ಬಿಪಿಎಲ್ ಪಡಿತರಚೀಟಿ ಇರುವುದನ್ನು ಇಲಾಖೆ ಪತ್ತೆ ಮಾಡಿದೆ.

ಈ ಪಡಿತರ ಚೀಟಿಗಳು ಅನರ್ಹವೆಂದು ಖಚಿತವಾಗಿದ್ದರೂ, ಇನ್ನಷ್ಟು ಪರಿಶೀಲನೆಯ ಬಳಿಕ ಕ್ರಮ ತೆಗೆದುಕೊಳ್ಳಲು ಇಲಾಖೆ ತೀರ್ಮಾನಿಸಿದೆ. ಕನಿಷ್ಠ ಬೆಂಬಲ ಪಡೆಯಲು ಸಲ್ಲಿಸಿದ ದಾಖಲೆ ಸಲ್ಲಿಸುವ ವೇಳೆ ನೀಡಿದ ಆಧಾರ್ ಸಂಖ್ಯೆ ಮತ್ತು ಆದಾಯ ಪ್ರಮಾಣ ಪತ್ರ ಪರಿಶೀಲಿಸಿದಾಗ ಈ 'ಅನರ್ಹ' ಪಡಿತರ ಚೀಟಿದಾರರು ಪತ್ತೆಯಾಗಿದ್ದಾರೆ ಎಂದು ಇಲಾಖೆಯ ಮೂಲಗಳು ತಿಳಿಸಿವೆ.

ಕೋವಿಡ್: ಹಾಜಿ ರಿಯಾಜ್, ಐಎಎಸ್ ಅಧಿಕಾರಿ ನಿಧನ

ಲಖನೌ (ಪಿಟಿಐ): ಕೊರೊನಾ ಸೋಂಕಿನಿಂದಾಗಿ ಮಾಜಿ ಸಚಿವ ಹಾಜಿ ರಿಯಾಜ್ ಅಹ್ಮದ್ ಮತ್ತು ಹಿರಿಯ ಐಎಎಸ್ ಅಧಿಕಾರಿ ದೀಪಕ್ ತ್ರಿವೇದಿ ಅವರು ಗುರುವಾರ ನಿಧನರಾಗಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಸಮಾಜವಾದಿ ಪಕ್ಷದ ನಾಯಕ ಹಾಜಿ ಜಿಯಾಜ್ ಅಹ್ಮದ್(69) ಬರೇಲಿ ಆಸ್ಪತ್ರೆಯಲ್ಲಿ ನಿಧನರಾಗಿದ್ದಾರೆ ಎಂದು ಅವರ ಅಳಿಯ ಆರೀಫ್ ತಿಳಿಸಿದ್ದಾರೆ.

ಪಿಲಿಭಿಟ್ ಕ್ಷೇತ್ರದಿಂದ ಐದು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದ ಅಹ್ಮದ್, ಮುಲಾಯಂ ಸಿಂಗ್ ಯಾದವ್ ಮತ್ತು ಅಖಿಲೇಶ್ ಯಾದವ್ ಅವರ ನೇತೃತ್ವದ ಸರ್ಕಾರದಲ್ಲಿ ಸಚಿವರಾಗಿದ್ದರು. ದೀಪಕ್ ತ್ರಿವೇದಿ(59) ಸಂಜಯ್ ಗಾಂಧಿ ವೈದ್ಯಕೀಯ ವಿಜ್ಞಾನಗಳ ಸ್ನಾತಕೋತ್ತರ ಸಂಸ್ಥೆಯಲ್ಲಿ ನಿಧನರಾಗಿದ್ದಾರೆ.

'ಬಂಗಾಳಕ್ಕೆ ದೀದಿ, ತಮಿಳುನಾಡಲ್ಲಿ ಸ್ಟಾಲಿನ್'


ಒಂದನೇ ಪುಟದಿಂದ...

ಎಲ್‌ಡಿಎಫ್‌ಗೆ ಕಳೆದ ಬಾರಿಯಷ್ಟು (91) ಕ್ಷೇತ್ರಗಳಲ್ಲಿ ಗೆಲುವು ಅಸಾಧ್ಯವಾದರೂ ಸತತ ಎರಡನೇ ಅವಧಿಗೆ ಅಧಿಕಾರ ಉಳಿಯಲಿದೆ. ಕಳೆದ ಚುನಾವಣೆಗೆ ಹೋಲಿಸಿದರೆ ಯುಡಿಎಫ್‌ಗೆ ಹೆಚ್ಚಿನ ಆರು ಕ್ಷೇತ್ರಗಳಲ್ಲಿ ಗೆಲುವುದು ದೊರೆಯಬಹುದು. ಆದರೆ, ಅಧಿಕಾರದ ಹತ್ತಿರಕ್ಕೆ ಬರಲಾಗದು.

ಕಳೆದ ಲೋಕಸಭಾ ಚುನಾವಣೆಯಲ್ಲಿ ಇಲ್ಲಿನ 20 ಕ್ಷೇತ್ರಗಳ ಪೈಕಿ 19ರಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಿತ್ತು. ಅದಲ್ಲದೆ, ಕೆಲವು ದಶಕಗಳಿಂದ ಇಲ್ಲಿ ಎಲ್‌ಡಿಎಫ್ ಮತ್ತು ಯುಡಿಎಫ್ ಪರ್ಯಾಯವಾಗಿ ಅಧಿಕಾರಕ್ಕೆ ಬರುವುದು ಒಂದು ಪದ್ಧತಿಯೇ ಆಗಿಬಿಟ್ಟಿದೆ. ಈ ಎರಡು ಕಾರಣಗಳಿಂದಾಗಿ ಯುಡಿಎಫ್‌ಗೆ ಇಲ್ಲಿ ಅಧಿಕಾರಕ್ಕೆ ಬರುವ ವಿಶ್ವಾಸ ಇತ್ತು. ಅದು ಸಾಧ್ಯವಾಗದು ಎಂಬ ಸುಳಿವನ್ನು ಸಮೀಕ್ಷೆಗಳ ಸರಾಸರಿಯು ನೀಡುತ್ತಿದೆ.

ತಮಿಳುನಾಡಿನಲ್ಲಿ ಡಿಎಂಕೆ ನೇತೃತ್ವದ ಮೈತ್ರಿಕೂಟವು ಜಯಭೇರಿ ಬಾರಿಸಲಿದೆ ಎಂಬುದು ಸಮೀಕ್ಷೆಗಳ ಅಂದಾಜು. 234 ಕ್ಷೇತ್ರಗಳ ಪೈಕಿ 171ರಲ್ಲಿ ಈ ಮೈತ್ರಿಕೂಟ ಗೆಲ್ಲಲಿದೆ. ಈಗ ಅಧಿಕಾರದಲ್ಲಿ ಇರುವ ಎಐಎಡಿಎಂಕೆ ನೇತೃತ್ವದ ಮೈತ್ರಿಕೂಟವು 59 ಕ್ಷೇತ್ರಗಳಲ್ಲಿ ಗೆಲ್ಲಬಹುದು ಎನ್ನಲಾಗಿದೆ. ಈ ಮೈತ್ರಿಕೂಟದಲ್ಲಿ ಬಿಜೆಪಿ ಕೂಡ ಇದೆ.

ಕೋವಿಡ್‌ನಿಂದ ಮನಮೋಹನ್ ಸಿಂಗ್ ಗುಣಮುಖ



ನವದೆಹಲಿ(ಪಿಟಿಐ): ಕೋವಿಡ್ ಸೋಂಕಿಗೆ ಒಳಗಾಗಿ ದೆಹಲಿಯ ಏಮ್ಸ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಮಾಜಿ ಪ್ರಧಾನಿ ಮನಮೋಹನ್ ಸಿಂಗ್ (88) ಅವರು ಚೇತರಿಸಿಕೊಂಡಿದ್ದು, ಗುರುವಾರ ಆಸ್ಪತ್ರೆಯಿಂದ ಮನೆಗೆ ತೆರಳಿದ್ದಾರೆ. ಸೋಂಕು ಕಾಣಿಸಿಕೊಂಡ ಕಾರಣಕ್ಕೆ ಏಪ್ರಿಲ್ 19ರಂದು ಅವರು ಆಸ್ಪತ್ರೆಗೆ ದಾಖಲಾಗಿದ್ದರು.

ಮನಮೋಹನ್ ಸಿಂಗ್ ಅವರು ಆರೋಗ್ಯದಿಂದ ಇದ್ದಾರೆ ಎಂದು ಕಾಂಗ್ರೆಸ್ ಪಕ್ಷದ ಮೂಲಗಳು ತಿಳಿಸಿವೆ. ಮನಮೋಹನ್ ಸಿಂಗ್ ಅವರು ಮಾರ್ಚ್ 4ರಂದು ಕೋವಿಡ್–19 ಲಸಿಕೆಯ ಮೊದಲ ಡೋಸ್ ಹಾಕಿಸಿಕೊಂಡಿದ್ದರು. ನಂತರ, ಏಪ್ರಿಲ್ 3ರಂದು ಎರಡನೇ ಡೋಸ್ ಹಾಕಿಸಿಕೊಂಡಿದ್ದರು.

3.5 ಲಕ್ಷ ವೈದ್ಯಕೀಯ ಸಿಬ್ಬಂದಿ ಬೇಕು: ಖ್ಯಾತ ವೈದ್ಯ ಡಾ. ದೇವಿಶೆಟ್ಟಿ

'5 ಲಕ್ಷ ಐಸಿಯು ಹಾಸಿಗೆಗಳು ಅಗತ್ಯ'

ಪುಣೆ(ಪಿಟಿಐ): ಕೋವಿಡ್–19 ಸಾಂಕ್ರಾಮಿಕ ಕಾಯಿಲೆಯಿಂದ ಈಗ ಹದಗೆಟ್ಟಿರುವ ಪರಿಸ್ಥಿತಿ ಮುಂದಿನ ದಿನಗಳಲ್ಲಿ ಮತ್ತಷ್ಟು ಬಿಗಡಾಯಿಸಲಿದೆ ಎಂದು ಖ್ಯಾತ ವೈದ್ಯ ಡಾ. ದೇವಿ ಪ್ರಸಾದ ಶೆಟ್ಟಿ ಅಭಿಪ್ರಾಯಪಟ್ಟಿದ್ದಾರೆ. 'ಮುಂದಿನ ಕೆಲ ವಾರಗಳಲ್ಲಿ ಪರಿಸ್ಥಿತಿಯನ್ನು ನಿಭಾಯಿಸಲು ಭಾರತಕ್ಕೆ ಹೆಚ್ಚುವರಿಯಾಗಿ 5 ಲಕ್ಷ ತೀವ್ರ ನಿಗಾ ಘಟಕದ (ಐಸಿಯು) ಹಾಸಿಗೆಗಳು, 2 ಲಕ್ಷ ನರ್ಸ್‌ಗಳು ಮತ್ತು 1.5 ಲಕ್ಷ ವೈದ್ಯರು ಬೇಕಾಗುತ್ತಾರೆ' ಎಂದು ಅವರು ಹೇಳಿದ್ದಾರೆ.

ಸಿಂಬಿಯಾಸಿಸ್ ಸಂಸ್ಥೆಯ ಸುವರ್ಣ ಮಹೋತ್ಸವದ ಅಂಗವಾಗಿ ಗುರುವಾರ ಆಯೋಜಿಸಲಾಗಿದ್ದ ಆನ್‌ಲೈನ್ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಭಾರತದಲ್ಲಿ ಸದ್ಯ 75 ಸಾವಿರದಿಂದ 90 ಸಾವಿರ ಐಸಿಯು ಹಾಸಿಗೆಗಳಿವೆ. ಈಗಾಗಲೇ ಬಹುತೇಕ ಈ ಹಾಸಿಗೆಗಳು ರೋಗಿಗಳಿಂದ ಭರ್ತಿಯಾಗಿವೆ. ಕೋವಿಡ್–19 ಎರಡನೇ ಅಲೆ ಇನ್ನೂ ಸಂಪೂರ್ಣ ಮುಗಿಯುವ ಮುನ್ನವೇ ಈ ಪರಿಸ್ಥಿತಿ ಸೃಷ್ಟಿಯಾಗಿದೆ. ಭಾರತದಲ್ಲಿ ಪ್ರತಿ ದಿನ 3.5 ಲಕ್ಷ ಪ್ರಕರಣಗಳು ಪತ್ತೆಯಾಗುತ್ತಿವೆ. ಈ ಸಂಖ್ಯೆ 5 ಲಕ್ಷ ತಲುಪಬಹುದು ಎಂದು ಕೆಲವು ತಜ್ಞರು ವಿಶ್ಲೇಷಿಸಿದ್ದಾರೆ. ಇದೇ ರೀತಿಯ ಭೀಕರ ಪರಿಸ್ಥಿತಿ ಮುಂದುವರಿದರೆ ಐಸಿಯುಗಳಲ್ಲೇ ರೋಗಿಗಳು ಸಾವಿಗೀಡಾಗಬಹುದು. ಏಕೆಂದರೆ, ರೋಗಿಗಳ ಆರೈಕೆಗೆ ವೈದ್ಯರು ಮತ್ತು ನರ್ಸ್‌ಗಳೇ ಇಲ್ಲ' ಎಂದು ಅವರು ಆರೋಗ್ಯ ರಕ್ಷಣೆಯ ಅವ್ಯವಸ್ಥೆಯನ್ನು ಅನಾವರಣಗೊಳಿಸಿದ್ದಾರೆ.



ಈಗಿನ ಸಾಂಕ್ರಾಮಿಕ ಕಾಯಿಲೆ ಇನ್ನೂ 4ರಿಂದ 5 ತಿಂಗಳ ಕಾಲ ಇರುವ ಸಾಧ್ಯತೆ ಇದೆ. ಬಳಿಕ, ನಾವು ಮೂರನೇ ಅಲೆಗೂ ಸಿದ್ಧರಾಗಬೇಕಾಗಿದೆ

ಡಾ. ದೇವಿ ಪ್ರಸಾದ ಶೆಟ್ಟಿ

'ಇಂತಹ ಭೀಕರ ಪರಿಸ್ಥಿತಿ ಸೃಷ್ಟಿಯಾಗುವುದರಲ್ಲಿ ಸಂಶಯವೇ ಇಲ್ಲ. ಕೋವಿಡ್ ದೃಢಪಟ್ಟ ಒಬ್ಬ ರೋಗಿಯಿಂದ ಮತ್ತೆ 5ರಿಂದ 10 ಜನರಿಗೆ ಸೋಂಕು ಹಬ್ಬುತ್ತದೆ. ಆದರೆ, ಇವರನ್ನು ಪರೀಕ್ಷೆಗೆ ಒಳಪಡಿಸಿಲ್ಲ. ಅಂದರೆ, ಭಾರತದಲ್ಲಿ ಪ್ರತಿ ದಿನ 15ರಿಂದ 20 ಲಕ್ಷಕ್ಕೂ ಹೆಚ್ಚು ಜನರು ಸೋಂಕಿಗೆ ಒಳಗಾಗುತ್ತಿದ್ದಾರೆ' ಎಂದು ಅವರು ಹೇಳಿದ್ದಾರೆ.

'ಅಂಕಿ–ಸಂಖ್ಯೆಗಳ ಪ್ರಕಾರ ಶೇಕಡ 5ರಷ್ಟು ಸೋಂಕಿತ ರೋಗಿಗಳಿಗೆ ಐಸಿಯು ಹಾಸಿಗೆ ಬೇಕಾಗುತ್ತದೆ. ಇಲ್ಲಿ ವಯಸ್ಸು ಮುಖ್ಯವಾಗುವುದಿಲ್ಲ. ಸರಾಸರಿ, ಒಬ್ಬ ರೋಗಿ ಐಸಿಯುನಲ್ಲಿ ಕನಿಷ್ಠ 10 ದಿನಗಳನ್ನು ಕಳೆಯುತ್ತಾನೆ. ಹೀಗಾದರೆ, ಯಾವ ರೀತಿಯ ಪರಿಸ್ಥಿತಿ ಸೃಷ್ಟಿಯಾಗಬಹುದು ಎನ್ನುವುದನ್ನು ಊಹಿಸಿಕೊಳ್ಳಬೇಕಾಗಿದೆ' ಎಂದು ಅವರು ಆತಂಕ ವ್ಯಕ್ತಪಡಿಸಿದ್ದಾರೆ.

'ಐಸಿಯುನಲ್ಲಿ ಕೋವಿಡ್ ರೋಗಿಗಳಿಗೆ ಯಶಸ್ವಿಯಾಗಿ ಚಿಕಿತ್ಸೆ ನೀಡುವಲ್ಲಿ ವೈದ್ಯರು, ನರ್ಸ್‌ಗಳ ಪಾತ್ರ ಮುಖ್ಯವಾಗಿದೆ. ಈ ಸಾಂಕ್ರಾಮಿಕ ಕಾಯಿಲೆ ಹಬ್ಬುವ ಮುನ್ನ ಸರ್ಕಾರಿ ಆಸ್ಪತ್ರೆಗಳಲ್ಲಿ ಶೇಕಡ 78ರಷ್ಟು ತಜ್ಞ ವೈದ್ಯರ ಕೊರತೆ ಇತ್ತು. ಮುಂದಿನ ಒಂದು ವರ್ಷ ಕೋವಿಡ್ ನಿರ್ವಹಣೆಗಾಗಿಯೇ ಸಮರ್ಪಿಸಿಕೊಳ್ಳಲು ನಮಗೆ ಕನಿಷ್ಠ 2 ಲಕ್ಷ ನರ್ಸ್‌ಗಳು ಮತ್ತು 1.5 ಲಕ್ಷ ವೈದ್ಯರನ್ನು ಕೆಲ ದಿನಗಳಲ್ಲೇ ನಿಯೋಜಿಸುವ ಅಗತ್ಯವಿದೆ' ಎಂದು ವಿವರಿಸಿದ್ದಾರೆ.

ಈ ಸಮಸ್ಯೆಯನ್ನು ಅಲ್ಪಮಟ್ಟಿಗೆ ನಿವಾರಿಸುವ ನಿಟ್ಟಿನಲ್ಲಿ ಪರಿಹಾರವನ್ನು ಅವರು ಸೂಚಿಸಿದ್ದಾರೆ. 'ದೇಶದಲ್ಲಿ ಮೂರು ವರ್ಷ ಅವಧಿಯ ಜನರಲ್ ನರ್ಸಿಂಗ್ ಕೋರ್ಸ್ ಮತ್ತು ನಾಲ್ಕು ವರ್ಷ ಅವಧಿಯ ಬಿ.ಎಸ್ಸಿ ನರ್ಸಿಂಗ್ ಕೋರ್ಸ್ ಮುಗಿಸಿರುವ 2.20 ಲಕ್ಷ ನರ್ಸಿಂಗ್ ವಿದ್ಯಾರ್ಥಿಗಳಿದ್ದು, ಇವರು ಪರೀಕ್ಷೆ ಬರೆಯಲು ಸಿದ್ಧತೆ ನಡೆಸುತ್ತಿದ್ದಾರೆ. ಈ ವಿದ್ಯಾರ್ಥಿಗಳನ್ನು ಪದವೀಧರರೆಂದು ಪರಿಗಣಿಸಿ ಕೋವಿಡ್ ಐಸಿಯು ವಾರ್ಡ್‌ಗಳಲ್ಲಿ ಒಂದು ವರ್ಷ ಕಾರ್ಯನಿರ್ವಹಿಸಲು ಆರೋಗ್ಯ ಸಚಿವಾಲಯ ಮತ್ತು ಭಾರತೀಯ ನರ್ಸಿಂಗ್ ಕೌನ್ಸಿಲ್ ಅವಕಾಶ ಕಲ್ಪಿಸಬೇಕು' ಎಂದಿದ್ದಾರೆ.

ಈ ನರ್ಸಿಂಗ್ ವಿದ್ಯರ್ಥಿಗಳಿಗೆ ಒಂದು ವರ್ಷದ ಬಳಿಕ ಪ್ರಮಾಣ ಪತ್ರ ನೀಡಬಹುದು ಮತ್ತು ಸರ್ಕಾರಿ ಉದ್ಯೋಗಗಳಲ್ಲಿ ಆದ್ಯತೆ ನೀಡಬೇಕು ಎಂದು ಕೋರಿದ್ದಾರೆ.

'ಜತೆಗೆ, 1.3 ಲಕ್ಷ ಯುವ ವೈದ್ಯರು ಸ್ನಾತಕೋತ್ತರ ಪದವಿಗೆ ಪ್ರವೇಶ ಪಡೆಯಲು ನೀಟ್ ಪರೀಕ್ಷೆಗೆ ಸಿದ್ಧತೆ ನಡೆಸುತ್ತಿದ್ದಾರೆ. ಆದರೆ, ಕೇವಲ 35 ಸಾವಿರ ಸೀಟುಗಳು ಮಾತ್ರ ಲಭ್ಯ. ಹೀಗಾಗಿ, ಆನ್‌ಲೈನ್ ಪರೀಕ್ಷೆಯನ್ನು ತಕ್ಷಣವೇ ನಡೆಸಿ ಫಲಿತಾಂಶವನ್ನು ತ್ವರಿತಗತಿಯಲ್ಲಿ ಪ್ರಕಟಿಸಬೇಕು. ಇದರಿಂದ, ಸ್ನಾತಕೋತ್ತರ ಪದವಿಗೆ ಪ್ರವೇಶ ಪಡೆಯದ ಸುಮಾರು ಒಂದು ಲಕ್ಷ ಯುವ ವೈದ್ಯರು ನಮಗೆ ಲಭ್ಯರಾಗುತ್ತಾರೆ' ಎಂದು ವಿವರಿಸಿದ್ದಾರೆ.

'ವಿದೇಶದಲ್ಲೂ 90 ಸಾವಿರದಿಂದ 1 ಲಕ್ಷದವರೆಗೆ ವೈದ್ಯರು ಪದವಿ ಪಡೆದಿದ್ದಾರೆ. ಆದರೆ, ಅವರು ರಾಷ್ಟ್ರೀಯ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾಗಿಲ್ಲ. ಇವರಲ್ಲಿನ 20 ಸಾವಿರ ಪ್ರತಿಭಾವಂತರನ್ನು ಗುರುತಿಸಿ ಒಂದು ವರ್ಷ ಸೇವೆಗೆ ಬಳಸಿಕೊಳ್ಳಬಹುದು' ಎಂದು ಸಲಹೆ ನೀಡಿದ್ದಾರೆ.



ರಾಯಲ್ ಚಾಲೆಂಜರ್ಸ್–ಪಂಜಾಬ್ ಕಿಂಗ್ಸ್ ತಂಡಗಳ ಹಣಾಹಣಿ ಇಂದು

ರಾಹುಲ್ ಪಡೆಗೆ ‘ಬೆಂಗಳೂರು’ ಸವಾಲು

ಅಹಮದಾಬಾದ್ (ಪಿಟಿಐ): ಬೆಂಗಳೂರು ಹುಡುಗ ಕೆ.ಎಲ್. ರಾಹುಲ್ ನಾಯಕತ್ವದ ಪಂಜಾಬ್ ಕಿಂಗ್ಸ್ ತಂಡವು ಶುಕ್ರವಾರ ನಡೆಯಲಿರುವ ಐಪಿಎಲ್ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವನ್ನು ಎದುರಿಸಲಿದೆ.

ವಿರಾಟ್ ಕೊಹ್ಲಿ ನಾಯಕತ್ವದ ಆರ್‌ಸಿಬಿ ಇಲ್ಲಿಯರವರೆಗೆ ಆಡಿರುವ ಆರು ಪಂದ್ಯಗಳಲ್ಲಿ ಒಂದರಲ್ಲಿ ಮಾತ್ರ ಸೋತಿದೆ. ಒಟ್ಟು ಹತ್ತು ಪಾಯಿಂಟ್‌ಗಳೊಂದಿಗೆ ಎರಡನೇ ಸ್ಥಾನದಲ್ಲಿದೆ. ಅಂಕಗಳ ಲೆಕ್ಕಾಚಾರದಲ್ಲಿ ಮೊದಲ ಸ್ಥಾನದಲ್ಲಿರುವ ಚೆನ್ನೈ ಸೂಪರ್ ಕಿಂಗ್ಸ್ ಜೊತೆ ನಿಕಟ ಪೈಪೋಟಿ ನಡೆಸುತ್ತಿದೆ.

ಆರಂಭಿಕ ಜೋಡಿ ವಿರಾಟ್ ಕೊಹ್ಲಿ ಮತ್ತು ದೇವದತ್ತ ಪಡಿಕ್ಕಲ್ ಉತ್ತಮ ಲಯದಲ್ಲಿದ್ದಾರೆ. ಒಂದೊಮ್ಮೆ ಅವರಿಬ್ಬರೂ ಬೇಗನೆ ಔಟಾದರೂ, ಎಬಿ ಡಿವಿಲಿಯರ್ಸ್ ಇದ್ದೇ ಇದ್ದಾರೆ ಎನ್ನುವ ಧೈರ್ಯ ತಂಡಕ್ಕೆ ಇದೆ. ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧದ ಪಂದ್ಯದಲ್ಲಿ ಅವರ ಅಬ್ಬರದ ಬ್ಯಾಟಿಂಗ್ ರಂಗೇರಿತ್ತು. ಗ್ಲೆನ್ ಮ್ಯಾಕ್ಸ್‌ವೆಲ್ ಕೂಡ ಉತ್ತಮ ಫಾರ್ಮ್‌ನಲ್ಲಿದ್ದಾರೆ.

ವಾಷಿಂಗ್ಟನ್ ಸುಂದರ್, ಡೇನಿಯಲ್ ಸ್ಯಾಮ್ಸ್ ಮತ್ತು ಕೈಲ್ ಜೆಮಿಸನ್ ಕೊನೆಯ ಹಂತದಲ್ಲಿ ಒಂದಷ್ಟು ರನ್ ಸೇರಿಸಬಲ್ಲರು. ಬೌಲಿಂಗ್‌ನಲ್ಲಿಯೂ ಕೊನೆಯ ಎಸೆತದವರೆಗೂ ಛಲದ ಹೋರಾಟ ಮಾಡುವ ಮೊಹಮ್ಮದ್ ಸಿರಾಜ್, ಹರ್ಷಲ್ ಪಟೇಲ್ ಕೂಡ ತಂಡದ ಗೆಲುವಿಗೆ ಬಲ ತುಂಬಬಲ್ಲರು. ತಂಡಕ್ಕೆ ಆಸರೆಯಾಗುವ ಸಮರ್ಥರು.



ಎಬಿ ಡಿವಿಲಿಯರ್ಸ್ ಮತ್ತು ವಿರಾಟ್ ಕೊಹ್ಲಿ



ಕೆ.ಎಲ್. ರಾಹುಲ್ –ಪಿಟಿಐ ಚಿತ್ರ

ಆದರೆ, ಪಂಜಾಬ್ ತಂಡದ ಪರಿಸ್ಥಿತಿ ಬೇರೆ ಇದೆ. ನಾಲ್ಕರಲ್ಲಿ ಸೋತು, ಎರಡರಲ್ಲಿ ಮಾತ್ರ ಜಯಿಸಿದೆ. ಬ್ಯಾಟಿಂಗ್ ಮತ್ತು ಬೌಲಿಂಗ್ ವಿಭಾಗಗಳೆರಡರಲ್ಲೂ ಅಸ್ಥಿರತೆಯೇ ತಂಡದ ವೈಫಲ್ಯಕ್ಕೆ ಕಾರಣವಾಗಿದೆ.

ರಾಹುಲ್, ಮಯಂಕ್ ಅಗರವಾಲ್, ಕ್ರಿಸ್ ಗೇಲ್ ಮತ್ತು ನಿಕೋಲಸ್ ಪೂರನ್ ಅವರ ಮೇಲೆಯೇ ಬ್ಯಾಟಿಂಗ್ ವಿಭಾಗ ಸಂಪೂರ್ಣ ಅವಲಂಬಿತವಾಗಿದೆ. ದೀಪಕ್ ಹೂಡಾ ಮತ್ತು ಡೇವಿಡ್ ಮಲಾನ್ ಚೆನ್ನಾಗಿ ಆಡಿದರೆ ಬೋನಸ್ ಎಂಬಂತಾಗಿದೆ. ಕೋಲ್ಕತ್ತ ನೈಟ್‌ರೈಡರ್ಸ್ ಎದುರಿನ ಪಂದ್ಯದಲ್ಲಿ ಸೋಲಲು ಬ್ಯಾಟಿಂಗ್ ವೈಫಲ್ಯವೇ ಕಾರಣವಾಗಿತ್ತು.

ಬೌಲಿಂಗ್‌ನಲ್ಲಿಯೂ ಇದೇ ಪರಿಸ್ಥಿತಿ ಇದೆ. ಅರ್ಷದೀಪ್ ಸಿಂಗ್, ಮೊಹಮ್ಮದ್ ಶಮಿ ಮತ್ತು ರವಿ ಬಿಷ್ಣೋಯಿ ತಮ್ಮ ಸಾಮರ್ಥ್ಯಕ್ಕೆ ತಕ್ಕ ಬೌಲಿಂಗ್ ಮಾಡಿದರೆ, ಕೊಹ್ಲಿ ಬಳಗಕ್ಕೆ ಕಠಿಣ ಸವಾಲು ಎದುರಾಗಬಹುದು.

ಪಂದ್ಯಗಳು 26

ಪಂಜಾಬ್ ಗೆಲುವು	12
ಬೆಂಗಳೂರು ಜಯ	14

ಮುಖಾಮುಖಿಯಲ್ಲಿ ಗರಿಷ್ಠ ಮೊತ್ತ

ಪಂಜಾಬ್	232
ಬೆಂಗಳೂರು	226

ಕನಿಷ್ಠ ಮೊತ್ತ

ಪಂಜಾಬ್	88
ಬೆಂಗಳೂರು	84

ಆರಂಭ: ರಾತ್ರಿ 7.30

ಸ್ಥಳ: ಅಹಮದಾಬಾದ್

ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಆರೆಂಜ್ ಕ್ಯಾಪ್
(ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಶಿಖರ್ ಧವನ್	ಡೆಲ್ಲಿ	311
ಡುಪ್ಲೆಸಿ	ಚೆನ್ನೈ	270
ಪೃಥ್ವಿ ಶಾ	ಡೆಲ್ಲಿ	269

ಪರ್ಪಲ್ ಕ್ಯಾಪ್
(ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಹರ್ಷಲ್	ಬೆಂಗಳೂರು	17
ಆವೇಶ್ ಖಾನ್	ಡೆಲ್ಲಿ	13
ರಾಹುಲ್ ಚಾಹರ್	ಮುಂಬೈ	11

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ
ಚೆನ್ನೈ ಸೂಪರ್ ಕಿಂಗ್ಸ್	6	5	1	-	-	10
ಡೆಲ್ಲಿ ಕ್ಯಾಪಿಟಲ್ಸ್	7	5	2	-	-	10
ರಾಯಲ್ ಚಾಲೆಂಜರ್ಸ್	6	5	1	-	-	10
ಮುಂಬೈ ಇಂಡಿಯನ್ಸ್	6	3	3	-	-	6
ಕೋಲ್ಕತ್ತ	7	2	5	-	-	4
ಪಂಜಾಬ್	6	2	4	-	-	4
ರಾಜಸ್ಥಾನ	6	2	4	-	-	4
ಹೈದರಾಬಾದ್	6	1	5	-	-	2

* ಗುರುವಾರದ ಪಂದ್ಯಗಳ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಕ್ವಿಂಟನ್ ಅರ್ಧಶತಕದ ರಂಗು; ರಾಜಸ್ಥಾನ್ ರಾಯಲ್ಸ್‌ಗೆ ಮತ್ತೆ ಸೋಲು

ಜಯದ ಹಾದಿಗೆ ಮರಳಿದ ಮುಂಬೈ

ನವದೆಹಲಿ (ಪಿಟಿಐ): ಅಜೇಯ ಅರ್ಧಶತಕ ಬಾರಿಸಿದ ಕ್ವಿಂಟನ್ ಡಿ ಕಾಕ್ ನೆರವಿನಿಂದ ಹಾಲಿ ಚಾಂಪಿಯನ್ ಮುಂಬೈ ಇಂಡಿಯನ್ಸ್ ತಂಡವು ಜಯದ ಹಾದಿಗೆ ಮರಳಿತು.

ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಮುಂಬೈ ತಂಡವು 7 ವಿಕೆಟ್‌ಗಳಿಂದ ರಾಜಸ್ಥಾನ್ ರಾಯಲ್ಸ್ ವಿರುದ್ಧ ಜಯಿಸಿತು. ಸತತ ಎರಡು ಪಂದ್ಯಗಳಲ್ಲಿ ಸೋತಿದ್ದ ರೋಹಿತ್ ಶರ್ಮಾ ಬಳಗವು ಗೆಲುವಿನ ಸಂಭ್ರಮ ಆಚರಿಸಿತು.

ಟಾಸ್ ಗೆದ್ದ ಮುಂಬೈ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ರಾಜಸ್ಥಾನ್ ರಾಯಲ್ಸ್ ತಂಡವು 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 171 ರನ್ ಗಳಿಸಿತು. ಅದಕ್ಕುತ್ತರವಾಗಿ ಮುಂಬೈ ತಂಡವು 18.3 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 172 ರನ್ ಗಳಿಸಿ ಜಯಿಸಿತು. ಸಂಜು ಸ್ಯಾಮ್ಸನ್ ನಾಯಕತ್ವದ ಬಳಗವು ಟೂರ್ನಿಯಲ್ಲಿ ನಾಲ್ಕನೇ ಸೋಲು ಅನುಭವಿಸಿತು.

ರಾಯಲ್ಸ್ ತಂಡಕ್ಕೆ ಜೋಸ್ ಬಟ್ಲರ್ ಮತ್ತು ಯುವ ಆಟಗಾರ ಯಶಸ್ವಿ ಜೈಸ್ವಾಲ್ ಮೊದಲ ವಿಕೆಟ್ ಜೊತೆಯಾಟದಲ್ಲಿ 66 ರನ್ ಗಳಿಸಿ ಉತ್ತಮ ಆರಂಭ ನೀಡಿದರು. ಇನಿಂಗ್ಸ್‌ನ ಎಂಟು ಮತ್ತು ಹತ್ತನೇ ಓವರ್‌ನಲ್ಲಿ ಕ್ರಮವಾಗಿ ಬಟ್ಲರ್ (41 ರನ್) ಮತ್ತು ಜೈಸ್ವಾಲ್ (32 ರನ್) ವಿಕೆಟ್ ಗಳಿಸಿದ ಸ್ಪಿನ್ನರ್ ರಾಹುಲ್ ಚಾಹರ್ ಜೊತೆಯಾಟ ಮುರಿದರು.

ಮೊತ್ತ ಹೆಚ್ಚಿಸುವ ನಿಟ್ಟಿನಲ್ಲಿ ನಾಯಕ ಸಂಜು ಸ್ಯಾಮ್ಸನ್ (42; 27ಎ) ಮತ್ತು ಶಿವಂ ದುಬೆ (35; 31ಎ) ಬ್ಯಾಟ್ ಬೀಸಿದರು. ಆದರೆ ಕೊನೆಯ ಹಂತದ ಓವರ್‌ಗಳಲ್ಲಿ ರನ್ ಗಳಿಕೆಯ ವೇಗ ಹೆಚ್ಚಿಸುವ ಪ್ರಯತ್ನದಲ್ಲಿ ಇಬ್ಬರೂ ವಿಫಲರಾದರು. 18ನೇ ಓವರ್‌ನಲ್ಲಿ ಟ್ರೆಂಟ್ ಬೌಲ್ಟ್ ಎಸೆತದಲ್ಲಿ ಸಂಜು ಔಟಾದರು. ನಂತರದ ಓವರ್‌ನಲ್ಲಿ ಜಸ್‌ಪ್ರೀತ್ ಬೂಮ್ರಾ ಬೌಲಿಂಗ್‌ನಲ್ಲಿ ಶಿವಂ ದುಬೆ ಪೆವಿಲಿಯನ್‌ಗೆ ಮರಳಿದರು.

ರಾಜಸ್ಥಾನ್ ಗಳಿಸಿದ ಹೋರಾಟದ ಮೊತ್ತವನ್ನು ಮುಂಬೈ ಸಲೀಸಾಗಿ ಬೆನ್ನಟ್ಟಿತ್ತು. ಅದಕ್ಕೆ ಕಾರಣವಾಗಿದ್ದು ಕ್ವಿಂಟನ್ ಬ್ಯಾಟಿಂಗ್. ಅವರು ಈ ಹಿಂದಿನ ಪಂದ್ಯಗಳಲ್ಲಿ ಲಯ ಕಂಡುಕೊಳ್ಳಲು ಪ್ರಯಾಸಪಟ್ಟಿದ್ದರು. ಆದರೆ ಇಲ್ಲಿ ಯಶಸ್ವಿಯಾದರು.

ನಾಯಕ ರೋಹಿತ್ ಶರ್ಮಾ (14 ರನ್) ಜೊತೆಗೆ ಮೊದಲ ವಿಕೆಟ್ ಜೊತೆಯಾಟದಲ್ಲಿ 49 ರನ್‌ಗಳು ಕೇವಲ ಆರು ಓವರ್‌ಗಳಲ್ಲಿ ಹರಿದುಬರಲು ಕಾರಣರಾದರು.

ರಾಜಸ್ಥಾನ್ ತಂಡದಲ್ಲಿ ಸ್ಥಿರ ಪ್ರದರ್ಶನ ನೀಡುತ್ತಿರುವ ಏಕೈಕ ಆಟಗಾರ ಕ್ರಿಸ್ ಮೊರಿಸ್ ಬೌಲಿಂಗ್‌ನಲ್ಲಿ ರೋಹಿತ್ ಔಟಾಗುವುದರೊಂದಿಗೆ ಜೊತೆಯಾಟ ಮುರಿಯಿತು. ಆದರೆ ಕ್ವಿಂಟನ್ ತಮ್ಮ ರನ್ ಬೇಟೆ ಮುಂದುವರಿಸಿದರು.

ಸೂರ್ಯಕುಮಾರ್ ಯಾದವ್ (16 ರನ್) ಹೆಚ್ಚು ಹೊತ್ತು ನಿಲ್ಲದಂತೆ ಮೊರಿಸ್ ನೋಡಿಕೊಂಡರು. ಕೃಣಾಲ್ ಪಾಂಡ್ಯ (39; 26ಎ) ಕ್ವಿಂಟನ್ ಅವರೊಂದಿಗೆ ಮೂರನೇ ವಿಕೆಟ್ ಜೊತೆಯಾಟದಲ್ಲಿ 63 ರನ್ ಸೇರಿಸಿ ತಂಡವನ್ನು ಗೆಲುವಿನ ಸನಿಹಕ್ಕೆ ತಂದರು. 17ನೇ ಓವರ್‌ನಲ್ಲಿ ಕೃಣಾಲ್ ಔಟಾದರೂ ಯಾವುದೇ ತೊಂದರೆಯಾಗಲಿಲ್ಲ. ಡಿಕಾಕ್ ಜೊತೆಗೂಡಿದ ಕೀರನ್ ಪೊಲಾರ್ಡ್ (ಔಟಾಗದೆ 16) ಮುಂಬೈ ಬಳಗದಲ್ಲಿ ಜಯದ ಸಂಭ್ರಮ ಗರಿಗೆದರುವಂತೆ ಮಾಡಿದರು.



ಕ್ವಿಂಟನ್ ಡಿ ಕಾಕ್ ಸಂಭ್ರಮ –ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ರಾಜಸ್ಥಾನ್ ರಾಯಲ್ಸ್ 4ಕ್ಕೆ 171 (20 ಓವರ್‌ಗಳಲ್ಲಿ)

ಬಟ್ಲರ್ ಸ್ಟಂಪ್ಡ್ ಡಿ ಕಾಕ್ ಬಿ ಚಾಹರ್ 41 (32 ಎ, 4x3, 6x3), ಜೈಸ್ವಾಲ್ ಸಿ ಮತ್ತು ಚಾಹರ್ 32 (20 ಎ,, 4x2, 6x2), ಸ್ಯಾಮ್ಸನ್ ಬಿ ಬೌಲ್ಟ್ 42 (27 ಎ, , 4x5), ದುಬೆ ಸಿ ಮತ್ತು ಬಿ ಬೂಮ್ರಾ 35 (31 ಎ, , 4x2, 6x2), ಮಿಲ್ಲರ್ ಔಟಾಗದೆ 7 (4 ಎ, , 4x1), ಪರಾಗ್ ಔಟಾಗದೆ 8 (7 ಎ, , 4x1)

ಇತರೆ (ಲೆಗ್ ಬೈ 2, ನೋಬಾಲ್ 1, ವೈಡ್ 3) 6

ವಿಕೆಟ್ ಪತನ: 1-66 (ಜೋಸ್ ಬಟ್ಲರ್, 7.4) 2-91 (ಯಶಸ್ವಿ ಜೈಸ್ವಾಲ್, , 9.5), 3-148 (ಸಂಜು ಸ್ಯಾಮ್ಸನ್, 17.4), 4-158 (ಶಿವಂ ದುಬೆ, 18.5)

ಬೌಲಿಂಗ್: ಟ್ರೆಂಟ್ ಬೌಲ್ಟ್ 4–0–37–1, ಜಸ್‌ಪ್ರೀತ್ ಬೂಮ್ರಾ 4–0–15–1, ಜಯಂತ್ ಯಾದವ್ 3–0–37–0, ನೇಥನ್ ಕಾಲ್ಟರ್ ನೈಲ್ 4–0–35–0, ರಾಹುಲ್ ಚಾಹರ್ 4–0–33–2, ಕೃಣಾಲ್ ಪಾಂಡ್ಯ 1–0–12–0

ಮುಂಬೈ ಇಂಡಿಯನ್ಸ್ 3ಕ್ಕೆ 172 (18.3 ಓವರ್‌ಗಳಲ್ಲಿ)

ರೋಹಿತ್ ಸಿ ಸಕಾರಿಯ ಬಿ ಮೊರಿಸ್ 14 (17 ಎ, 6x1), ಡಿಕಾಕ್ ಔಟಾಗದೆ 70 (50 ಎ, 4x6, 6x2), ಸೂರ್ಯಕುಮಾರ್ ಸಿ ಬಟ್ಲರ್ ಬಿ ಮೊರಿಸ್ 16 (10 ಎ, 4x3), ಕೃಣಾಲ್ ಬಿ ಮುಸ್ತಫಿಜುರ್ 39 (26 ಎ, 4x2, 6x2), ಪೊಲಾರ್ಡ್ ಔಟಾಗದೆ 16 (8 ಎ, 4x2, 6x1)

ಇತರೆ (ಲೆಗ್‌ಬೈ 15, ವೈಡ್ 2) 17

ವಿಕೆಟ್ ಪತನ: 1-49 (ರೋಹಿತ್ ಶರ್ಮಾ, 5.6), 2-83 (ಸೂರ್ಯ ಕುಮಾರ್ ಯಾದವ್, 9.2), 3-146 (ಕೃಣಾಲ್ ಪಾಂಡ್ಯ, 16.4)

ಬೌಲಿಂಗ್: ಚೇತನ್ ಸಕಾರಿಯ 3-0–18–0, ಜಯದೇವ ಉನದ್ಕತ್ 4-0–33– 0, ಮುಸ್ತಫಿಜುರ್ ರಹಮಾನ್ 3.3-0–37–1, ಕ್ರಿಸ್ ಮೊರಿಸ್ 4-0–33–2, ರಾಹುಲ್ ತೆವಾಥಿಯಾ 3-0–30–0, ಶಿವಂ ದುಬೆ 1-0–6–0

ಫಲಿತಾಂಶ: ಮುಂಬೈ ಇಂಡಿಯನ್ಸ್‌ಗೆ 7 ವಿಕೆಟ್‌ಗಳ ಜಯ

ಹೊರಬಂದ ನಿತಿನ್, ಮನು ನಯ್ಯರ್

ನವದೆಹಲಿ (ಪಿಟಿಐ): ಭಾರತದ ನಿತಿನ್ ಮೆನನ್ ಮತ್ತು ಆಸ್ಟ್ರೇಲಿಯಾದ ಪಾಲ್ ರೀಫೆಲ್ ಅವರು ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯಿಂದ ದೂರವಾಗಿದ್ದಾರೆ.

ಇಂದೋರ್ ನಿವಾಸಿಯಾಗಿರುವ ನಿತಿನ್ ಮೆನನ್ ಅವರ ಪತ್ನಿ ಮತ್ತು ತಾಯಿ ಕೋವಿಡ್ ಸೋಂಕಿಗೆ ಒಳಗಾಗಿದ್ದಾರೆ ಎಂದು ತಿಳಿದುಬಂದಿದ್ದು ಈ ಕಾರಣದಿಂದ ನಿತಿನ್ ಬಯೊಬಬಲ್ ತೊರೆದು ಹೋಗಿ ದ್ದಾರೆ ಎನ್ನಲಾಗಿದೆ.

ಪಂದ್ಯದ ರೆಫರಿ ಮನು ನಯ್ಯರ್ ಕೂಡ ಗುರುವಾರ ಮನೆಗೆ ತೆರಳಿದ್ದಾರೆ. ತಾಯಿ ಮೃತರಾದ ಕಾರಣ ಅವರು ಬಯೊಬಬಲ್ ತೊರೆದಿದ್ದಾರೆ. ಅಹಮದಾಬಾದ್‌ನಲ್ಲಿ ಎರಡು ದಿನಗಳ ಹಿಂದೆ ನಡೆದಿದ್ದ ಡೆಲ್ಲಿ ಕ್ಯಾಪಿಟಲ್ಸ್ ಮತ್ತು ಆರ್‌ಸಿಬಿ ನಡುವಿನ ಪಂದ್ಯದಲ್ಲಿ ಅವರು ಕೊನೆಯದಾಗಿ ಕಾರ್ಯನಿರ್ವಹಿಸಿದ್ದರು.

ಹಾಕಿ ತಂಡಕ್ಕೆ ಲಸಿಕೆ

ಬೆಂಗಳೂರು/ನವದೆಹಲಿ: ಗೋಲ್ ಕೀಪರ್ ಪಿ.ಆರ್ ಶ್ರೀಜೇಶ್ ಒಳಗೊಂಡಂತೆ ಭಾರತ ಹಾಕಿ ತಂಡದ ಆಟಗಾರರು ಗುರುವಾರ ಬೆಂಗಳೂರಿನಲ್ಲಿ ಕೋವಿಡ್ –19 ಲಸಿಕೆ ಪಡೆದರು.

ಟೋಕಿಯೊ ಒಲಿಂಪಿಕ್ಸ್ ಹೋಗುವ ಸಿದ್ಧತೆಯಲ್ಲಿರುವ ಹಾಕಿ ತಂಡವು ಬೆಂಗಳೂರಿನ ಭಾರತ ಕ್ರೀಡಾ ಪ್ರಾಧಿಕಾರದಲ್ಲಿ ಅಭ್ಯಾಸ ನಡೆಸುತ್ತಿದೆ.

ಡೆಲ್ಲಿಗೆ ಭರ್ಜರಿ ಗೆಲುವು

ಅಹಮದಾಬಾದ್ (ಪಿಟಿಐ): ಆರಂಭಿಕ ಜೋಡಿ ಪೃಥ್ವಿ ಶಾ (82, 41 ಎಸೆತ, 11 ಬೌಂಡರಿ, 3 ಸಿಕ್ಸರ್) ಮತ್ತು ಶಿಖರ್ ಧವನ್ (47 ಎಸೆತಗಳಲ್ಲಿ 46) ಅವರ 132 ರನ್‌ಗಳ ಜೊತೆಯಾಟದಿಂದ ಡೆಲ್ಲಿ ಕ್ಯಾಪಿಟಲ್ಸ್ ಭರ್ಜರಿ ಜಯ ಗಳಿಸಿತು.

ಗುರುವಾರ ರಾತ್ರಿ ನಡೆದ ಹಣಾಹಣಿಯಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ತಂಡವನ್ನು ಡೆಲ್ಲಿ ಏಳು ವಿಕೆಟ್‌ಗಳಿಂದ ಮಣಿಸಿತು. ಶಿವಂ ಮಾವಿ ಅವರ ಮೊದಲ ಓವರ್‌ನಲ್ಲೇ ಆರು ಬೌಂಡರಿ ಸಿಡಿಸಿ ಪೃಥ್ವಿ ಶಾ ಮಿಂಚಿದರು.

ಮೊದಲು ಬ್ಯಾಟಿಂಗ್ ಮಾಡಿದ ಕೋಲ್ಕತ್ತ 16.2 ಓವರ್‌ಗಳಲ್ಲಿ 109 ರನ್‌ಗಳಿಗೆ ಆರು ವಿಕೆಟ್ ಕಳೆದುಕೊಂಡಿತ್ತು. ಆ ನಂತರ ಆ್ಯಂಡ್ರೆ ರಸೆಲ್ ಬೌಲರ್‌ಗಳನ್ನು ಕಂಗೆಡಿಸಿದರು. ನಾಲ್ಕು ಸಿಕ್ಸರ್, ಎರಡು ಬೌಂಡರಿ ಸಿಡಿಸಿ 27 ಎಸೆತಗಳಲ್ಲಿ 45 ರನ್ ಗಳಿಸಿದರು. ಹೀಗಾಗಿ ತಂಡದ ಮೊತ್ತ 150ರ ಗಡಿ ದಾಟಿತು. ಆರಂಭಿಕ ಬ್ಯಾಟ್ಸ್‌ಮನ್ ಗಿಲ್ (43; 38 ಎಸೆತ) 13ನೇ ಓವರ್‌ನವರೆಗೂ ಹೋರಾಟ ನಡೆಸಿದರು.



ಪೃಥ್ವಿ ಶಾ –ಪಿಟಿಐ ಚಿತ್ರ

ಸಂಕ್ಷಿಪ್ತ ಸ್ಕೋರು: ಕೋಲ್ಕತ್ತ ನೈಟ್ ರೈಡರ್ಸ್: 20 ಓವರ್‌ಗಳಲ್ಲಿ 6ಕ್ಕೆ 154 (ಶುಭಮನ್ ಗಿಲ್ 43, ಆ್ಯಂಡ್ರೆ ರಸೆಲ್ 45, ದಿನೇಶ್ ಕಾರ್ತಿಕ್ 14; ಅಕ್ಷರ್ ಪಟೇಲ್ 32ಕ್ಕೆ2, ಲಲಿತ್ ಯಾದವ್ 13ಕ್ಕೆ2); **ಡೆಲ್ಲಿ ಕ್ಯಾಪಿಟಲ್ಸ್:** 16.3 ಓವರ್‌ಗಳಲ್ಲಿ 3ಕ್ಕೆ 156 (ಪೃಥ್ವಿ ಶಾ 82, ಶಿಖರ್ ಧವನ್ 46, ರಿಷಭ್ ಪಂತ್ 16). **ಫಲಿತಾಂಶ:** ಡೆಲ್ಲಿ ಕ್ಯಾಪಿಟಲ್ಸ್‌ಗೆ ಏಳು ವಿಕೆಟ್‌ಗಳ ಜಯ.

ಕೋವಿಡ್ ಹೋರಾಟಕ್ಕೆ ರಾಯಲ್ಸ್–ಡೆಲ್ಲಿ ನೆರವಿನ ಹಸ್ತ

ನವದೆಹಲಿ (ಪಿಟಿಐ): ಐಪಿಎಲ್ ಟೂರ್ನಿಯಲ್ಲಿ ಆಡುತ್ತಿರುವ ರಾಜಸ್ಥಾನ್ ರಾಯಲ್ಸ್ ಮತ್ತು ಡೆಲ್ಲಿ ಕ್ಯಾಪಿಟಲ್ಸ್ ತಂಡವು ಕೋವಿಡ್ ಹೋರಾಟಕ್ಕೆ ನೆರವಿನ ಹಸ್ತ ಚಾಚಲು ಮುಂದಾಗಿವೆ.

ರಾಜಸ್ಥಾನ್ ರಾಯಲ್ಸ್ ತಂಡವು ತನ್ನ ಪ್ರತಿಷ್ಠಾನದ ಮೂಲಕ ಕೋವಿಡ್ ಪರಿಹಾರ ನಿಧಿಗೆ ₹ 7.5 ಕೋಟಿ ದೇಣಿಗೆ ನೀಡುವುದಾಗಿ ಘೋಷಿಸಿದೆ.

‘ಕೋವಿಡ್ ವೈರಸ್ ಎರಡನೇ ಅಲೆಯನ್ನು ಎದುರಿಸುತ್ತಿರುವ ಭಾರತದ ಹೋರಾಟವನ್ನು ನಾವು ಬೆಂಬಲಿಸುತ್ತೇವೆ. ಅದಕ್ಕಾಗಿ ₹ 7.5 ಕೋಟಿ ದೇಣಿಗೆ ನೀಡುತ್ತಿದ್ದೇವೆ’ ಎಂದು ತಂಡದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಡೆಲ್ಲಿ ₹ 1.5 ಕೋಟಿ: ರಾಜಧಾನಿ ದೆಹಲಿಯಲ್ಲಿ ಕೋವಿಡ್ ರೋಗಿಗಳಿಗೆ ಚಿಕಿತ್ಸೆಗಾಗಿ ಡೆಲ್ಲಿ ಕ್ಯಾಪಿಟಲ್ಸ್ ತಂಡವು ₹ 1.5 ಕೋಟಿ ಮೊತ್ತವನ್ನು ದೇಣಿಗೆ ನೀಡುವುದಾಗಿ ಘೋಷಿಸಿದೆ.

ಸಚಿನ್ ₹ ಒಂದು ಕೋಟಿ ದೇಣಿಗೆ

ನವದೆಹಲಿ (ಪಿಟಿಐ): ಕೋವಿಡ್ ರೋಗಿಗಳ ಚಿಕಿತ್ಸೆಗಾಗಿ ಆಮ್ಲಜನಕ ಪೂರೈಕೆ ಸಲಕರಣೆಗಳ ಖರೀದಿಗಾಗಿ ಮಾಜಿ ಕ್ರಿಕೆಟಿಗ ಸಚಿನ್ ತೆಂಡೂಲ್ಕರ್ ₹ 1 ಕೋಟಿ ದೇಣಿಗೆ ನೀಡಿದ್ದಾರೆ.



ಸಚಿನ್ ತೆಂಡೂಲ್ಕರ್

ಕೋವಿಡ್ ಎರಡನೇ ಅಲೆಯ ಅಬ್ಬರದಿಂದಾಗಿ ದೇಶದ ಹಲವು ನಗರಗಳಲ್ಲಿ ವೈದ್ಯಕೀಯ ಆಮ್ಲಜನಕದ ಕೊರತೆಯುಂಟಾಗಿದೆ. ಅದರಲ್ಲೂ ದೇಶದ ರಾಜಧಾನಿ ದೆಹಲಿಯಲ್ಲಿ ಸಮಸ್ಯೆ ಆಮ್ಲಜನಕದ ಕೊರತೆ ಸಮಸ್ಯೆಯು ಉಲ್ಬಣಿಸಿದೆ.

ಅದರಿಂದಾಗಿ ದೆಹಲಿಯ ಕೆಲವು ಯುವ ಉದ್ಯಮಿಗಳು ಸೇರಿ ‘ಮಿಷನ್ ಆಕ್ಸಿಜನ್’ ಅಭಿಯಾನ ಆರಂಭಿಸಿದ್ದಾರೆ.

‘ಈ ಅಭಿಯಾನಕ್ಕೆ ಸಚಿನ್ ತೆಂಡೂಲ್ಕರ್ ಅವರು ಒಂದು ಕೋಟಿ ರೂಪಾಯಿ ನೀಡಿದ್ದಾರೆ’ ಎಂದು ಸಂಚಾಲಕರು ತಿಳಿಸಿದ್ದಾರೆ.

ಈಚೆಗೆ ಸಚಿನ್ ಕೂಡ ಕೋವಿಡ್ ಸೋಂಕಿನಿಂದಾಗಿ ಆಸ್ಪತ್ರೆಗೆ ದಾಖಲಾಗಿದ್ದರು. ನಂತರ ಗುಣಮುಖರಾಗಿ ಮನೆಗೆ ಮರಳಿದ್ದರು.

ಉದಕಮಂಡಲ ರೇಸ್

‘ಲೇಡಿ ಇನ್ ಲೇಸ್’ ಗೆಲ್ಲುವ ನಿರೀಕ್ಷೆ

‘ಕ್ವೀನ್ಸ್ ಗೆಸ್ಟ್ ಹ್ಯಾಂಡಿಕ್ಯಾಪ್’ ಶುಕ್ರವಾರದ ಉದಕಮಂಡಲ ರೇಸ್‌ನಲ್ಲಿ ಪ್ರಧಾನ ಆಕರ್ಷಣೆಯಾಗಿದ್ದು ‘ರೋಮನ್ ಸೆನೇಟರ್’ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಬೆಳಿಗ್ಗೆ 10.30ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಫಂಟಾಸ್ಟಿಕ್ ಹಿಟ್ 3, ಮುಲ್ಲಿಗನ್ 5, ಚಾಣಕ್ಯ 7
2ನೇ ರೇಸ್: ಸಿಂಫೋನಿ ಇನ್ ಸ್ಟೈಲ್ 4, ಏಶಿಯನ್ ಎಂಪ್ರೆಸ್ 3, ಬಿಫೋರ್ಡಿಡಾನ್ 1
3ನೇ ರೇಸ್: ಫಸ್ಟ್ ಎಂಪ್ರೆಸ್ 3, ಎಂಪ್ರೆಸ್ ಎಟರ್ನಲ್ 2, ಲಕ್ಷ್ಮಣ 5
4ನೇ ರೇಸ್: ಈಗಲ್ ಪ್ರಿನ್ಸ್ 3, ಎಲಿಗೆಂಟ್ ಟಚ್ 7, ಬೋಲ್ಡ್ ಫ್ಲೀಟ್ 1
5ನೇ ರೇಸ್: ರೋಮನ್ ಸೆನೇಟರ್ 2, ಅವೆಲಿನೊ 1, ಪೆನಾಂಗ್ 4
6ನೇ ರೇಸ್: ಸೆನೊರಾ ಬಿಯಾಂಕ 4, ಒಬೆರಾನ್ 3, ಕಾರ್ನ್‌ಔಸ್ಟೀ 8
7ನೇ ರೇಸ್: ಬೊಲಿವಿಯ 1, ಆಫ್ ಶೋರ್ ಬ್ರೀಜ್ 2, ಬ್ಯೂಟಿಯಸ್ ಮ್ಯಾಕ್ಸಿಮಸ್ 4

ಉತ್ತಮ ಬೆಟ್: ಬೊಲಿವಿಯ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7